₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 03.02.2025 ಸಂಪುಟ: 10 ಸಂಚಿಕೆ: 21 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ತೆರಿಗೆ ಕಡಿತ ಮೋದಿ ಸರಕಾರದ ದಿಟ್ಟ ಕ್ರಮ

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸಂದರ್ಶನ

→ 8

ಪುಟ ತೆರೆದಂತೆ...

ಬಿಜೆಪಿಯ ಚಾಣಾಕ್ಷ ಅಮಿತ್ ಶಾ ಆಟವನ್ನು ಬಲ್ಲವರಾರು?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ದೂರಕೆ ಹಕ್ಕಿಯು ಹಾರುತಿದೆ, ನೋಡಿದಿರಾ?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ದಾರಿದೀಪೋಕ್ತಿ

ನಾವು ಹೇಳಿದ ಸಂಗತಿಯೇ ಸರಿ ಎಂದು ವಾದ ಮಾಡುವುದಕ್ಕಿಂತ, ಸುಮ್ಮನಿರುವುದು ಅಥವಾ ಬೇರೆಯವರ ವಾದವನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ನೀವು ವಾದದಲ್ಲಿ ಸೋತರೂ ನಿಮಗೆ ಏನೂ ಆಗುವುದಿಲ್ಲ. ಗೆದ್ದರೆ ಕೆಲವೊಮ್ಮೆ ಸ್ನೇಹಿತರನ್ನು ಕಳೆದುಕೊಳ್ಳಬೇಕಾಗುತ್ತದೆ.

ವಕ್ರತುಂಡೋಕ್ತಿ

'ನಗುವೇ ದಿವ್ಯ ಔಷಧ' ಎಂದು ಭಾವಿಸುವುದರಲ್ಲಿ ತಪ್ಪೇನಿಲ್ಲ. ಆದರೂ ನಮಗೆ ಅನಾರೋಗ್ಯವಾದಾಗ ವೈದ್ಯರನ್ನು ಸಂಪರ್ಕಿಸಬೇಕು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕರ್ನಾಟಕದ 17ಗಣ್ಯರಿಗೆ ಒಮಾನ್ ದೇಶದ ರಾಜಧಾನಿ ಮಸ್ಕತ್‌ನಲ್ಲಿ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಯನ್ನು ಲಿಂಗಾಯತ ಪಂಚಮಸಾಲಿ ಕೂಡಲಸಂಗಮ ಮಹಾಪೀಠದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ, ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್, ಮಸ್ಕತ್ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಟಿ.ಡಿ.ಪ್ರಸಾದ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಪ್ರದಾನ ಮಾಡಿದರು.

ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಸುಗ್ರೀವಾಜ್ಞೆ ಬೆನ್ನಲ್ಲೇ ಕಾನೂನು ತಿದ್ದುಪಡಿಗೆ ಸಿದ್ಧತೆ

ಲೇವಾದೇವಿಗಾರರಿಗೂ ಮೂಗುದಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಸುಗ್ರೀವಾಜ್ಞೆ ಮೂಲಕ ಕಡಿವಾಣ ಹಾಕುವ ಜತೆಜತೆಗೆ ಇದೀಗ ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿದಾರರ ವಿರುದ್ಧವೂ ಕಠಿಣ ಕ್ರಮಕ್ಕೆ ರಾಜ್ಯ ಸರಕಾರ ಸಿದ್ಧತೆ ನಡೆಸಿದೆ.

ಮೀಟರ್ ಬಡ್ಡಿ ಹಾಗೂ ಹೆಚ್ಚುವರಿ ಬಡ್ಡಿ ವಿಧಿಸುವ ಲೇವಾದೇವಿದಾರರ ವಿರುದ್ಧ ರಾಜ್ಯದ ಹಲವು ಭಾಗಗಳಲ್ಲಿ ದೂರುಗಳು ಕೇಳಿಬಂದಿವೆ. ಆದ್ದರಿಂದ ಇದೀಗ ಈ ರೀತಿಯ ಕಿರುಕುಳ ತಪ್ಪಿಸಲು ಸಹಕಾರ ಇಲಾಖೆಯಲ್ಲಿರುವ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಖಡಕ್ ಎಚ್ಚರಿಕೆ ನೀಡಲು ಸಹಕಾರ ಇಲಾಖೆ ತೀರ್ಮಾನಿಸಿದೆ. ಮುಂದಿನ ಅಧಿವೇಶನದಲ್ಲಿ ಈ ತಿದ್ದುಪಡಿ ವಿಧೇಯಕವನ್ನು ಮಂಡಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಈಗಾಗಲೇ ಮಿತಿಮೀರಿ ಬಡ್ಡಿ ವಿಧಿಸುವ ಲೇವಾದೇವಿಗಾರರು, ಪಾನ್ ಬ್ರೋಕರ್ಸ್ ಸೇರಿ ಇತರ ಸಹಕಾರ ಸಂಘಗಳ ಮೇಲೆ ನಿಯಂತ್ರಣ ಹೇರಲು 'ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯಿದೆ-2024' ಜಾರಿಯಲ್ಲಿದೆ. ಆದರೆ ಈಗ ಗರಿಷ್ಠ ಮೂರು ವರ್ಷ ಶಿಕ್ಷೆ ಪ್ರಮಾಣ ಇದೆ. ಇದೀಗ ಈ ಕಾಯಿದೆಗೆ ತಿದ್ದುಪಡಿ ತಂದು ಗರಿಷ್ಠ 10 ವರ್ಷಗಳವರೆಗೆ ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಸಿದ್ಧತೆ ನಡೆದಿದೆ. ಶಿಕ್ಷೆಯ ಜತೆಗೆ ಒಂದು ಲಕ್ಷಕ್ಕೂ ಅಧಿಕ ದಂಡ ವಿಧಿಸುವ ನಿಟ್ಟಿನಲ್ಲಿ ಚಿಂತನೆ ನಡೆದಿದೆ.

ಈಗಾಗಲೇ ಈ ಸಂಬಂಧ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಮುಂಬರುವ ಅಧಿವೇಶನದಲ್ಲಿ 'ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ಮಸೂದೆ' ಮಂಡನೆ ಮಾಡಲು ತಯಾರಿ ನಡೆದಿದೆ. ಆ ಮೂಲಕ ಅಧಿಕ ಬಡ್ಡಿ ವಿಧಿಸುವವರ ಮೇಲೆ ಕಠಿಣ ಕಾನೂನು ಜಾರಿ ಮಾಡಲು ಸಹಕಾರ ಇಲಾಖೆ ತೀರ್ಮಾನಿಸಿದೆ.

ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯಿದೆ-2004ಕ್ಕೆ ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ. ಈಗ ಗರಿಷ್ಠ 3 ವರ್ಷ ಶಿಕ್ಷೆ ವಿಧಿಸಬಹುದು. ಅದನ್ನು ಗರಿಷ್ಠ 10 ವರ್ಷಕ್ಕೆ ವಿಸ್ತರಿಸಲು ತಿದ್ದುಪಡಿ ತರಲು ಈಗಾಗಲೇ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೇನೆ. ಅಧಿಕಾರಿಗಳು ತಿದ್ದುಪಡಿ ಸಂಬಂಧ ಸಿದ್ಧತೆ ನಡೆಸುತ್ತಿದ್ದಾರೆ. ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲು ಯೋಚಿಸಿದ್ದೇವೆ.
- ಕೆ.ಎನ್. ರಾಜಣ್ಣ, ಸಹಕಾರ ಸಚಿವ

- ಮಿತಿ ಮೀರಿದ ಬಡ್ಡಿಗೆ ಮೂರರಿಂದ ಹತ್ತು ವರ್ಷಕ್ಕೆ ಜೈಲು ಶಿಕ್ಷೆ ಹೆಚ್ಚಳ
- ಮಂದಿನ ಅಧಿವೇಶನದಲ್ಲೇ ತಿದ್ದುಪಡಿ ವಿಧೇಯಕ ಮಂಡಿಸುವ ಸಾಧ್ಯತೆ

ರಾಜಕೀಯ ಕಾರಣಕ್ಕೆ ಸುಗ್ರೀವಾಜ್ಞೆ?: ಈ ಬಗ್ಗೆ ಮಾತನಾಡಿರುವ ಸಚಿವ ಕೆ.ಎನ್.ರಾಜಣ್ಣ, ಇರುವ ಕಾನೂನಿನಲ್ಲಿಯೇ ಮೈಕ್ರೋ ಫೈನಾನ್ಸ್ ಕಿರುಕುಳ ನಿಯಂತ್ರಿಸಬಹುದು. ಆದರೆ ಅದನ್ನೇಕೆ ಜಾರಿಗೆ ತರುತ್ತಿಲ್ಲ ಎನ್ನುವುದು ಯಕ್ಷ ಪ್ರಶ್ನೆ. ನಮ್ಮಲ್ಲೇ ಕಠಿಣ ಕಾನೂನಿದೆ. ಐಪಿಸಿ, ಸಿಆರ್‌ಪಿಸಿ, ಮನಿ ಲಾಂಡ್ರಿಂಗ್ ಕಾಯಿದೆ ಇವೆ. ಅದನ್ನೇ ಜಾರಿ ಮಾಡಿದರೆ ಸಾಕು. ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡರೆ, ಅದಕ್ಕೆ ಪ್ರೇರೇಪಣೆ ನೀಡಿದ ಆರೋಪದಲ್ಲಿ ಪ್ರಕರಣ ದಾಖಲಿಸಬಹುದು. ಇದನ್ನು ಅಧಿಕಾರಿಗಳು ಏಕೆ ಪ್ರಯೋಗಿಸುತ್ತಿಲ್ಲ? ಎಂದು ಪ್ರಶ್ನಿಸಿದರು.

ತುಮಕೂರಿನ ಕುರಂಕೋಟೆಯಲ್ಲಿ ಒಂದು ಕೇಸ್ ಆಗಿತ್ತು. ಸುಮೊಟೋ ಕೇಸ್ ಹಾಕಿದ್ದಾರೆ. ಈ ರೀತಿ ಯಾಕೆ ಬೇರೆಡೆ ಮಾಡುತ್ತಿಲ್ಲ? ನಮಗಿರುವ ಕಾನೂನನ್ನು ಸರಿಯಾಗಿ ಜಾರಿ ಮಾಡಬೇಕು. ಇರುವ ಕಾನೂನು ಜಾರಿ ಮಾಡಿ, ಬಳಿಕ ಸುಗ್ರೀವಾಜ್ಞೆ ತರಬೇಕು. ನಾವು ಈಗ ಸುಮ್ಮನೆ ರಾಜಕೀಯವಾಗಿ ಸಾರ್ವಜನಿಕರಿಗೆ ಸಂದೇಶ ರವಾನಿಸಲು ಏನೋ ಒಂದು ಸುಗ್ರೀವಾಜ್ಞೆ ಮಾಡಿದ್ದೇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗಿನ ಕಾಯ್ದೆಯ ಅಂಶವೇನು?

ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಕಾಯಿದೆಯಲ್ಲಿ ಸದ್ಯ ಅತಿಹೆಚ್ಚು ಬಡ್ಡಿ ವಿಧಿಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಆದರೂ ನಿರೀಕ್ಷಿತ ಕಡಿವಾಣ ಬಿದ್ದಿಲ್ಲ. ಆದ್ದರಿಂದ ಇರುವ ಕಾಯಿದೆಗೆ ಇನ್ನಷ್ಟು ಶಕ್ತಿ ತುಂಬಲು ಸಹಕಾರ ಇಲಾಖೆ ಚಿಂತನೆ ನಡೆಸಿದೆ. ಹಾಲಿಯಿರುವ ಕಾಯಿದೆಯಲ್ಲಿ ಮಿತಿಮೀರಿ ಬಡ್ಡಿ ವಿಧಿಸುವುದಕ್ಕೆ ಕಡಿವಾಣ ಮತ್ತು ಲೇವಾದೇವಿದಾರರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಅನುವು ಮಾಡುತ್ತದೆ. ಇದರೊಂದಿಗೆ ಸಾಲ ವಸೂಲಿಗೆ ಕಿರುಕುಳ ನೀಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಂಶಗಳನ್ನು ಹೊಂದಿದೆ. ಹಾಲಿ ಕಾಯ್ದೆಯಲ್ಲಿ ಕಾನೂನು ಉಲ್ಲಂಘಿಸುವ ಅಥವಾ ಯಾವುದೇ ಸಾಲದ ವಸೂಲಿ ಗಾಗಿ ಸಾಲಗಾರನನ್ನು ಪೀಡಿಸುವ ಅಥವಾ ಪೀಡಿಸುವುದಕ್ಕಾಗಿ ಪ್ರೇರೇಪಿಸಿದ ವ್ಯಕ್ತಿಗೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 30 ಸಾವಿರವರೆಗೆ ವಿಸ್ತರಿಸಬಹುದಾದ ದಂಡ ವಿಧಿಸುವ ಅವಕಾಶ ಇದೆ. ಇದನ್ನು 10 ವರ್ಷಕ್ಕೆ ಏರಿಸಲು ಈಗ ಚಿಂತನೆ ನಡೆಸಲಾಗಿದೆ.

ಅಂಡರ್-19 ಮಹಿಳಾ ಟ್ವೆಂಟಿ-20 ವಿಶ್ವಕಪ್ ಟೂರ್ನಿ

2ನೇ ಸಲ ಭಾರತಕ್ಕೆ ಚಾಂಪಿಯನ್ ಪಟ್ಟ

ಕ್ವಾಲಾಲಂಪುರ: ಐಸಿಸಿ 19 ವರ್ಷದೊಳಗಿನ ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಸತತ 2ನೇ ಬಾರಿಗೆ ಭಾರತ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಹಾಲಿ ಚಾಂಪಿಯನ್ ಭಾರತ ತಂಡವು ಇಂದು ನಡೆದ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 9 ವಿಕೆಟ್ ಅಂತರದ ಭರ್ಜರಿ ಜಯ ದಾಖಲಿಸಿತು. 83 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಭಾರತ 11.2 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ಭಾರತ ತಂಡವನ್ನು ಕರ್ನಾಟಕದ ಆಟಗಾರ್ತಿ ನಿಕಿ ಪ್ರಸಾದ್ ಮುನ್ನಡೆಸಿದ್ದರು. ಈಗ ಸ್ಮರಣೀಯ ಟ್ರೋಫಿ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ ದಕ್ಷಿಣ ಆಫ್ರಿಕಾ, 20 ಓವರ್‌ಗಳಲ್ಲಿ 82 ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತದ ಪರ ತೃಷಾ ಗೊಂಗಡಿ ಮೂರು ಮತ್ತು ವೈಷ್ಣವಿ ಶರ್ಮಾ, ಆಯುಷಿ ಶುಕ್ಲಾ ಮತ್ತು ಪಾರುಣಿಕ ಸಿಸೋಡಿಯಾ ತಲಾ ಎರಡು ವಿಕೆಟ್‌ಗಳನ್ನು ಗಳಿಸಿದರು.

ಬಳಿಕ ಸುಲಭ ಗುರಿ ಬೆನ್ನಟ್ಟಿದ ಭಾರತಕ್ಕೆ ಆರಂಭದಲ್ಲೇ ಜಿ.ಕಮಲಿನಿ (9) ವಿಕೆಟ್ ನಷ್ಟವಾಯಿತು. ಆದರೆ ಸನಿಕ ಚಾಲ್ಕೆ ಜೊತೆ ಸೇರಿಕೊಂಡ ತೃಷಾ ತಂಡವನ್ನು ಗೆಲುವಿನ ದಡ ಸೇರಿಸಿದರು. ಬ್ಯಾಟಿಂಗ್ ನಲ್ಲೂ ಮಿಂಚಿದ ತೃಷಾ 33 ಎಸೆತಗಳಲ್ಲಿ 44 ರನ್ (8 ಬೌಂಡರಿ) ಗಳಿಸಿ ಔಟಾಗದೆ ಉಳಿದರು. ಅವರಿಗೆ ತಕ್ಕ ಸಾಥ್ ನೀಡಿದ ಸನಿಕ ಚಾಲ್ಕೆ ಅಜೇಯ 26 ರನ್ ಗಳಿಸಿದರು. ಒಂದೂ ಪಂದ್ಯದಲ್ಲೂ ಸೋಲು ಕಾಣದೇ ಭಾರತ ಕಿರೀಟ ಜಯಿಸಿದೆ. ದಕ್ಷಿಣ ಆಫ್ರಿಕಾ ಇದೇ ಮೊದಲ ಬಾರಿಗೆ ಫೈನಲ್‌ಗೆ ಪ್ರವೇಶಿಸಿತ್ತು.

ಸ್ಕೋರ್
ದ.ಆಫ್ರಿಕಾ 20 ಓವರ್ 82 ರನ್‌ಗೆ ಆಲೌಟ್
ಭಾರತ 11,2 ಓವರ್‌ಗಳಲ್ಲಿ 1 ವಿಕೆಟ್‌ಗೆ 83 ರನ್

18 ಪಾಕಿಸ್ತಾನ ಸೈನಿಕರು ಸಾವು

ಇಸ್ಲಾಮಾಬಾದ್: ಬಲೂಚಿಸ್ತಾನದ ವಾಯುವ್ಯ ಪ್ರದೇಶದಲ್ಲಿ ಪ್ರತ್ಯೇಕತಾವಾದಿ ಬಂಡುಕೋರರೊಂದಿಗಿನ ಸಂಘರ್ಷದಲ್ಲಿ ಪಾಕಿಸ್ತಾನದ 18 ಸೈನಿಕರು ಸಾವಿಗೀಡಾಗಿದ್ದರೆ, 23 ಬಂಡುಕೋರರೂ ಹತರಾಗಿದ್ದಾರೆ.

ಕಾಲ್ತುಳಿತ: ತನಿಖೆ ಚುರುಕು

ಲಖನೌ: ಜ.29ರಂದು ಪ್ರಯಾಗರಾಜ್‌ನಲ್ಲಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿ ದ್ದಾರೆ. ದುರಂತ ಸಂಭವಿಸಿದ್ದ ದಿನ ಸಕ್ರಿಯ ವಾಗಿದ್ದ 16 ಸಾವಿರಾರು ಮೊಬೈಲ್ ಫೋನ್ ಸಂಖ್ಯೆಗಳ ಡೇಟಾವನ್ನು ಪೊಲೀಸರ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಪರಿಶೀಲನೆ ನಡೆಸುತ್ತಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಕೇಂದ್ರ ಬಜೆಟ್ 2025
ಕಾರಾಗೃಹಗಳಿಗೆ 300 ಕೋಟಿ ರೂ. ಅನುದಾನ

ಸಿಎಂ ಆಸ್ಪತ್ರೆಗೆ ದಾಖಲು

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರಿಗೆ ಎಡಗಾಲಿನಲ್ಲಿ ತೀವ್ರ ಪ್ರಮಾಣದ ನೋವು ಕಾಣಿಸಿಕೊಂಡಿರುವುದರಿಂದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದು, ಮುಂದಿನ ಎರಡು ದಿನಗಳ ಎಲ್ಲ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ. ತಪಾಸಣೆ ನಡೆಸಿದ ವೈದ್ಯರು ಈ ಹಿಂದೆ ಲಿಗಮೆಂಟ್ ಶಸ್ತ್ರಚಿಕಿತ್ಸೆ ನಡೆದ ಜಾಗದ ಮೇಲೆ ಒತ್ತಡ ಬಿದ್ದಿರುವುದರಿಂದ ನೋವು ಕಾಣಿಸಿಕೊಂಡಿದೆ. ಉಳಿದಂತೆ ಯಾವುದೇ ಸಮಸ್ಯೆ ಇಲ್ಲ ಎಂದು ತಿಳಿಸಿದ್ದಾರೆ. ಆದರೆ ಎರಡು ದಿನ ಎಲ್ಲಿಯೂ ಪ್ರಯಾಣ ಮಾಡದೆ ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಿದ್ದಾರೆ.

ಬ್ರಿಗೇಡ್ ಉದ್ಘಾಟನೆ ನಾಳೆ

ವಿಜಯಪುರ: ಕ್ರಾಂತಿವೀರ ಬ್ರಿಗೇಡ್ ಉದ್ಘಾಟನೆ ಫೆ.4ರಂದು ಬಸವನ ಬಾಗೇವಾಡಿಯಲ್ಲಿ ನಡೆಯಲಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು. ನಾಡಿನ 1008 ಸಾಧು, ಸಂತರ ಪಾದಪೂಜೆ ಮೂಲಕ ಬ್ರಿಗೇಡ್ ಉದ್ಘಾಟನೆ ನೆರವೇರಲಿದೆ. 1008 ಜನ ಮಹಿಳೆಯರ ಪೂರ್ಣಕುಂಭ ಮೆರವಣಿಗೆ ಇರಲಿದೆ. 50 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ. ಬ್ರಿಗೇಡ್ ಉದ್ಘಾಟನಾ ಕಾರ್ಯಕ್ರಮಕ್ಕೆ ಯಾವುದೇ ರಾಜಕೀಯ ನಾಯಕರು ಬಂದರೂ ಸ್ವಾಗತ ಮಾಡುತ್ತೇವೆ. ಬ್ರಿಗೇಡ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ ಎಂದರು.

ಸೋನಿಯಾ ವಿರುದ್ಧ ದೂರು

ಪಟನಾ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ವಿರುದ್ಧ ಆಕ್ಷೇಪಾರ್ಹ (ಬಡಪಾಯಿ ಮಹಿಳೆ) ಪದ ಬಳಸಿದ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ವಿರುದ್ಧ ಬಿಹಾರದ ಮುಜಾಫರ್‌ಪುರ ನ್ಯಾಯಾಲಯದಲ್ಲಿ ವಕೀಲ ಸುಧೀರ್ ಓಜಾ ಎಂಬುವವರು ದೂರು ಸಲ್ಲಿಸಿದ್ದಾರೆ. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ, ಅವರನ್ನೂ ಆರೋಪಿಗಳಾಗಿಸಬೇಕೆಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿ ಸ್ವೀಕರಿಸಿರುವ ನ್ಯಾಯಾಲಯ, ಫೆ.10ರಂದು ಅರ್ಜಿ ವಿಚಾರಣೆ ನಡೆಸುವುದಾಗಿ ಹೇಳಿದೆ.

ಯಾರನ್ನೂ ಹೆದರಿಸುತ್ತಿಲ್ಲ

ಕಲಬುರಗಿ: ನಾನು ರಾಜೀನಾಮೆಯನ್ನು ಸುಮ್ಮನೆ ಹುಚ್ಚನಂತೆ ನೀಡಿಲ್ಲ. ಹಲವು ಸಮಸ್ಯೆಗಳಿದ್ದವು ಹಾಗೂ ಕ್ಷೇತ್ರಕ್ಕೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿಲ್ಲ ಎನ್ನುವ ಕಾರಣಕ್ಕೆ ನನ್ನ ಸ್ಥಾನವನ್ನು ತೊರೆದಿದ್ದೇನೆ. ಈ ವಿಷಯದಲ್ಲಿ ನನ್ನ ನಿಲುವು ಸ್ಪಷ್ಟವಾಗಿದೆ ಎಂದು ಶಾಸಕ ಬಿ.ಆರ್.ಪಾಟೀಲ್ ಹೇಳಿದ್ದಾರೆ. ನಾನು ಸಚಿವ ಸ್ಥಾನದ ಆಸೆಯಿಂದ ಅಥವಾ ಇನ್ಯಾರಿಗೋ ಬ್ಲ್ಯಾಕ್‌ಮೇಲ್ ಮಾಡಬೇಕು ಎನ್ನುವ ಕಾರಣಕ್ಕೆ ರಾಜೀನಾಮೆ ನೀಡಿಲ್ಲ. ಅಷ್ಟು ಕೀಳುಮಟ್ಟದ ರಾಜಕಾರಣವನ್ನು ಎಂದಿಗೂ ನಾನು ಮಾಡುವುದಿಲ್ಲ ಎಂದರು.

ರಾಜ್ಯಾದ್ಯಂತ 3 ವರ್ಷಗಳಲ್ಲಿ 33,621 ಬಾಲ್ಯ ವಿವಾಹ | ಬೆಂಗಳೂರಲ್ಲೇ 4324 ಪ್ರಕರಣ

ಬಾಲ್ಯ ವಿವಾಹ; ರಾಜಧಾನಿಗೆ ಕುಖ್ಯಾತಿ

ಎಲ್ಲೆಲ್ಲಿ ಎಷ್ಟೆಷ್ಟು ಪ್ರಕರಣ?
(3 ವರ್ಷಗಳ ಅಂಕಿ ಅಂಶ)

ಬೆಂಗಳೂರು	4,324
ವಿಜಯನಗರ	2,468
ಬಳ್ಳಾರಿ	2,283
ಬೆಳಗಾವಿ	2,224
ಮೈಸೂರು	1,930

ವರ್ಷ	ಪ್ರಕರಣ
2021-22	11,792
2022-23	13,198
2023-24	8,631

ಅಪರ್ಣಾ ಎ.ಎಸ್. ಬೆಂಗಳೂರು

ಓದುತ್ತಾ, ಆಡುತ್ತಾ ನಲಿಯುತ್ತಿರಬೇಕಾದ ವಯಸ್ಸಿನ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವ ಮೂಲಕ ಅರಳಿ ನಲಿಯಬೇಕಾದ ವಯಸ್ಸಿನಲ್ಲೇ ಬಾಡಿಹೋಗಲು ಕಾರಣವಾಗುತ್ತಿರುವ ಬಾಲ್ಯ ವಿವಾಹದ ಪ್ರಕರಣಗಳು ರಾಜ್ಯದಲ್ಲಿ ಇನ್ನೂ ದಾಖಲಾಗುತ್ತಲೇ ಇವೆ. ಅದರಲ್ಲಿಯೂ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿಯೇ ಇಂತಹ ಪ್ರಕರಣಗಳು ಹೆಚ್ಚು ದಾಖಲಾಗುತ್ತಿವೆ.

ಕಳೆದ ಮೂರು ವರ್ಷಗಳಲ್ಲಿ ಬಾಲ್ಯ ವಿವಾಹ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದ್ದು, ರಾಜ್ಯಾದ್ಯಂತ ಬರೋಬ್ಬರಿ 33,621 ಪ್ರಕರಣಗಳು ದಾಖಲಾಗಿವೆ. 2021-22 ಮತ್ತು 2023-24ರ ನಡುವೆ ಅತಿ ಹೆಚ್ಚು ಬಾಲ್ಯ ವಿವಾಹಗಳು ನಡೆದಿವೆ. ದಶಕದ ಅಂಕಿ ಅಂಶಗಳನ್ನು ಗಮನಿಸಿದರೆ ಕಳೆದ ಮೂರು ವರ್ಷಗಳಲ್ಲಿ ಹೆಚ್ಚು ಬಾಲ್ಯ ವಿವಾಹಗಳಾಗಿವೆ. ಬೆಂಗಳೂರಿನಲ್ಲಿ 4,324 ಬಾಲ್ಯ ವಿವಾಹಗಳು ನಡೆದಿವೆ. ನಂತರದ ಸ್ಥಾನದಲ್ಲಿ ವಿಜಯನಗರ (2,468), ಬಳ್ಳಾರಿ (2,283), ಬೆಳಗಾವಿ (2,224) ಮತ್ತು ಮೈಸೂರು (1,930) ಇವೆ.

ಬಾಲ್ಯ ವಿವಾಹಕ್ಕೆ ಕಾರಣಗಳೇನು: ಹೆಣ್ಣು ಹೆತ್ತವರು ಬಹಳ ಬೇಗ ಜವಾಬ್ದಾರಿ ಕಳೆದು ಕೊಳ್ಳುವ ಉದ್ದೇಶದಿಂದ ಹಾಗೂ ಹೆಣ್ಣು ಮಕ್ಕಳು ಹಾದಿ ತಪ್ಪಿದರೆ ಎಂಬ ಭೀತಿಯಿಂದ ಪ್ರಾಪ್ತ ವಯಸ್ಸಿಗೆ ಬರುವ ಮುನ್ನವೇ ವಿವಾಹ ಮಾಡಲಾಗುತ್ತಿದೆ. ಆರ್ಥಿಕ ಸಂಕಷ್ಟ, ಸಾಲದ ಕಾರಣಕ್ಕೆ ಹದಿನೈದು-ಹದಿನಾರು ವರ್ಷದ ಬಾಲಕಿಯರನ್ನು 35-37 ವರ್ಷದ ವರನಿಗೆ ಕೊಟ್ಟು ಮದುವೆ ಮಾಡುತ್ತಿರುವ ಸಂಗತಿಗಳೂ ಬೆಳಕಿಗೆ ಬಂದಿವೆ. ಇಂದಿನ ಬದಲಾದ ಆಹಾರ ಪದ್ಧತಿಯಿಂದಾಗಿ ಹೆಣ್ಣು ಮಕ್ಕಳು ಬಹಳ ಬೇಗ ಋತುಮತಿಯಾಗುತ್ತಿದ್ದು, ಆಕೆ ವಾಸಿಸುತ್ತಿರುವ ಪರಿಸರದ ಸುತ್ತ ಆಗಿರುವ ಬದಲಾವಣೆಗಳು, ಪೋಷಕರು ಹೆಣ್ಣು ಮಕ್ಕಳ ಮೇಲೆ ಹೆಚ್ಚು ಕಾಳಜಿ ವಹಿಸದೆ ನಿಯಂತ್ರಣ ಕಳೆದುಕೊಂಡಿರುವುದು ಹೀಗೆ ಹಲವಾರು ಕಾರಣಗಳಿಂದ ಬಾಲ್ಯ ವಿವಾಹಗಳು ನಡೆಯುತ್ತಿವೆ.

ಕಠಿಣ ಕಾನೂನಿದ್ದರೂ ಭಯವಿಲ್ಲ: ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯಿಂದ ಬಾಲ್ಯ ವಿವಾಹ ತಡೆಗಟ್ಟುವಿಕೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಪೊಲೀಸ್ ಇಲಾಖೆ ಪೋಕ್ಸೊ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗುತ್ತಿದ್ದರೂ ಬಾಲ್ಯ ವಿವಾಹಗಳು ನಿರಂತರವಾಗಿವೆ. ಗ್ರಾಮ ಪಂಚಾಯಿತಿಗಳ ಮೂಲಕ ಬಾಲ್ಯ ವಿವಾಹ ನಿಷೇಧ ಮತ್ತು ಅದರಿಂದಾಗುತ್ತಿರುವ ಪರಿಣಾಮ, ಸಹಾಯವಾಣಿ ಸಂಖ್ಯೆ ಸೇರಿದಂತೆ ಹಲವು ರೀತಿಯ ಕ್ರಮ ಕೈಗೊಳ್ಳಲಾಗುತ್ತಿದ್ದರೂ ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ತಡೆಗಟ್ಟುವಲ್ಲಿ ಸಾಧ್ಯವಾಗುತ್ತಿಲ್ಲ. ಕುಟುಂಬದ ಅಸ್ಥಿರತೆ ಮತ್ತು ಸಮಗ್ರ ಲೈಂಗಿಕ ಶಿಕ್ಷಣದ ಕೊರತೆಯಿಂದಾಗಿ ಬಾಲ್ಯ ವಿವಾಗಳು ಹೆಚ್ಚಾಗಲು ಒಂದು ಕಾರಣ ಎನ್ನಲಾಗಿದೆ.

ಬಾಲ್ಯ ವಿವಾಹವನ್ನು ತಡೆಗಟ್ಟುವಲ್ಲಿ ರಾಜ್ಯ ಸರಕಾರ ಹಲವು ಕ್ರಮ ಕೈಗೊಂಡಿದ್ದರೂ ಬಡತನ, ಪೋಷಕರ ನಿರ್ಲಕ್ಷ್ಯ, ಸಾಮಾಜಿಕ ಪರಿಸ್ಥಿತಿ ಹಾಗೂ ಅಭದ್ರತೆ ಸೇರಿದಂತೆ ಹಲವು ಕಾರಣಗಳಿಂದಾಗಿ ನಡೆಯುತ್ತಿವೆ.

→ 4

ಕಳೆದ ವರ್ಷ ರಾಜ್ಯಕ್ಕೆ 46,932.72 ಕೋಟಿ ರು. | ಪ್ರಸಕ್ತ ಸಾಲಿನಲ್ಲಿ 51,876 ಕೋಟಿ ರು. ಹಂಚಿಕೆ

ಶೇ.10ರಷ್ಟು ತೆರಿಗೆ ಹಂಚಿಕೆ ಏರಿಕೆ ಆದರೂ ಸಿಗದ ನಿರೀಕ್ಷಿತ ಅನುದಾನ

ಬೆಂಗಳೂರು: 2025-26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕದ ಹೆಚ್ಚಿನ ಯೋಜನೆಗಳಿಗೆ ಅನುದಾನ ನೀಡಿಲ್ಲ ಎನ್ನುವ ಕಾಂಗ್ರೆಸಿಗರ ಆರೋಪದ ನಡು ವೆಯೇ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ.10ರಷ್ಟು ಹೆಚ್ಚುವರಿ ಆದಾಯ ತೆರಿಗೆಯ ಪಾಲು ನೀಡಲಾಗಿದೆ. ಆದರೂ ನೆರೆಯ ರಾಜ್ಯಗಳಿಗೆ ಹೋಲಿಸಿದರೆ, ಈ ಬಾರಿಯೂ ಕಡಿಮೆ ಅನುದಾನ ಹಂಚಿಕೆಯಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

- ಕರ್ನಾಟಕಕ್ಕಿಂತ ತ.ನಾಡು, ಆಂಧ್ರಕ್ಕೆ ಹೆಚ್ಚಿನ ಪಾಲು
- ತಮಿಳುನಾಡಿಗೆ 58,021.50 ಕೋಟಿ ರು. ಹಂಚಿಕೆ
- ಆಂಧ್ರ ಪ್ರದೇಶಕ್ಕೆ 57,566.31 ಕೋಟಿ ರು. ಪಾಲು

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡಿಸುವ ಮೊದಲು ರಾಜ್ಯ ಸರಕಾರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 23 ಯೋಜನೆಗಳಿಗೆ ಸಂಬಂಧಿಸಿದಂತೆ ಸುದೀರ್ಘ ಪತ್ರ ಬರೆದಿದ್ದರು. ಇದಕ್ಕೂ ಮೊದಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬೆಂಗಳೂರು ಕೇಂದ್ರಿತ 90 ಸಾವಿರ ಕೋಟಿ ರು. ಮೌಲ್ಯದ ಯೋಜನೆಗಳನ್ನು ಪ್ರಸ್ತಾಪಿಸಿದ್ದರು. ಆದರೆ ಈ ಬೇಡಿಕೆಯಲ್ಲಿ ಬಹುಪಾಲನ್ನು ಕೇಂದ್ರ ಈಡೇರಿಸಿಲ್ಲ.

ಕಳೆದ ವರ್ಷ 2024-25ನೇ ಸಾಲಿನಲ್ಲಿ ರಾಜ್ಯಕ್ಕೆ ಕೇಂದ್ರ ಸರಕಾರ 46,932.72 ಕೋಟಿ ರು. ತೆರಿಗೆ ಹಂಚಿತ್ತು. ಆದರೆ ಈ ಬಾರಿ 51,876 ಕೋಟಿ ರು.ಗೆ ಹೆಚ್ಚಿಸಿದೆ. ಈ ಮೂಲಕ ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ.10ರಷ್ಟು ಹೆಚ್ಚಳವಾಗಿದೆ. ಇದು ಆದಾಯ ಕೊರತೆ ಎದುರಿಸುತ್ತಿರುವ ರಾಜ್ಯ ಸರಕಾರಕ್ಕೆ ಸ್ವಲ್ಪ ನಿಟ್ಟುಸಿರು ಬಿಡುವ ವಿಚಾರ. ಆದರೆ ಈ ಬಾರಿ ತಮಿಳುನಾಡಿಗೆ 58,021.50 ಕೋಟಿ ರು., ಆಂಧ್ರ ಪ್ರದೇಶಕ್ಕೆ 57,566.31 ಕೋಟಿ ರು. ತೆರಿಗೆ ಹಂಚಲಾಗಿದೆ.

ನಮ್ಮ ಮೆಟ್ರೋಗೆ ಲಾಭ: ಬೆಂಗಳೂರು ಉಪನಗರ ರೈಲು ಯೋಜನೆಗೆ ಬಜೆಟ್‌ನಲ್ಲಿ 350 ಕೋಟಿ ರು. ಅನುದಾನ ಘೋಷಣೆಯಾಗಿದೆ. ಸಬ್ ಅರ್ಬನ್ ರೈಲ್ವೆಗೆ ಕಳೆದ ಬಾರಿಯೂ 350 ಕೋಟಿ ನೀಡಲಾಗಿತ್ತು. ಮೆಟ್ರೋ ಮತ್ತು ಸಾಮೂಹಿಕ ತ್ವರಿತ ಸಂಚಾರಿ ವ್ಯವಸ್ಥೆ ಯೋಜನೆಗಳಿಗೆ 31,106.18 ಕೋಟಿ ಘೋಷಿ ಸಲಾಗಿದೆ. ಇದರ ಲಾಭ ನಮ್ಮ ಮೆಟ್ರೋಗೂ ಆಗಲಿದೆ.

ಮೇಕೆದಾಟು, ಭದ್ರಾ ಯೋಜನೆಗಿಲ್ಲ ಅನುದಾನ

ಈ ಬಾರಿಯ ಬಜೆಟ್‌ನಲ್ಲಿ ಭದ್ರಾ, ಮೇಲ್ದಂಡೆ ಯೋಜನೆ, ಮೇಕೆದಾಟು ಯೋಜನೆ ಸೇರಿದಂತೆ ವಿವಿಧ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಮನವಿ ಸಲ್ಲಿಸಿತ್ತು. ಇದರೊಂದಿಗೆ ಬೆಂಗಳೂರಿನ ಟನೆಲ್, ಔಟರ್ ರಿಂಗ್ ರೋಡ್ ಸೇರಿದಂತೆ ಹಲವು ಮೂಲಸೌಕರ್ಯ ಯೋಜನೆಗಳನ್ನು ಪ್ರಸ್ತಾಪಿಸಲಾಗಿತ್ತು. ಆದರೆ ಇದ್ಯಾವುದಕ್ಕೂ ಕೇಂದ್ರ ಸರಕಾರ ಅನುಮೋದನೆ ನೀಡಿಲ್ಲ.

ಬೆಂಗಳೂರಿನ ಅಭಿವೃದ್ಧಿಗೆ ಗಣನೀಯ ಪಾಲು

ಪ್ರಧಾನ ಮಂತ್ರಿ ಆವಾಸ್ ಯೋಜನೆ 2.0 ನಗರಕ್ಕೆ ಕೇಂದ್ರ ಬಜೆಟ್‌ನಲ್ಲಿ ಒಟ್ಟು 3,500 ಕೋಟಿ ಘೋಷಿಸಲಾಗಿದೆ. ಇದರಲ್ಲಿ ಬೆಂಗಳೂರಲ್ಲೂ ವಸತಿ ಯೋಜನೆಯನ್ನು ಕಲ್ಪಿಸಲಿದೆ. ಇದರ ಜತೆಗೆ ದೇಶಾದ್ಯಂತ ಅಮೃತ ಯೋಜನೆಯಡಿ ಒಟ್ಟು 10,000 ಕೋಟಿ ರು. ಘೋಷಿಸಲಾಗಿದ್ದು, ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೂ ಇದರಲ್ಲಿ ಗಣನೀಯ ಪಾಲು ಸಿಗುವ ನಿರೀಕ್ಷೆ ಇದೆ.

ಅರಬ್ಬರ ನಾಡಲ್ಲಿ ಕರ್ನಾಟಕದ ಸಾಧಕರಿಗೆ ಸನ್ಮಾನ

ಸಿ.ಟಿ.ರವಿ

ಹರತಾಳು ಹಾಲಪ್ಪ

ರಘುಪತಿ ಭಟ್

ದರ್ಶನ್ ಪುಟ್ಟಣ್ಣಯ್ಯ

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜತೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಮೇಲ್ಮೈಸುವ ಪ್ರಯತ್ನದಲ್ಲಿ ಪತ್ರಿಕೆ ಯಶ ಕಂಡಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಆರು ದೇಶಗಳಲ್ಲಿ ನಡೆದ ಯಶಸ್ವಿ ಕಾರ್ಯಕ್ರಮದ ಬಳಿಕ ಇದೀಗ ಒಮಾನ್ ರಾಜಧಾನಿ ಮಸ್ಕತ್‌ನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 17 ಗಣ್ಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ನಾಡಿನ 17 ಸಾಧಕರಿಗೆ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್, ಮಸ್ಕತ್ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಟಿ.ಡಿ.ಪ್ರಸಾದ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿ ನೀಡಿ ಗೌರವಿಸಿದರು.

ಜಿ.ಎಸ್.ಅನಿತ್ ಕುಮಾರ್

ಮಿತ್ರಂಪಾಡಿ ಶ್ರೀ ಜಯರಾಮ್ ರೈ

ರಾಮಪ್ಪ ಕೃಷ್ಣಪ್ಪ ಬಡಿಗೇರ

ಕರುಣಾಕರ್

ಡಾ.ಅಜಯ್ ಎಂ.ಹೆಗಡೆ

ಪೂಜಾ ಆರ್ .ಸವದತ್ತಿ

ರಾಘವೇಂದ್ರ ಕೆ.ಥಾಣೆ

ರವಿ.ಎಚ್. ಸನ್ ಟ್ರಾವೆಲ್ ಲಿಂಕ್

ಸುರೇಶ್ ಭಟ್, ಸ್ನೇಹ ಸಾಗರ ರೆಸಿಡೆನ್ಶಿಯಲ್ ಸ್ಕೂಲ್

ಶೇಖರಪ್ಪ ಮುತ್ತೇನವರ್

ಡಾ.ಶ್ರೀ ಶ್ರುತಿ

ಗುರುರಾಜ್ ಡಿ.ಹೆಗಡೆ, ಮಸ್ಕತ್

ಎಚ್.ಆರ್. ಸುರೇಶ್ ಗೌಡ

17 ಮಂದಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ | ಕರ್ನಾಟಕ ಸಂಘದ ಸಹಯೋಗದಲ್ಲಿ ಏರ್ಪಡಿಸಿದ್ದ ವರ್ಣರಂಜಿತ ಸಮಾರಂಭ

ಮಸ್ಕತ್ತಿನಲ್ಲಿ ಮಸ್ತಕಕ್ಕೆ ಚೈತನ್ಯ ನೀಡಿದ ವಿಶ್ವವಾಣಿ

ಪ್ರತ್ಯಕ್ಷ ವರದಿ ರಾಜು ಅಡಕಳ್ಳಿ

'ಸಪ್ತ ಸಾಗರದಾಚೆ ಎಲ್ಲೋ ಸುಪ್ತ ಸಾಗರ ಕಾದಿದೆ' ಎನ್ನುವಂತೆ ಗ್ಲೋಬಲ್ ಅಚೀವರ್ಸ್ ಸಮ್ಮೇಳನದ ಏಳನೆಯ ವಿಶ್ವಯಾತ್ರ ಕಾರ್ಯಕ್ರಮ ಒಮಾನ್ ದೇಶದ ರಾಜಧಾನಿ ಮಸ್ಕತ್ ನಗರದಲ್ಲಿ ಸಂಪನ್ನಗೊಂಡಿತು.

ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ನೇತೃತ್ವದ ವಿಶೇಷ ನಿಯೋಗವು ಕಳೆದ ಐದು ದಿನಗಳಿಂದ ಒಮಾನ್ ರಾಷ್ಟ್ರದ ವಿವಿಧ ತಾಣಗಳಿಗೆ ಅಧ್ಯಯನ ಪ್ರವಾಸ ಕೈಗೊಂಡಿದಲ್ಲದೇ, ಮಸ್ಕತ್ತಿನ ಕರ್ನಾಟಕ ಸಂಘದ ಸಹಯೋಗದಲ್ಲಿ ಏರ್ಪಡಿಸಿದ್ದ ವರ್ಣರಂಜಿತ ಸಮಾರಂಭದಲ್ಲಿ 17 ಮಂದಿ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಿ ಅವರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಮಾಡಿದ್ದು ವಿಶೇಷವಾಗಿತ್ತು. ಈ ಸಮಾರಂಭವು ಸಾಧಕರ ಸಂಗಮವಾಗಿದಷ್ಟೇ ಅಲ್ಲ, ಕರ್ನಾಟಕ ಸಂಘದ ಸದಸ್ಯರ ಸಾಂಸ್ಕೃತಿಕ ಪ್ರದರ್ಶನಗಳ ಸಂಗಮವಾಗಿಯೂ ಗಮನ ಸೆಳೆಯಿತು. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾ ಪೀಠದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಯವರು ವಹಿಸಿದ್ದರು. ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಈ ಅಂತಾರಾಷ್ಟ್ರೀಯ ಸಮ್ಮಿಲನವನ್ನು ಉದ್ಘಾಟಿಸಿದರು. ವಿಶ್ವೇಶ್ವರ ಭಟ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಡಿ.ಟಿ.ಪ್ರಸಾದ್ ಮತ್ತು ಒಮಾನ್ ದೇಶದ ವಿವಿಧ ಗಣ್ಯರು ,ಕೈಗಾರಿಕೋದ್ಯಮಿಗಳು ಹಾಗೂ ಅನಿವಾಸಿ ಭಾರತೀಯ ಬಂಧುಗಳು ಭಾಗವಹಿಸಿದ್ದರು.

ಗಣ್ಯರಿಂದ ಕಳೆಕಟ್ಟಿದ ಸಮಾರಂಭ: ಮಸ್ಕತ್ತಿನ ಮಿಲೇನಿಯಂ ಗ್ರ್ಯಾಂಡ್ ಪಂಚತಾರಾ ಹೋಟೆಲಿನಲ್ಲಿ ಬೆಳಗಿನ ತುಂತುರು ಮಳೆಯ ಸಿಂಚನದ ತಂಪಿನಲ್ಲಿ ಭಾರತ ಮತ್ತು ಒಮಾನ್ ರಾಷ್ಟ್ರಗೀತೆಗಳೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು , ಕಲಾವಿದೆ ತೀರ್ಥ ಕಟೀಲ್ ಅವರ ಪ್ರಾರ್ಥನಾ ನೃತ್ಯದೊಂದಿಗೆ ಸಾಂಸ್ಕೃತಿಕ ಕಹಳೆ ಮೊಳಗಿಸಿದ್ದು ಅರ್ಥಪೂರ್ಣವಾಗಿತ್ತು. ವಿಶ್ವವಾಣಿ ಬಳಗದ ನಾಗಾರ್ಜುನ ಅವರು ಸ್ವಾಗತ ಕೋರಿದರು. ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ ಅವರು ವಂದನಾರ್ಪಣೆ ಮಾಡಿದರು. ಮಸ್ಕತ್ತಿನಲ್ಲಿ ನೆಲೆಸಿರುವ ಮೌನ ಪೊನ್ನಪ್ಪ ಮತ್ತು ರೀನಾ ಕೃಷ್ಣಪ್ಪ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಅನುಪಮಾ ಪ್ರಸಾದ್ ಅವರು ಪ್ರಾರ್ಥನಾ ಗೀತೆ ಹಾಡಿ ಕಾರ್ಯಕ್ರಮಕ್ಕೆ ಕಳೆಕಟ್ಟಿದರು. ಸಮಾರಂಭದಲ್ಲಿ ಕರ್ನಾಟಕ ಸಂಘದ ಅಧಿಕಾರಿಗಳು ಹಾಗೂ ಅನಿವಾಸಿ ಭಾರತೀಯ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದು ವಿಶೇಷವಾಗಿತ್ತು. ಕಾಂಗ್ರೆಸ್ ಮುಖಂಡ ವೆಂಕಟೇಶ್ ಹೆಗಡೆ ಹೊಸಬಾಳೆ, ಹಿರಿಯ ಪತ್ರಕರ್ತ ರಾಜು ಅಡಕಳ್ಳಿ, ಯುವ ಮುಖಂಡ ಸುರೇಶ್ ಹೆಗಡೆ ಹಲಗೇರಿ, ಮಾಧ್ಯಮ ತಜ್ಞೆ ದಿವ್ಯಾ ರಂಗೇನಹಳ್ಳಿ, ಯುವ ಉದ್ಯಮಿ ಸಿದ್ದೇಶ್ ಹಾರನಹಳ್ಳಿ ಪಾಲ್ಗೊಂಡಿದ್ದರು. ಅಲ್ಲದೆ, ಮಸ್ಕತ್ತಿನಲ್ಲಿ ನೆಲೆಸಿರುವ ಕರ್ನಾಟಕದ ಖ್ಯಾತ ಉದ್ಯಮಿ ಹಾಗೂ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಟಿ.ಡಿ.ಪ್ರಸಾದ್, ಅನಿವಾಸಿ ಭಾರತೀಯ ಜಿ.ವಿ.ರಾಮಕೃಷ್ಣನ್ ಮತ್ತು ಕವಿತಾ ರಾಮಕೃಷ್ಣನ್, ಲುಲು ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಶಬ್ಬೀರ್, ಉದ್ಯಮಿಗಳಾದ ಅಬ್ದುಲ್ ಲತೀಫ್, ಶೇಖ್ ಸೌದ್ ಹಮೀದ್ ಇಸ್ಸಾ ಅಲ್ತಾಯಿ ಅವರೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಸ್ಕತ್‌ನಲ್ಲಿ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿತು. ಮಸ್ಕತ್ ಕರ್ನಾಟಕ ಸಂಘದ ಅಧ್ಯಕ್ಷ ಎಸ್.ಟಿ.ಡಿ.ಪ್ರಸಾದ್, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಪಂಚಮಸಾಲಿ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಜಿ.ವಿ.ರಾಮಕೃಷ್ಣ, ಲುಲು ಸಂಸ್ಥೆಯ ಶಬ್ಬೀರ್, ಉದ್ಯಮಿಗಳಾದ ಅಬ್ದುಲ್ ಲತೀಫ್, ಶೇಖ್ ಸೌದ್ ಹಮೀದ್ ಇಸ್ಸಾ ಅಲ್ತಾಯಿ ಗಣ್ಯರು ಭಾಗವಹಿಸಿದ್ದರು.

ಪತ್ರಿಕೋದ್ಯಮ ಬದಲಾವಣೆಯ ರಾಯಭಾರಿಯಾಗಲಿ

ಕಾರ್ಯಕ್ರಮದಲ್ಲಿ ಮಾತನಾಡಿದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು, ಪತ್ರಿಕೋದ್ಯಮ ನಿಂತ ನೀರಾಗಬಾರದು. ಬದಲಾವಣೆಯ ರಾಯಭಾರಿಯಂತಿರಬೇಕು ಎಂದು ಅಭಿಪ್ರಾಯಪಟ್ಟರು.

ಕನ್ನಡನಾಡಿನ ಸಾಧಕರನ್ನು ಹೀಗೆ ಬೇರೆ ಬೇರೆ ದೇಶಗಳಲ್ಲಿ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗೌರವಿಸುವ, ಅವರಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ಹೊಸ ಪರಂಪರೆಯನ್ನು ವಿಶ್ವವಾಣಿ ಹುಟ್ಟುಹಾಕಿದೆ. ಈಗಾಗಲೇ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷಿಯಾ, ಮಾರಿಷಸ್, ಮಾಲ್ಡೀವ್ಸ್, ಜಪಾನ್‌ನಲ್ಲಿ ಇಂತಹ ಅರ್ಥಪೂರ್ಣ ಸಮಾರಂಭಗಳನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಿ, ಈಗ ಕರ್ನಾಟಕ ಸಂಘದ ಸಹಭಾಗಿತ್ವದೊಂದಿಗೆ, ಸಂಘದ ಅಧ್ಯಕ್ಷ ಎಸ್.ಡಿ.ಟಿ.ಪ್ರಸಾದ್ ಮತ್ತು ಇತರ ಪದಾಧಿಕಾರಿಗಳ ಸಹಕಾರದೊಂದಿಗೆ ಮಸ್ಕತ್ತಿನಲ್ಲಿಯೂ ಕಾರ್ಯಕ್ರಮ ಏರ್ಪಡಿಸಿದ್ದು ಹೆಮ್ಮೆಯ ಸಂಗತಿ. ಈ ಬಗ್ಗೆ ಮಸ್ಕತ್ತಿನ ಕರ್ನಾಟಕ ಸಂಘಕ್ಕೆ ಹೃತ್ಪೂರ್ವಕ ಧನ್ಯವಾದಗಳು ಎಂದು ಹೇಳಿದರು.

ಫೆಬ್ರವರಿಯಲ್ಲಿ 'ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟ ಪತ್ರಿಕೆ'

ವಿಶ್ವವಾಣಿ ಈಗ ದಶಮಾನೋತ್ಸವ ಸಂಭ್ರಮದ ನಿಮಿತ್ತ ಮುಂದಿನ ತಿಂಗಳು ವಿಶ್ವವಾಣಿ ಬಳಗದಿಂದ 'ಪ್ರವಾಸಿ ಪ್ರಪಂಚ' ಎಂಬ ಪ್ರವಾಸೋದ್ಯಮದ ವಿಶೇಷ ಮಾಹಿತಿ ನೀಡುವ ಪತ್ರಿಕೆಯನ್ನು ಪ್ರಾರಂಭಿಸಲಾಗುವುದು. ವಿಶ್ವವಾಣಿ ಕಳೆದ ಹತ್ತು ವರ್ಷಗಳಲ್ಲಿ ರಾಜ್ಯಾದ್ಯಂತ ಆರು ವೃತ್ತಿಗಳನ್ನು ಪ್ರಾರಂಭಿಸಿ ಸುದ್ದಿ ಸೇವೆ ನೀಡುತ್ತಿದೆ. ಶಿರಸಿಯಿಂದ ಪ್ರಕಟ ವಾಗುತ್ತಿದ್ದ ಲೋಕಧ್ವನಿಯೂ ವಿಶ್ವವಾಣಿ ಬಳಗದಿಂದ ಪ್ರಕಟವಾಗುತ್ತಿದ್ದು, ಈಗ ಇದರ ಗಂಗಾವತಿ ಆವೃತ್ತಿಯನ್ನು ಪ್ರಾರಂಭಿಸಲಾಗಿದೆ.ಲೋಕಧ್ವನಿಯು ಶಿವಮೊಗ್ಗ , ದಾವಣಗೆರೆ ಆವೃತ್ತಿಗಳನ್ನೂ ಪ್ರಾರಂಭಿಸುವ ಸಿದ್ಧತೆ ನಡೆಸಲಾಗಿದೆ ಎಂದು ಹೇಳಿದರು.

ವಿಶ್ವವಾಣಿಯ ಕ್ಲಬ್‌ಹೌಸ್, ಪತ್ರಿಕೋದ್ಯಮದ ಶಿಕ್ಷಣ, ತರಬೇತಿ ನೀಡಲು ಮಾಧ್ಯಮ ವಿದ್ಯಾಪೀಠ, ವಿಶ್ವವಾಣಿ ಟಿವಿಯ ಯುಟ್ಯೂಬ್, ಆನ್‌ಲೈನ್ ಚಾನೆಲ್‌ಗಳು ಹೀಗೆ ಹಲವು ಹೊಸ ಪ್ರಯೋಗ ,ಪ್ರಯತ್ನಗಳನ್ನು ವಿಶ್ವವಾಣಿ ಕೈಗೊಂಡು ಬೆಳೆಯುತ್ತಿದೆ. 185ಕ್ಕೂ ಹೆಚ್ಚು ಮಂದಿಗೆ ಪ್ರತ್ಯಕ್ಷವಾಗಿ ಉದ್ಯೋಗ ನೀಡಿರುವುದು ವಿಶ್ವವಾಣಿ ಬಳಗದ ಸಾಧನೆ. ವಿಶ್ವವಾಣಿ ಪುಸ್ತಕ ಪ್ರಕಾಶನ ಪ್ರಾರಂಭಿಸಿ ಕನ್ನಡ ಪುಸ್ತಕ ಪ್ರಪಂಚದ ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ. ಈ ಎಲ್ಲಾ ನಮ್ಮ ಪ್ರಯತ್ನ ಕೈಗೂಡುವಲ್ಲಿ ಕನ್ನಡ ಓದುಗ ಬಾಂಧವರು ತೋರುತ್ತಿರುವ ಪ್ರೀತಿ ಪ್ರೋತ್ಸಾಹಗಳೇ ನಮಗೆ ಶ್ರೀರಕ್ಷೆಯಾಗಿವೆ.

– **ವಿಶ್ವೇಶ್ವರ ಭಟ್** ವಿಶ್ವವಾಣಿ ಪ್ರಧಾನ ಸಂಪಾದಕ

ಮಗು ಬೆಳೆದಂತೆ ಅಲ್ಪಮಾನವನಾಗುತ್ತಾನೆ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ಮಗು ಜನಿಸುವ ಸಮಯದಲ್ಲಿ ವಿಶ್ವಮಾನನಾಗಿ ಜನಿಸುತ್ತದೆ. ಆದರೆ ಮಗು ಬೆಳೆದಂತೆ ದೊಡ್ಡವನಾದಂತೆ ಅಲ್ಪಮಾನವನಾಗುತ್ತದೆ. ಆದರೆ ವಿಶಾಲ ವ್ಯಕ್ತಿತ್ವ , ಸಹೃದಯತೆ, ಭ್ರಾತೃತ್ವ ಬೆಳೆಸಿಕೊಳ್ಳಲು ವಿಶ್ವವಾ ಣಿಯ ಗ್ಲೋಬಲ್ ಅಚೀವರ್ಸ್ ಸಮ್ಮೇ ಳನದಂತಹ ಸಮಾರಂಭಗಳು ಪ್ರೇರಣೆ ನೀಡುತ್ತವೆ ಎಂದು ಪ್ರಶಂಸಿಸಿದರು. ನಮ್ಮ ಸಾಧ ಕರನ್ನು ಹೊರಗಿನ ಪ್ರಪಂಚಕ್ಕೆ ಪರಿಚಯಿಸುವುದು ಪುಣ್ಯದ ಕೆಲಸ, ಇದರಿಂದ ಸಾಧಕರಿಗೆ ಮತ್ತಷ್ಟು ಸ್ಫೂರ್ತಿ ಬರುವಂತಾಗುತ್ತದೆ. ಈ ಅರ್ಥಪೂರ್ಣ ಕೆಲಸ ಮಾಡುತ್ತಿರುವ ವಿಶ್ವವಾಣಿಗೆ, ವಿಶ್ವೇಶ್ವರ ಭಟ್ಟರಿಗೆ ಅಭಿನಂದನೆಗಳು. ಜಪಾನ್, ಅಮೆರಿಕ ತಂತ್ರಜ್ಞಾನ ದಲ್ಲಿ ನಂಬರ್ ಒನ್ ಆಗಿರಬಹುದು, ಆದರೆ ಭಾರ ತವು ತತ್ವಜ್ಞಾನದಲ್ಲಿ ನಂಬರ್ ಒನ್. ಮದ್ದುಗುಂಡುಗಳಿಗಿಂತಲೂ ಹೆಚ್ಚಿನ ಶಕ್ತಿ ಭಾರತಕ್ಕಿದೆ. ಮನುಷ್ಯನಿಗೆ ರಾಷ್ಟ್ರಧರ್ಮ, ಕೃಷಿ ಧರ್ಮ ಮತ್ತು ಸ್ವಧರ್ಮಗಳು ಬಹುಮುಖ್ಯ. ಮಾಧ್ಯಮಗಳು ಕೂಡ ಇಂಥ ಸೂಕ್ಷ್ಮಗಳನ್ನು ಜನತೆಗೆ ಅರ್ಥ ಮಾಡಿಸಬೇಕು. ಭಾರತ ಬಡರಾಷ್ಟ್ರವಲ್ಲ, ಬಡವರಿಗೂ ಬೆಳಕು ನೀಡುವ ರಾಷ್ಟ್ರ ಈ ಭಾರತ ಎಂದು ಸ್ವಾಮೀಜಿ ಹೆಮ್ಮೆಯಿಂದ ನುಡಿದರು.

ಕಲಾವಿದೆ ತೀರ್ಥ ಕಟೀಲ್ ಪ್ರಾರ್ಥನಾ ನೃತ್ಯ ಎಲ್ಲರನ್ನೂ ಆಕರ್ಷಿಸಿತು.

ಪ್ರಶಸ್ತಿ ಪುರಸ್ಕೃತರು

1. ಸಿ.ಟಿ.ರವಿ
2. ಹರತಾಳು ಹಾಲಪ್ಪ
3. ರಘುಪತಿ ಭಟ್
4. ದರ್ಶನ್ ಪುಟ್ಟಣ್ಣಯ್ಯ
5. ಜಿ.ಎಸ್.ಅನಿತ್ ಕುಮಾರ್
6. ಮಿತ್ರಂಪಾಡಿ ಶ್ರೀ ಜಯರಾಮ್ ರೈ
7. ರಾಮಪ್ಪ ಕೃಷ್ಣಪ್ಪ ಬಡಿಗೇರ
8. ಕರುಣಾಕರ್
9. ಡಾ.ಅಜಯ್ ಎಂ.ಹೆಗಡೆ
10. ಪೂಜಾ ಆರ್ .ಸವದತ್ತಿ
11. ರಾಘವೇಂದ್ರ ಕೆ.ಥಾಣೆ
12. ರವಿ.ಎಚ್. ಸನ್ ಟ್ರಾವೆಲ್ ಲಿಂಕ್
13. ಸುರೇಶ್ ಭಟ್, ಸ್ನೇಹ ಸಾಗರ ರೆಸಿಡೆನ್ಸಿಯಲ್ ಸ್ಕೂಲ್
14. ಶೇಖರಪ್ಪ ಮುತ್ತೇನವರ್
15. ಶ್ರೀಶೃತಿ ಎ.ಹೆಗಡೆ
16. ಗುರುರಾಜ್ ಡಿ.ಹೆಗಡೆ, ಮಸ್ಕತ್
17. ಎಚ್.ಆರ್. ಸುರೇಶ್ ಗೌಡ

ಸಮಾರಂಭದಲ್ಲಿ ಹಾಜರಿದ್ದ ಜಯಮೃತ್ಯುಂಜಯ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ.

ಏಕತಾನತೆಯಿಂದ ಹೊರಬರಲು ಸಹಕಾರಿ

ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಸಚಿವ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ಬಿಜೆಪಿಯಲ್ಲಿ ಇತ್ತೀಚೆಗೆ ನಡೆಯುತ್ತಿರುವ ಆಂತರಿಕ ತಾಕಲಾಟಗಳಿಂದ ನನ್ನ ಮನಸ್ಸಿಗೆ ಬೇಸರವಾಗಿರುವುದು ನಿಜ. ಆದರೆ ವಿಶ್ವವಾಣಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ನನಗೆ ರಾಜಕಾರಣದ ಏಕತಾನತೆಯಿಂದ ಹೊರಬಂದು ಮತ್ತಷ್ಟು ಹೊಸ ಚಿಂತನೆಗಳಿಗೆ ಗ್ರಾಸ ನೀಡಿದೆ ಎಂದು ಹಾಸ್ಯ ಚಟಾಕಿಆರಿಸಿದರು. ವ್ಯಕ್ತಿನಿಷ್ಠೆಗಿಂತಲೂ ಪಕ್ಷನಿಷ್ಠೆಗೆ ಹೆಚ್ಚು ಮಹತ್ವ ನೀಡಬೇಕೆಂಬುದು ನನ್ನ ರಾಜಕೀಯ ಗುರು ಅನಂತಕುಮಾರ್ ಅವರ ಸಂದೇಶವಾಗಿತ್ತು. ಇಂದು ಬಿಜೆಪಿ ಮುಖಂಡರು ಅನಂತಕುಮಾರ ಅವರ ಈ ತತ್ವವನ್ನು ಅನುಸರಿಸಿದ್ದರೆ ಇಷ್ಟೆಲ್ಲಾ ತಾಕಲಾಟಗಳು ಉದ್ಭವಿಸುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಹೆಚ್ಚಿನ ಸಾಧನೆಗೆ ಪ್ರೇರಣೆ: ಮತ್ತೊಬ್ಬ ಪ್ರಶಸ್ತಿ ಪುರಸ್ಕೃತರಾದ ದಾವಣಗೆರೆಯ ಉದ್ಯಮಿ ಅನಿತ್ ಕುಮಾರ್ ಅವರು ಈ ಪ್ರಶಸ್ತಿಯಿಂದ ತಮ್ಮಂಥವರಿಗೆ ಇನ್ನೂ ಹೆಚ್ಚಿನ ಸಾಧನೆ ಕೈಗೊಳ್ಳಲು ಪ್ರೇರಣೆ ಸಿಗುವಂತಾಗಿದೆ. ಜತೆಗೆ ಬೇರೆ ಬೇರೆ ದೇಶಗಳ ವೈಶಿಷ್ಟ್ಯ ಅರಿತುಕೊಳ್ಳಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಸಮಾರಂಭದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರನ್ನು ವಿಶ್ವೇಶ್ವರ ಭಟ್ ಸನ್ಮಾನಿಸಿ ಗೌರವಿಸಿದರು.ಜಯಮೃತ್ಯುಂಜಯ ಸ್ವಾಮೀಜಿ ಇದ್ದರು.

ವೈವಿಧ್ಯಗಳ ಯಾನ

ಸಮುದ್ರಯಾನ, ಸುಮಧುರ ಪ್ರಯಾಣ ಎನ್ನುವಂತೆ ವಿಶಿಷ್ಟವಾಗಿ ವಿಶ್ವವಾಣಿಯ ಒಮಾನ್ ರಾಷ್ಟ್ರದ ಪ್ರವಾಸವನ್ನು ಏರ್ಪಡಿಸಲಾಗಿತ್ತು. ಮಸ್ಕತ್ ನಗರದಲ್ಲಿರುವ ಪುರಾತನ ಶಿವಮಂದಿರ ಗೋಪಾಲಕೃಷ್ಣನ ದೇವಾಲಯಕ್ಕೆ ವಿಶ್ವವಾಣಿಯ ಈ ನಿಯೋಗ ಭೇಟಿ ಕೊಟ್ಟಾಗ, ಅಲ್ಲಿಯ ದೇವಾಲಯಗಳ ಮುಖ್ಯಸ್ಥರೇ ಆಗಮಿಸಿ ವಿಶೇಷ ಪೂಜೆಗಳನ್ನು ಏರ್ಪಡಿಸಿದ್ದು, ತೀರ್ಥ, ಪ್ರಸಾದಗಳ ವ್ಯವಸ್ಥೆ ಮಾಡಿದ್ದು ವಿಶೇಷವಾಗಿತ್ತು. ಮರದ ಕೆತ್ತನೆಗಳಿಂದ ಮಾಡಿದ್ದ ಬೋಟನಲ್ಲಿಯೇ ಸಾಗರಯಾನ ಮಾಡಿದ್ದು, ಸಮುದ್ರ ನಡುವಿನ ದ್ವೀಪದಲ್ಲಿ ಊಟೋಪಚಾರ ವ್ಯವಸ್ಥೆ ಕೈಗೊಂಡಿದ್ದು, ಸಮುದ್ರದಲ್ಲಿ ಸ್ಪೀಡ್ ಬೋಟ್, ವಾಟರ್ ಸ್ಕೂಟರ್, ದೋಣಿವಿಹಾರಗಳಂಥ ಚಟುವಟಿಕೆ ನಡೆಸಿದ್ದು, ಹಿರಿಯ ರಾಜಕೀಯ ಮುಖಂಡರಾದ ಸಿ.ಟಿ.ರವಿ, ಹರತಾಳು ಹಾಲಪ್ಪನವರೂ ಸೇರಿದಂತೆ ವಿವಿಧ ಗಣ್ಯರು ಸಮುದ್ರಯಾನದ ಸಂದರ್ಭದಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಯಕ್ಷಗಾನ ಶೈಲಿಯ ಸಾಂಸ್ಕೃತಿಕ ಅವತರಣಿಕೆಯನ್ನು ಪ್ರಸ್ತುತ ಪಡಿಸಿದ್ದು.... ಈ ನಿಯೋಗದ ಸಾಂಸ್ಕೃತಿಕ ಕ್ರಿಯಾಶೀಲತೆಗೆ ನಿದರ್ಶನವಾಗಿತ್ತು.

ಸ್ವಾಮೀಜಿಯಿಂದ ಶಿವಲಿಂಗ ಪೂಜೆ: ಸಮುದ್ರಯಾನದ ಸಂದರ್ಭದಲ್ಲಿ ಶ್ರೀಜಯಮೃತ್ಯುಂಜಯ ಸ್ವಾಮಿಗಳು ಸಮುದ್ರಸ್ನಾನ ಮಾಡಿ ಶಿವಲಿಂಗಕ್ಕೆ ಪೂಜೆ ಮತ್ತು ಜಲಾಭಿಷೇಕ ನೆರವೇರಿಸಿ, ಭಕ್ತಿ ಭಾವಗಳ ಸಿಂಚನಗೈದರು. ಮಸ್ಕತ್ತಿನ ಹೊರವಲಯದಲ್ಲಿರುವ ಮರುಭೂಮಿಯಲ್ಲಿ ಒಂದುದಿನ ತಂಗಿ ಅಲ್ಲಿಯ ಜನಜೀವನ ಪರಿಸರವನ್ನು ವಿಶ್ವವಾಣಿಯ ನಿಯೋಗವು ಪ್ರತ್ಯಕ್ಷ ಅರಿತುಕೊಂಡಿದ್ದಲ್ಲದೆ ಹಲವು ಸಾಹಸ ಕ್ರೀಡೆಗೆ ಸಾಕ್ಷಿಯಾಯಿತು. ಒಟ್ಟಾರೆ ವಿಶ್ವವಾಣಿಯ ವಿಶ್ವಸಂಘಟನೆ ಹಲವು ಆಕರ್ಷಗಳ ಸಂಗಮವಾಗಿ ಹೊಸ ಸಂಚಲನ ಮೂಡಿಸುವಲ್ಲಿ ಯಶಸ್ವಿಯಾಯಿತು ಎಂಬುದು ಭಾಗವಹಿಸಿದ್ದ ಎಲ್ಲರ ಪ್ರತಿಕ್ರಿಯೆಯಾಗಿತ್ತು.

ವಿಶ್ವೇಶ್ವರ ಭಟ್ಟರು ಕಳೆದ ಮೂರು ದಶಕಗಳಿಂದ ತಮ್ಮ ಹೊಸಹೊಸ ಪ್ರಯೋಗಶೀಲ ಪ್ರಯತ್ನಗಳಿಂದ ಕನ್ನಡ ಪತ್ರಿಕೋದ್ಯಮಕ್ಕೆ ಖದರು ಮೂಡಿಸಿದ್ದಾರೆ. ಪಾಟೀಲ ಪುಟ್ಟಪ್ಪನವರ ಕನಸಿನ ವಿಶ್ವವಾಣಿಯನ್ನು ವಿಶ್ವೇಶ್ವರ ಭಟ್ಟರು ಮುಂದುವರಿಸುತ್ತ ಅಭಿನಂದನಾರ್ಹರಾಗಿದ್ದಾರೆ.

– **ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ,** ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠ

ಕರ್ನಾಟಕದಿಂದ ಬಹುದೂರ ವಿರುವ ಈ ಮಸ್ಕತ್ತಿನಲ್ಲಿ ವಿಶ್ವವಾಣಿ ಈ ಕಾರ್ಯಕ್ರಮ ನಡೆಸುತ್ತಿರುವುದು ಇಲ್ಲಿಯ ಅನಿವಾಸಿ ಕನ್ನಡಿಗರಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಈ ರೀತಿಯ ಚಿಂತನಾಶೀಲ ಚಟುವಟಿಕೆಗಳಿಂದ ಉಭಯ ದೇಶಗಳ ಬಾಂಧವ್ಯ ವೃದ್ಧಿಗೆ, ಸಾಂಸ್ಕೃತಿಕ ವಿನಿಮಯಕ್ಕೆ ಸಹಕಾರಿಯಾಗಿದೆ. ಮಸ್ಕತ್ತಿನಲ್ಲಿ ಆಗಾಗ ಕನ್ನಡ ಭಾಷೆ , ಸಾಹಿತ್ಯ, ಹಬ್ಬ-ಹರಿದಿನಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಸಂಘವು ಆಸಕ್ತಿದಾಯಕ ಸಮಾರಂಭವನ್ನು ಏರ್ಪಡಿಸುತ್ತದೆ. ಮಕ್ಕಳಲ್ಲಿ ಕನ್ನಡ ಕಲಿಕೆಗೂ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ. ಕೃಷಿ, ವೈದ್ಯಕೀಯ, ಶಿಕ್ಷಣ, ಸಮಾಜಸೇವೆ, ರಾಜಕೀಯ, ಕಲೆ ಸಂಸ್ಕೃತಿ, ಕೈಗಾರಿಕೋದ್ಯಮ, ನ್ಯಾಯಾಂಗ, ಸರಕಾರಿ ಸೇವೆ, ಅನಿವಾಸಿಗಳ ಸೇವೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಅನುಪಮ ಕೊಡುಗೆ ಕೊಟ್ಟ 17 ಸಾಧಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಅವರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

– **ಎಸ್.ಡಿ.ಟಿ. ಪ್ರಸಾದ್,** ಕರ್ನಾಟಕ ಸಂಘದ ಅಧ್ಯಕ್ಷ

ಮಸ್ಕತ್‌ನಲ್ಲಿ ನಡೆದ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಕಾರ್ಯಕ್ರಮದಲ್ಲಿ ಹಾಜರಿದ್ದ ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ಉದ್ಯಮಿ ಎಸ್.ಟಿ.ಡಿ. ಪ್ರಸಾದ್ , ಮಸ್ಕತ್‌ನಲ್ಲಿರುವ ಶ್ರೀಧರ್ ಹೆಗಡೆ ಚಿಪಗಿ

ಗಂಗಾಸ್ನಾನದ ವಿಶೇಷ ಅನುಭವ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಸಂಸ್ಕೃತಿ ಬೇರೆ, ಧರ್ಮಗಳು ಬೇರೆ ಇವುಗಳನ್ನು ಸಕಾರಾತ್ಮಕವಾಗಿ ಸರ್ವರಿಗೂ ಗೌರವಿಸಬೇಕು. ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಇತ್ತೀಚೆಗೆ ಭಾಗವಹಿಸಿ, ಗಂಗಾ ನದಿಯಲ್ಲಿ ಸ್ನಾನಮಾಡಿ ಬಂದಿದ್ದು ವಿಶೇಷ ಅನುಭವ. ಇದರಿಂದ ಭಾರತದ ವೈವಿಧ್ಯ ಸಂಸ್ಕೃತಿಯನ್ನು, ಪರಂಪರೆಯನ್ನು ಪ್ರತ್ಯಕ್ಷವಾಗಿ ಅರಿತುಕೊಳ್ಳುವುದು ನನಗೆ ಸಾಧ್ಯವಾಯಿತು ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಕನ್ನಡ ಪುಸ್ತಕಗಳ ಖರೀದಿಗೆ ಉತ್ತೇಜನ

ಅಕ್ಷರಜ್ಞಾನ, ಪುಸ್ತಕ ಓದುವುದು ಮನುಷ್ಯನ ಅನಿವಾರ್ಯ ಅಗತ್ಯಗಳು, ಹೀಗಾಗಿ ವಿಧಾನಸೌಧ ಕೂಡ ಇವುಗಳಿಂದ ದೂರ ಇರಬಾರದು ಎಂಬ ಹಿನ್ನೆಲೆಯಲ್ಲಿ ಮುಂದಿನ ತಿಂಗಳು ವಿಧಾನಸೌಧದಲ್ಲಿ ಪುಸ್ತಕಮೇಳ ಪ್ರಾರಂಭಿಸಿ ಹೊಸ ಪರಂಪರೆಗೆ ನಾಂದಿ ಹಾಡಲಾ ಗುವುದು. ಕನ್ನಡ ಪುಸ್ತಕಗಳ ಖರೀದಿಗೆ ಸ್ಥಳೀಯವಾಗಿ ವಾಚನಾಲ ಯಗಳಿಗೆ ಅನುಕೂಲವಾಗುವಂತೆ ಶಾಸಕರ ನಿಧಿಯಲ್ಲೂ ಪುಸ್ತಕಗಳ ಖರೀದಿಗೆ ಅವಕಾಶ ಮಾಡಿಕೊಡಲಾಗುವುದು. ಕರ್ನಾಟಕದಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮ ಏರ್ಪಡಿಸುವುದೇ ಕಷ್ಟ, ಆದರೆ ವಿದೇಶದಲ್ಲೂ ಹೀಗೆ ಅತ್ಯಂತ ವ್ಯವಸ್ಥಿತವಾಗಿ ಸಮಾರಂಭ ಏರ್ಪಡಿಸಿರುವ ವಿಶ್ವವಾಣಿಗೆ ಅಭಿನಂದನೆಗಳು ಎಂದು ಅಭಿನಂದಿಸಿದರು.

ಮಸ್ಕತ್ತಿನ ಪ್ರವಾಸ ಬೆಣ್ಣೆ ಬಿಸ್ಕತ್ತಿನಂತೆ

ವಿಶಾಲ ಸಮುದ್ರ.... ಮನೆಯಲ್ಲಿ ಜಗುಲಿ ಅಂಗಳಗಳು ಇರುವಂತೆ ಈ ಸಮುದ್ರದ ಅಂಚಿಗೆ ಬಾಲಂಗೋಚಿಗಳಂತಿರುವ ಬೀಚುಗಳು ಎಲ್ಲಿ ನೋಡಿದರಲ್ಲಿ ಜ್ವಾಲಾಮುಖಿಗಳ ಅಪಾರವಾದಂತೆ ಭಾಸವಾಗುವ ಶಿಲಾ ಪರ್ವತಗಳ ಸಾಲು, ಇನ್ನೊಂದೆಡೆ ನಿಗೂಢ ನಿಶ್ಯಬ್ದಗಳ ಮರುಭೂಮಿ..... ಇಂಥ ಆಕರ್ಷಣೆಗಳ ಆಗರವಾಗಿರುವ ಮಸ್ಕತ್ತಿನ ಪ್ರವಾಸವೆಂದರೆ ಅದು ಬೆಣ್ಣೆ ಬಿಸ್ಕತ್ತಿನಂತೆ!. ಇದರ ಸವಿರುಚಿ ಅವಿಸ್ಮರಣೀಯ.

ಸಮಾರಂಭದಲ್ಲಿ ಸಾಧಕರಿಗೆ ಪ್ರದಾನ ಮಾಡಲಾದ ಸ್ಮರಣಿಕೆಗಳು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿಶ್ವವಾಣಿಯ ಸಿಇಒ ಚಿದಾನಂದ ಕಡಲಾಸ್ಕರ್ ಹಾಗೂ ಇತರ ಗಣ್ಯರು.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರನ್ನು ಜಯಮೃತ್ಯುಂಜಯ ಸ್ವಾಮೀಜಿ ಬಸವಣ್ಣನ ಚಿತ್ರ ನೀಡಿ ಸನ್ಮಾನಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಇದ್ದರು.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರಿಂದ ಶೇಖ್ ಸೌದ್ ಹಮೀದ್ ಇಸ್ಸಾ ಅಲ್ತಾಯಿ ಅವರಿಗೆ ಆತ್ಮೀಯ ಅಭಿನಂದನೆ.

ಸಮಾಚಾರ ಸಣ್ಣದಲ್ಲ

ಈಜಲು ಹೋಗಿ ಇಬ್ಬರು ನೀರು ಪಾಲು

ದಾವಣಗೆರೆ: ನಾಲೆಯಲ್ಲಿ ಈಜಲು ಹೋದ ಇಬ್ಬರು ಬಾಲಕರು ನೀರು ಪಾಲಾಗಿರುವ ಘಟನೆ ತಾಲೂಕಿನ ಕುರ್ಕಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಕುರ್ಕಿ ಗ್ರಾಮದ ಪಾಂಡು (16), ತುರ್ಚಘಟ್ಟದ ಗಣೇಶ (16) ನೀರು ಪಾಲಾದವರು. ದಾವಣಗೆರೆಯ ಗುರುಕುಲ ವಸತಿ ಶಾಲೆಯಲ್ಲಿ ಈ ಬಾಲಕರು ಎಸ್ ಎಸ್ ಎಲ್ ಸಿ ಓದುತ್ತಿದ್ದಾರೆ. ಭಾನುವಾರ ಶಾಲೆಗೆ ರಜೆ ಇದ್ದಿದ್ದರಿಂದ ಕಟಿಂಗ್ ಮಾಡಿಸಿಕೊಳ್ಳಲು ಕುರ್ಕಿ ಗ್ರಾಮಕ್ಕೆ ಬಂದ ವೇಳೆ ಭದ್ರಾ ಕಾಲುವೆಯಲ್ಲಿ ಈಜಲು ಇಳಿದಿದ್ದಾರೆ. ಈಜಲು ಬರುತ್ತಿದ್ದ ಪಾಂಡು, ಗಣೇಶ ಮುಳುಗಿ ಏಳುತ್ತಿದ್ದಾಗ ಅವನನ್ನು ರಕ್ಷಣೆ ಮಾಡಲು ಬಂದಿದ್ದಾನೆ. ಈ ಸಂದರ್ಭದಲ್ಲಿ ಇಬ್ಬರೂ ನೀರುಪಾಲಾಗಿದ್ದಾರೆ ಎನ್ನಲಾಗಿದೆ. ಅವರು ಈಜುತ್ತಿದ್ದ ಸಮೀಪ ಗೇಟ್ ಬಳಿ ಪಾಂಡು ಮೃತದೇಹ ಪತ್ತೆಯಾಗಿದೆ. ಗಣೇಶನ ಮೃತದೇಹ ಸಿಕ್ಕಿಲ್ಲ. ಹದಡಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಸ್ಥಳಕ್ಕೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿ ನೀರುಪಾಲಾದ ಬಾಲಕರ ಮೃತದೇಹ ಹೊರ ತೆಗೆಯಲು ಸಹಕರಿಸಿದರು.

ಎರಡು ಗುಂಪುಗಳ ಜಗಳ: ಚಾಕು ಇರಿತ

ಹುಬ್ಬಳ್ಳಿ: ಜನ್ಮದಿನದ ಸಂಭ್ರಮದ ವೇಳೆ ಕ್ಷುಲ್ಲಕ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಮಾತಿಗೆ ಮಾತು ಬೆಳೆದು ಒಬ್ಬನಿಗೆ ಚೂರಿಯಿಂದ ಇರಿದ ಘಟನೆ ಶನಿವಾರ ರಾತ್ರಿ ನವನಗರದಲ್ಲಿ ನಡೆದಿದೆ. ಜೆಬಿ ಉಲ್ಲಾ ಬಳ್ಳಾರಿ ಗಾಯಾಳು. ಸಿರಾಜ್ ಚಾಕುವಿನಿಂದ ಇರಿದ ಆರೋಪಿ. ಗಾಯಗೊಂಡ ವ್ಯಕ್ತಿಯನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ನವನಗರ ಠಾಣೆ ಪೊಲೀಸರು ಆಗಮಿಸಿ ಪರಿಶೀಲಿಸಿದ್ದಾರೆ. ಕಿಮ್ಸ್ ಆಸ್ಪತ್ರೆಗೆ ಡಿಸಿಪಿ ಮಹನಿಂಗ ನಂದಗಾವಿ, ಎಸಿಪಿ ಶಿವಪ್ರಕಾಶ್ ನಾಯ್ಕ ಭೇಟಿ ನೀಡಿ ಘಟನೆ ಬಗ್ಗೆ ಮಾಹಿತಿ ಪಡೆದರು. ಆರೋಪಿಯನ್ನು ಕೆಲವೇ ಗಂಟೆಗಳಲ್ಲಿ ಬಂಧಿಸಿದ್ದು, ಕ್ಷುಲ್ಲಕ ಕಾರಣಕ್ಕೆ ಜಗಳವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣದೊಳಕ್ಕೆ ಕಾರು ನುಗ್ಗಿಸಿದ ಭೂಪ



ಕೋಲಾರ: ಕುಡಿದ ಮತ್ತಿನಲ್ಲಿ ವ್ಯಕ್ತಿಯೊಬ್ಬ ರೈಲ್ವೆ ನಿಲ್ದಾಣದೊಳಕ್ಕೆ ಕಾರು ನುಗ್ಗಿಸಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಜಿಲ್ಲೆಯ ಟೇಕಲ್ ರೈಲ್ವೆ ನಿಲ್ದಾಣದಲ್ಲಿ ತಡರಾತ್ರಿ, ಘಟನೆ ಸಂಭವಿಸಿದೆ. ರೈಲ್ವೆ ಪ್ಲಾಟ್‌ಫಾರ್ಮ್ ಮೇಲಿಂದ ರೈಲ್ವೆ ಹಳಿಗಳ ಮೇಲೆ ಅಪ್ಪಳಿಸಿದೆ. ಪರಿಣಾಮವಾಗಿ ಕಾರು ಮತ್ತು ರೈಲ್ವೆ ಹಳಿಗೆ ಡ್ಯಾಮೇಜ್ ಆಗಿದೆ. ಕಾರು ಮಾಲೀಕ ರಾಕೇಶ್ ಎಂಬಾತ ಕುಡಿದ ಮತ್ತಿನಲ್ಲಿ ಕಾರು ಚಲಾಯಿಸಿ ಈ ಅವಾಂತರ ಸೃಷ್ಟಿಸಿದ್ದಾನೆ. ರೈಲ್ವೆ ಪೊಲೀಸರು ಜೆಸಿಬಿ ಸಹಾಯದಿಂದ ಕಾರು ತೆರವುಗೊಳಿಸಿದ್ದಾರೆ. ಬಂಗಾರಪೇಟೆ ರೈಲ್ವೆ ಪೊಲೀಸರು ಕಾರು ಮಾಲೀಕ ರಾಕೇಶ್‌ನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಬಂಗಾರಪೇಟೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಬಾಲ್ಯ ವಿವಾಹ; ರಾಜಧಾನಿಗೆ ಕುಖ್ಯಾತಿ

← ಮೊದಲಪುಟದಿಂದ

ಹೆಚ್ಚಿನ ಜಾಗೃತಿಗೆ ಯೋಜನೆ: ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಪೋರ್ಟಲ್ ಡೇಟಾ ಮಾಹಿತಿಯಂತೆ ಬಾಲ್ಯ ವಿವಾಹ ಪ್ರಕರಣಗಳು ಏರಿಳಿತವಾಗಿದೆ. 2021-22ರಲ್ಲಿ 11,792 ಬಾಲ್ಯ ವಿವಾಹ ಪ್ರಕರಣಗಳಿದ್ದರೆ, 2022-23ರಲ್ಲಿ 13,198ಕ್ಕೆ ಏರಿಕೆಯಾಗಿದೆ. ನಂತರ 2023-24ರಲ್ಲಿ 8,631ಕ್ಕೆ ಇಳಿಕೆಯಾಗಿದೆ. ವಿವಿಧ ಎನ್‌ಜಿಒಗಳು ಮತ್ತು ಕೆಎಸ್‌ಪಿಸಿಆರ್ ಸಹಯೋಗದೊಂದಿಗೆ 2025-26ನೇ ಶೈಕ್ಷಣಿಕ ವರ್ಷದಲ್ಲಿ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಸರಕಾರ ಯೋಜನೆ ರೂಪಿಸಿದೆ ಎನ್ನಲಾಗಿದೆ.

ಶೆಡ್‌ಗೆ ಆಕಸ್ಮಿಕ ಬೆಂಕಿ

ಕೋಲಾರ: ಸೆಕೆಂಡ್ ಹ್ಯಾಂಡ್ ಗೃಹಪಯೋಗಿ ವಸ್ತುಗಳಿದ್ದ ಶೆಡ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಸುಮಾರು 4 ಲಕ್ಷ ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿರುವ ಘಟನೆ ಕೋಲಾರದ ಕಾರಂಜಿಕಟ್ಟೆಯ ರಾಜಾನಗರದಲ್ಲಿ ನಡೆದಿದೆ. ಅತಾವುಲ್ಲಾ ಎಂಬವರಿಗೆ ಸೇರಿದ ಶೆಡ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಆಕಸ್ಮಿಕ ಬೆಂಕಿಗೆ ಗೃಹಪಯೋಗಿ ವಸ್ತುಗಳು ಸುಟ್ಟು ಭಸ್ಮವಾಗಿದೆ. ಸ್ಥಳಕ್ಕೆ ನಗರಸಭೆ ಅಧ್ಯಕ್ಷೆ ಲಕ್ಷ್ಮೀದೇವಮ್ಮ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಿಐಎನ್: ಯು40109ಕೆಎ1999ಎಸ್‌ಜಿಸಿ025521

ಸಂಖ್ಯೆ:ಅ.ಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಸ.ಕಾ.ಇಂ(ಕಾ)/2024-25/8425-27 ದಿನಾಂಕ: 31.01.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಅರ್ಹ ಬಿಡ್ಡರ್‌ಗಳಿಂದ **ವಿವಿಧ ಸಿವಿಲ್ ಕಾಮಗಾರಿಗಳನ್ನು ಹೂಡಿ ಮತ್ತು ಸೋಮನಹಳ್ಳಿ ವಿಭಾಗದ** ವ್ಯಾಪ್ತಿಯಲ್ಲಿ ನಿರ್ವಹಿಸಲು KPP ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ 03-02-2025 ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್(ವಿದ್ಯುತ್)
ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತ,
ಕ.ವಿ.ಪ್ರ.ನಿ.ನಿ, ಕಛೇರಿ ಸಂಕೀರ್ಣ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು-09.

ಕ್ಷೇತ್ರಕ್ಕೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿಲ್ಲ : ಬಿ.ಆರ್. ಪಾಟೀಲ್

ಹೆದರಿಸಲು ರಾಜೀನಾಮೆ ನೀಡುತ್ತಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಕಲಬುರಗಿ

ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಬಿ.ಆರ್. ಪಾಟೀಲ್ ಇದೀಗ, ಬಹಿರಂಗವಾಗಿ ಅಸಮಧಾನ ಹೊರಹಾಕಿ, ಗ್ಯಾರಂಟಿ ಯೋಜನೆಗಳಿಂದ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ಬರುತ್ತಿಲ್ಲ ಎನ್ನುವ ಆರೋಪ ಮಾಡುವ ಜತೆಜತೆಗೆ ಯಾವುದೇ ಕಾರಣಕ್ಕೂ ತಮ್ಮ ರಾಜೀನಾಮೆಯನ್ನು ಹಿಂಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರಕ್ಕೆ ಅಧಿಕಾರಕ್ಕೆ ಬರುತ್ತಿದ್ದಂತೆ ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಬಿ.ಆರ್. ಪಾಟೀಲ್ ಪಕ್ಷದ ವಿರುದ್ಧ ಅಸಮಾಧಾನ ಹೊರಹಾಕುತ್ತಿದ್ದಂತೆ ಸಿಎಂ ರಾಜಕೀಯ ಸಲಹೆಗಾರ ಸ್ಥಾನ ನೀಡಿ 'ಸಂತೈಸುವ' ಮಾಡಲಾಗಿತ್ತು. ಆದರೆ ಗ್ಯಾರಂಟಿ ಯೋಜನೆಗಳಿಂದ ಅನುದಾನದ ಕೊರತೆ ಬಗ್ಗೆ ಪದೇಪದೆ ಮಾತನಾಡಿದ್ದ ಬಿ.ಆರ್. ಪಾಟೀಲ್ ಶನಿವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದೀಗ ಗ್ಯಾರಂಟಿಗಳ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ರಾಜೀನಾಮೆ ಹುಚ್ಚನಂತೆ ನೀಡಿಲ್ಲ: ಈ ಬಗ್ಗೆ ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ರಾಜೀನಾಮೆಯನ್ನು ಸುಮ್ಮನೆ ಹುಚ್ಚನಂತೆ ನೀಡಿಲ್ಲ. ಹಲವು ಸಮಸ್ಯೆಗಳಿದ್ದವು ಹಾಗೂ ಕ್ಷೇತ್ರಕ್ಕೆ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿಲ್ಲ ಎನ್ನುವ ಕಾರಣಕ್ಕೆ ತಮ್ಮ ಸ್ಥಾನವನ್ನು ತೊರೆದಿದ್ದೇನೆ. ಈ ವಿಷಯದಲ್ಲಿ ನನ್ನ ನಿಲುವು ಸ್ಪಷ್ಟವಾಗಿದೆ. ನಾನು ಸಚಿವ ಸ್ಥಾನದ ಆಸೆಯಿಂದ ಅಥವಾ ಇನ್ಯಾರಿಗೋ ಬ್ಲ್ಯಾಕ್‌ಮೇಲ್ ಮಾಡಬೇಕು ಎನ್ನುವ ಕಾರಣಕ್ಕೆ ರಾಜೀನಾಮೆ ನೀಡಿಲ್ಲ. ಅಷ್ಟು ಕೀಳುಮಟ್ಟದ ರಾಜಕಾರಣವನ್ನು ಎಂದಿಗೂ ನಾನು ಮಾಡುವುದಿಲ್ಲ. ಕ್ಷೇತ್ರದ ಜನರ ಆಶೀರ್ವಾದದಿಂದ ಶಾಸಕನಾಗಿದ್ದೇ ಅದೃಷ್ಟ. ಎಷ್ಟೋ ಜನರಿಗೆ ಆ ಅವಕಾಶವೂ ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನನ್ನನ್ನು ಮನವೊಲಿಸುವ ಅಗತ್ಯವಿಲ್ಲ: ತಮಗೆ ಯಾವುದೇ ಅಸಮಾಧಾನವಿಲ್ಲ. ಅನಗತ್ಯವಾಗಿ ಸುದ್ದಿಗಳು ಸೃಷ್ಟಿಯಾಗುತ್ತಿವೆ. ತಾವು ಏನು ಹೇಳಬೇಕೊ ಅದನ್ನು ಮುಖ್ಯಮಂತ್ರಿಯವರ ಬಳಿ ವಿವರವಾಗಿ ತಿಳಿಸಿದ್ದೇನೆ. ಮೈಸೂರಿನಲ್ಲಿ ಮುಖ್ಯಮಂತ್ರಿಯವರು ಮಾತನಾಡುವ ವೇಳೆ ಬಿ.ಆರ್.ಪಾಟೀಲ್ ಅವರನ್ನು ಕರೆದು ಮಾತನಾಡುವುದಾಗಿ ಹೇಳಿದ್ದಾನೆ. ನಾನು ಕಾದುನೋಡುವೆ. ಮುಖ್ಯಮಂತ್ರಿಯವರು ಕರೆದರೆ ನಾನು ಹೋಗಿ ಮಾತನಾಡುವೆ. ಸಂಸಾರ ಎಂದ ಮೇಲೆ ಸಮಸ್ಯೆಗಳಿರುತ್ತವೆ. ಇನ್ನು ಸರಕಾರ ಎಂದಾಗ ಇರುವುದಿಲ್ಲವೇ?, ನನ್ನನ್ನು ಮನವೊಲಿಸುವ ಅಗತ್ಯವಿಲ್ಲ. ನಮದೇನು ಪಾಕಿಸ್ತಾನ-ಭಾರತದ ಜಗಳವೇ ಎಂದರು.

ಈ ಹಿಂದೆ ಶಾಸಕಾಂಗ ಸಭೆಯಲ್ಲಿ ಸ್ವಾಭಿಮಾನಕ್ಕೆ ಧಕ್ಕೆಯಾದರೆ ರಾಜೀನಾಮೆ ನೀಡುತ್ತೇನೆ ಎಂದಿದ್ದು ನಿಜ. ಅಲ್ಲಿದ್ದರೇನು, ಇಲ್ಲಿದ್ದರೇನು, ಎರಡೂ ಒಂದೇ ಎಂದಿದ್ದೆ. ಸಮಸ್ಯೆಗಳ ಬಗ್ಗೆ ನಾನು ಬಹಿರಂಗವಾಗಿ ಚರ್ಚಿಸಿ ಬ್ಲಾಕ್‌ಮೇಲ್ ಮಾಡಲು ಬಯಸುವುದಿಲ್ಲ. ಮುಖ್ಯಮಂತ್ರಿಯವರ ಜತೆ ಚರ್ಚೆ ನಡೆಸುತ್ತೇನೆ. ರಾಜಕೀಯ ಹಾಗೂ ಆಡಳಿತದಲ್ಲಿ ಸಿದ್ದರಾಮಯ್ಯ ಅವರಿಗೆ ನನಗಿಂತಲೂ ಹೆಚ್ಚಿನ ಅನುಭವವಿದೆ. ನನ್ನ ಸಲಹೆ ಅವರಿಗೆ ಅಗತ್ಯವಿಲ್ಲ.

- ಬಿ.ಆರ್. ಪಾಟೀಲ್, ರಾಜಕೀಯ ಸಲಹೆಗಾರ

ಅನುದಾನ ಸಿಗದಿರುವುದು ಎಲ್ಲರ ಸಮಸ್ಯೆ

ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಘೋಷಿಸಿದ್ದ ಪಂಚಖಾತ್ರಿಯ ಯೋಜನೆಗಳ ಜಾರಿಯಿಂದಾಗಿ ಅಗತ್ಯವಿರುವಷ್ಟು ಅನುದಾನ ಕ್ಷೇತ್ರಕ್ಕೆ ಸಿಗುತ್ತಿಲ್ಲ. ಇದು ಕೇವಲ ನನ್ನೊಬ್ಬನ ಸಮಸ್ಯೆಯಲ್ಲ. ಎಲ್ಲ ಶಾಸಕರು ಇದೇ ರೀತಿಯ ಸಮಸ್ಯೆಗೆ ಸಿಲುಕಿದ್ದಾರೆ. ಈ ಮೊದಲೇ ನಾನು ರಾಜಕೀಯ ಸಲಹೆಗಾರ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದುಕೊಂಡಿದ್ದೆ. ಆದರೆ ಅನರ್ಹತೆಗೆ ಹೆದರಿ ಓಡಿಹೋದ ಎನಿಸಿಕೊಳ್ಳಬಾರದು ಎಂಬ ಕಾರಣಕ್ಕೆ ಸುಮನಿದ್ದೆ. ವಿಧಾನಮಂಡಲದಲ್ಲಿ ಅಂಗೀಕರಿಸಲಾದ ಕಾಯಿದೆಗೆ ರಾಜ್ಯಪಾಲರು ಸಹಿ ಹಾಕಿದ್ದಾರೆ. ಹೀಗಾಗಿ ಲಾಭದಾಯಕ ಹುದ್ದೆಯ ಆರೋಪದಿಂದ ಅನರ್ಹವಾಗುವ ಭಯ ಇಲ್ಲ. ಆದರೂ ಈ ಹುದ್ದೆಯಲ್ಲಿದ್ದು ಏನೂ ಮಾಡಲಾಗುವುದಿಲ್ಲ ಎಂಬ ಕಾರಣಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಬಿ.ಆರ್. ಪಾಟೀಲ್ ಸ್ಪಷ್ಟಪಡಿಸಿದರು.

ಸಾಲದ ಕಂತು ತೀರಿಸದ ಸ್ನೇಹಿತನ ಕೃತ್ಯಕ್ಕೆ ಬಲಿ

ಸ್ನೇಹಿತನಿಗೆ ಸಾಲ ಕೊಡಿಸಿದ ತಪ್ಪಿಗೆ ಆತ್ಮಹತ್ಯೆಗೆ ಶರಣು

ಮೈಸೂರು: ಸ್ನೇಹಿತನಿಗೆ ಸಾಲ ಕೊಡಿಸಿದ್ದ ತಪ್ಪಿಗೆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ತಾಲೂಕು ದಂಡಿಕೆರೆ ಗ್ರಾಮದಲ್ಲಿ ನಡೆದಿದೆ.

ಮೃತನನ್ನು ನಂಜನಗೂಡು ತಾಲೂಕಿನ ಮುಲ್ಲೂಪುರ ಗ್ರಾಮದ ಸಿದ್ದೇಶ್ (40) ಎಂದು ಗುರುತಿಸಲಾಗಿದೆ.

ಮೃತ ಸಿದ್ದೇಶ್ ತನ್ನ ಸ್ನೇಹಿತ ಮಣಿಕಂಠ ಎಂಬಾತನಿಗೆ ಖಾಸಗಿ ಬ್ಯಾಂಕ್‌ನಲ್ಲಿ ಕಾರು, ಜೊತೆಗೆ ತನ್ನ ಹೆಸರಿನಲ್ಲಿ 2 ಲಕ್ಷ ರು. ಸಾಲ ಕೊಡಿಸಿದ್ದರು. ಆತನ ಮಣಿಕಂಠ ಕೇವಲ ಎರಡು ಕಂತು ಕಟ್ಟಿ ಸುಮ್ಮನಾಗಿದ್ದ. ನಂತರ ಬ್ಯಾಂಕ್‌ನವರು ಸಿದ್ದೇಶ್‌ಗೆ ಕರೆಮಾಡಿ ಸಾಲ ತೀರಿಸುವಂತೆ ಒತ್ತಡ ಹೆಚ್ಚಿಸಿದ್ದಾರೆ. ಇದರಿಂದ ಮನನೊಂದ ಸಿದ್ದೇಶ್, ವಿಡಿಯೊ ಮಾಡಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವರುಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾವಿಗೂ ಮುನ್ನ ಮಾಡಿದ ವಿಡಿಯೊದಲ್ಲಿ ಏನಿದೆ?

ನಾನು ಐಸಿಐಸಿ ಬ್ಯಾಂಕ್‌ನಿಂದ ಕಾರು ಲೋನ್ ಮಾಡಿಕೊಟ್ಟಿದ್ದೆ. ಇದರಿಂದ ನನಗೆ, ನನ್ನ ಪತ್ನಿಗೆ ಫೋನ್ ಮಾಡಿ ಸಾಲ ತೀರಿಸುವಂತೆ ಕಿರುಕುಳ ನೀಡಿದ್ದರು. ಆದರೆ ನನಗೆ ಅಂತಾ ಸಾಲ ತೆಗೆದುಕೊಂಡಿರಲಿಲ್ಲ. ಕಳೆದ 5-6 ವರ್ಷಗಳಿಂದ ಮಣಿಕಂಠ ಉಪ್ಪನಹಳ್ಳಿ ನನ್ನ ಸ್ನೇಹಿತ. ವೀರೇಗೌಡನಹುಂಡಿ ಬಳಿ 50 ಸಾವಿರ ರು. ಕುಮಾರ್ ಆಳಗಂಜಿ ಬಳಿ 50 ಸಾವಿರ ರು. ಕೊಡಿಸಿದ್ದೇನೆ. ಸ್ನೇಹಿತ ಟೀ ಅಂಗಡಿ ಇಟ್ಟುಕೊಂಡು ಜೀವನ ನಡೆಸಲಿ ಎಂದು ಸಾಲ ಕೊಡಿಸಿದೆ. ಅವನೂ ಕೂಡ ಉತ್ತಮ ಜೀವನ ನಡೆಸಿದ. ಬಳಿಕ ಕಾರು ಬೇಕು ಎಂದಿದ್ದ. ಅವನ ಸಿಬಿಲ್ ಸ್ಕೋರ್ ಕಡಿಮೆ ಇದ್ದುದರಿಂದ 87 ಸಾವಿರ ರು. ಡೌನ್‌ಪೇಮೆಂಟ್ ಮಾಡಿ ಅವನಿಗೆ ನನ್ನ ಕಡೆಯಿಂದ ಆಲ್ಟೋ ಕಾರು ಕೊಡಿಸಿದೆ. ಕಾರು ನನ್ನ ಹೆಸರಿನಲ್ಲಿದೆ. ಆದರೆ ನಾನು ದಡ್ಡತನದ ಕೆಲಸ ಮಾಡಿದೆ. ಸ್ನೇಹಿತನನ್ನು ನಂಬಿ ನನ್ನ ಹೆಂಡತಿ-ಮಕ್ಕಳನ್ನು ಬೀದಿಗೆ ಬರುವಂತೆ ಮಾಡಿದೆ ಎಂದು ಆತ್ಮಹತ್ಯೆಗೂ ಮುಂಚೆ ಮಾಡಿದ ವಿಡಿಯೊದಲ್ಲಿ ಸಿದ್ದೇಶ್ ತಮ್ಮ ಅಳಲು ತೋಡಿಕೊಂಡಿದ್ದರು.

ಜಾಲತಾಣದಲ್ಲಿ ವಿಡಿಯೊ ವೈರಲ್

ಶುಭವಾಗಲಿ ಬರೆಯಲು ಸಚಿವ ತಂಗಡಗಿ ಪರದಾಟ

ಕಾರಟಗಿ: ಶುಭವಾಗಲಿ ಎಂದು ಬರೆಯಲು ಸಚಿವ ಶಿವರಾಜ ತಂಗಡಗಿ ಪರದಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿದೆ.

ಕಾರಟಗಿಯ ಅಂಗನವಾಡಿ ಕೇಂದ್ರದಲ್ಲಿನ ಬ್ಲ್ಯಾಕ್‌ಬೋರ್ಡ್ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಪರದಾಡಿದ್ದಾರೆ. ಕಟ್ಟಡ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಸಚಿವ ಶಿವರಾಜ ತಂಗಡಗಿ, ಅಧಿಕಾರಿಗಳು ಮತ್ತು ಮಕ್ಕಳ ಎದುರಲ್ಲಿ ಕಪ್ಪುಹಲಗೆ ಮೇಲೆ ಶುಭವಾಗಲಿ ಎಂದು ಬರೆಯಲು ಹೋಗಿ ತಪ್ಪಾಗಿ ಬರೆದು ಪೇಚಿಗೆ ಸಿಲುಕಿದ್ದಾರೆ. ಮೊದಲು ಶಬವಾಗಲಿ ಎಂದು ಬರೆದಿದ್ದಾರೆ. ಇದನ್ನು ಗಮನಿಸಿದ ಅಧಿಕಾರಿಗಳು, ಸಾರ್, 'ಶುಭ' ಎಂದಿದ್ದಾರೆ. ಎಚ್ಚೆತ್ತ ಸಚಿವರು, ಕೂಡಲೇ ಸರಿಮಾಡಿಕೊಂಡಿದ್ದಾರೆ. ಈ ಎಲ್ಲ ಪ್ರಹಸನದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ಬಿಜೆಪಿಗರು ಹಾಗೂ ಮಾಜಿ ಶಾಸಕ ಬಸವರಾಜ ಧಡೆಸುಗೂರ ಬೆಂಬಲಿಗರು ಟ್ರೋಲ್ ಮಾಡುತ್ತಿದ್ದಾರೆ. ವಿದ್ಯಾ ಮಂತ್ರಿ ಮಧು ಬಂಗಾರಪ್ಪ ಅವರಿಗೆ ಸರಿಯಾಗಿ ಕನ್ನಡ ಓದಲು ಬರೋದಿಲ್ಲ ಎಂಬ ವಿಚಾರ ಈ ಹಿಂದೆ ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಸಚಿವ ಶಿವರಾಜ ತಂಗಡಗಿ ಅವರ ಸರದಿ ಎಂಬ ಕಾಮೆಂಟ್ ಜಾಲತಾಣದಲ್ಲಿ ಹರಿದಾಡುತ್ತಿವೆ.

'ಶುಭವಾಗಲಿ' ಎಂದು ಬರೆಯಲು ಸಚಿವ ಶಿವರಾಜ ತಂಗಡಗಿ ಪರದಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿದೆ.

ಡಿಕೆಶಿಯಿಂದ ಬಹಿರಂಗ ಆಹ್ವಾನ, ಕೆಲ ಮುಖಂಡರ ಅಸಮಾಧಾನ

ಆಪರೇಷನ್ ಹಸ್ತಕ್ಕೆ ಜೆಡಿಎಸ್ ಶಾಸಕರು ಸಿದ್ಧ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ಇಷ್ಟು ದಿನ ತೆರೆಮರೆಯಲ್ಲಿ ಗುಸುಗುಸು ಚರ್ಚೆಯಲ್ಲಿದ್ದ ಜೆಡಿಎಸ್ ಶಾಸಕರ ಕಾಂಗ್ರೆಸ್ ಸೇರುವ ವಿಚಾರ ಈಗ ಬಹಿರಂಗವಾಗಿಯೇ ಗರಿಬಿಚ್ಚಿಕೊಳ್ಳುತ್ತಿದೆ.

ಸ್ವತಃ ಜೆಡಿಎಸ್ ವರಿಷ್ಠ ಎಚ್.ಡಿ. ಕುಮಾರಸ್ವಾಮಿ ಅವರೇ ತಮ್ಮ ಪಕ್ಷದ ಶಾಸಕರಿಗೆ ಕಾಂಗ್ರೆಸ್ ಗಾಳ ಹಾಕುತ್ತಿದೆ. ಆಮಿಷ ಒಡ್ಡುತ್ತಿದೆ ಎಂದು ಹಿಂದೆಯೇ ಆಪಾದನೆ ಮಾಡಿದ್ದರು. ಇದನ್ನು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸಾರಾಸಗಟಾಗಿ ತಳ್ಳಿಹಾಕಿದ್ದರು. ಆದರೆ ಈಗ ಬದಲಾದ ಬೆಳವಣಿಗೆಯಂತೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತುಂಬಿದ ಬಹಿರಂಗ ಸಭೆಯಲ್ಲಿ ಜೆಡಿಎಸ್ ಶಾಸಕರಿಗೆ ಕಾಂಗ್ರೆಸ್ ಸೇರುವಂತೆ ಆಹ್ವಾನ ನೀಡಿದ್ದಾರೆ.



ಭಾನುವಾರ ಚನ್ನಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಕೃತಜ್ಞತಾ ಸಮಾರಂಭದಲ್ಲಿ ಜೆಡಿಎಸ್ ವರಿಷ್ಠ ಕೇಂದ್ರ ಸಚಿವ ಕುಮಾರಸ್ವಾಮಿ ಕುಟುಂಬಕ್ಕಾಗಿ ಪಕ್ಷವನ್ನು ಬಲಿ ಕೊಟ್ಟವರು ಎಂದು ಡಿ.ಕೆ.ಶಿವಕುಮಾರ್ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ. ಅಲ್ಲದೆ, ಆ ಪಕ್ಷದಲ್ಲಿ ಇರುವವರು ಇನ್ನು ಉಳಿದಿರುವ ಅವಧಿಯನ್ನು ನಷ್ಟ ಮಾಡಿಕೊಳ್ಳುವುದು ಬೇಡ. ಕಾಂಗ್ರೆಸ್‌ಗೆ ಬಂದುಬಿಡಿ ಎನ್ನುವ ಸಂದೇಶವನ್ನು ಜೆಡಿಎಸ್ ಶಾಸಕರಿಗೆ ನೀಡಿದ್ದಾರೆ. ಇದರೊಂದಿಗೆ ಇಷ್ಟು ದಿನ ತೆರೆಯ ಮರೆಯಲ್ಲಿದ್ದ ಆಪರೇಷನ್ ಹಸ್ತ ವಿಚಾರ ಈಗ ಬಹಿರಂಗ ವೇದಿಕೆಗೆ ಬಂದಂತಾಗಿದೆ. ಅಷ್ಟೇ ಅಲ್ಲದೆ, ಇದು ಕಾಂಗ್ರೆಸ್ ಸೇರಲು ಸಿದ್ಧವಾಗಿ ನಿಂತಿರುವ ಜೆಡಿಎಸ್ ಶಾಸಕರ ಪ್ರಯತ್ನಕ್ಕೆ ಇನ್ನಷ್ಟು ಉತ್ತೇಜನ ನೀಡಿದಂತಾಗಿದೆ. ಅದರಲ್ಲೂ ಜಿ.ಟಿ. ದೇವೇಗೌಡ ಮತ್ತು ಹನೂರು ಶಾಸಕ ಮಂಜುನಾಥ್ ನೇತೃತ್ವದಲ್ಲಿ ನಡೆಯುತ್ತಿರುವ ಆಪರೇಷನ್ ಹಸ್ತ ತಯಾರಿ ಇನ್ನಷ್ಟು ಗರಿಗೆದರಿದಂತಾಗಿದೆ.

ಆದರೆ, ಈ ಬೆಳವಣಿಗೆ ತೀವ್ರಗೊಳ್ಳುತ್ತಿದ್ದಂತೆ ಕಾಂಗ್ರೆಸ್ ಶಾಸಕರ ವಲಯದ ಚಿತ್ರಣವೇ ಬದಲಾಗುತ್ತಿದೆ. ಅಂದರೆ ಜೆಡಿಎಸ್ ಶಾಸಕರನ್ನು ಈಗ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಅಗತ್ಯವಾದರೂ ಏನಿದೆ ಎನ್ನುವ ಪ್ರಶ್ನೆಗಳೊಂದಿಗೆ ಕೆಲವರು ಆಕ್ಷೇಪ ಎತ್ತುತ್ತಿದ್ದಾರೆ ಎನ್ನಲಾಗಿದೆ. ಅಷ್ಟಕ್ಕೂ ಹೆಚ್ಚು ಶಾಸಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ. ಹಾಗಂತ ಅಷ್ಟು ಶಾಸಕರನ್ನು ಪಕ್ಷಕ್ಕೆ ಸೇರಿಸಿಕೊಂಡು ಸರಕಾರ ಮಾಡಬೇಕಾದ ಸಾಧನೆಯಾದರೂ ಏನು ಎಂದು ಕೆಲವು ಶಾಸಕರು ,ಮುಖಂಡರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ ಜೆಡಿಎಸ್ ಶಾಸಕರು ಈಗ ಕಾಂಗ್ರೆಸ್ ಸೇರದೆ ತಮ್ಮ ಅವಧಿಯನ್ನು ಸಾರ್ಥಕ ಗೊಳಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಹಾಗೆಯೇ ಕಾಂಗ್ರೆಸ್ ಆಪರೇಷನ್ ಹಸ್ತ ನಡೆಸುವುದು ಕೂಡ ಅಷ್ಟೇನೂ ಸುಲಭವಲ್ಲ ಎಂದು ಪಕ್ಷದ ಹಿರಿಯ ಮುಖಂಡರು ಹೇಳಿದ್ದಾರೆ.

ನಿಜಕ್ಕೂ ಆಪರೇಷನ್ ಹಸ್ತ ಆಗುತ್ತಾ ?

ರಾಜ್ಯ ಕಾಂಗ್ರೆಸ್ ತನ್ನ 136 ಶಾಸಕರ ಜೊತೆ ಸರಕಾರ ರಚನೆ ಮಾಡಿದ್ದರೂ ಆಪರೇಷನ್ ಹಸ್ತದ ಆಸಕ್ತಿಯಲ್ಲಿದೆ. ಕಾರಣ ಕೇವಲ 18 ಶಾಸಕರನ್ನು ಹೊಂದಿರುವ ಜೆಡಿಎಸ್ ಬಿಜೆಪಿ ಜತೆ ಸೇರಿ ಕಾಂಗ್ರೆಸ್ ಕಾಲೆಳೆಯುವ ಪ್ರಯತ್ನ ನಡೆಸುತ್ತಿದೆ. ಇದಕ್ಕೆ ಪ್ರತಿಯಾಗಿ ಜೆಡಿಎಸ್ ಶಾಸಕರನ್ನು ತನ್ನತ್ತ ಸೆಳೆದು ಪಕ್ಷವನ್ನೇ ಮೂಲೆಗುಂಪು ಮಾಡಬೇಕೆನ್ನುವ ತಂತ್ರ ಕಾಂಗ್ರೆಸ್ ಪಕ್ಷದ್ದಾಗಿದೆ ಎಂದು ತಿಳಿದುಬಂದಿದೆ. ಹೀಗಾಗಿ ಜೆಡಿಎಸ್ ನ 18 ಶಾಸಕರ ಪೈಕಿ 12 ಮಂದಿಯನ್ನು ಸೆಳೆದು ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯವಾಗದಂತೆ ನೋಡಿಕೊಳ್ಳಬೇಕು ಎನ್ನುವುದು ಕಾಂಗ್ರೆಸ್ ತಂತ್ರವಾಗಿದೆ ಎಂದು ಮೂಲಗಳು ತಿಳಿಸಿವೆ.

ಆಪರೇಷನ್ ಗೆ ಯಾರೆಲ್ಲಾ ಸಿದ್ಧ?

ಜೆಡಿಎಸ್ ಶಾಸಕರಾದ ಜಿ ಟಿ ದೇವೇಗೌಡ, ಪುತ್ರ ಹರೀಶ್ ಗೌಡ, ಶಾರದಾ ಪೂರ್ಯಾನಾಯಕ್ , ಕರಿಯಮ್ಮ ನಾಯಕ್, ಸಮೃದ್ಧಿ ಮಂಜುನಾಥ್ ,ವೆಂಕಟಶಿವಾರೆಡ್ಡಿ ,ಹನೂರು ಮಂಜುನಾಥ್, ಸುರೇಶ್‌ಬಾಬು ಸೇರಿದಂತೆ 10ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಸೇರಲು ಸಿದ್ಧರಾಗುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಶಾಸಕರನ್ನು ಕಾಂಗ್ರೆಸ್ ನ ಕೆಲ ಮುಖಂಡರು ಸಂಪರ್ಕಿಸಿದ್ದು ಅವರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷರ ಆಪ್ತಮೂಲಗಳು ಹೇಳಿವೆ.

ಕೆ.ಆರ್.ಪುರಕ್ಕೆ ಮಂಜುನಾಥ್?

ಹನೂರು ಕ್ಷೇತ್ರದ ಜೆಡಿಎಸ್ ಶಾಸಕ ಮಂಜುನಾಥ್ ಬೆಂಗಳೂರಿನ ಕೆಆರ್ ಪುರ ಕ್ಷೇತ್ರದಲ್ಲಿ ರಾಜಕಾರಣ ಮುಂದುವರಿಸಲು ಯತ್ನಿಸಿದ್ದಾರೆ ಎಂದು ತಿಳಿದುಬಂದಿದೆ. ಕಳೆದ ಅವಧಿಯಲ್ಲಿ ಸೋಲು ಅನುಭವಿಸಿದ್ದಾಗಲೂ ಮಂಜುನಾಥ್ ಹನೂರು ಕ್ಷೇತ್ರದಲ್ಲಿ ನೆಲೆಯೂರಿಜನಮನ ಗೆಲ್ಲಲು ಯತ್ನಿಸಿದ್ದರು. ಆದರೆ ಈಗ ಶಾಸಕರಾದ ಮೇಲೆ ಅವರು ಹೆಚ್ಚಿನ ಸಮಯ ಬೆಂಗಳೂರಿನಲ್ಲಿ ಕಳೆಯುತ್ತಿದ್ದು ಹನೂರು ಕ್ಷೇತ್ರದಲ್ಲಿ ವಾರಾಂತ್ಯದ ರಾಜಕಾರಣಿ ಎನಿಸಿಕೊಂಡಿದ್ದಾರೆ. ಅಂದರೆ ಕೇವಲ ಶನಿವಾರ ಮತ್ತು ಭಾನುವಾರ ಮಾತ್ರ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು ಉಳಿದ ಎಲ್ಲ ದಿನ ಬೆಂಗಳೂರಿನಲ್ಲಿ ಇರುತ್ತಾರೆ ಎಂದು ಕ್ಷೇತ್ರದ ಮತದಾರರು ಹೇಳುತ್ತಿದ್ದಾರೆ.

ಜೆಡಿಎಸ್ ಶಾಸಕರಾಗಿದ್ದರೂ ಇವರು ಕಾಂಗ್ರೆಸ್ ಸರಕಾರದಲ್ಲಿ ಹೆಚ್ಚು ಗುರುತಿಸಿಕೊಂಡಿದ್ದು ಇವರು ಬಹುತೇಕ ಕಾಂಗ್ರೆಸ್ ಸೇರುವುದು ಖಚಿತ ಎನ್ನುವ ಚರ್ಚೆಗಳು ನಡೆದಿದೆ. ಆದರೆ ಅವರು ಕಾಂಗ್ರೆಸ್ ಸೇರಿ ಹನೂರು ಕ್ಷೇತ್ರದಲ್ಲಿ ಮುಂದುವರಿದ ಬದಲು ತಮ್ಮ ಮೂಲ ಕರ್ಮಭೂಮಿ, ಬೆಂಗಳೂರಿನ ಕೆಆರ್ ಪುರ ಕ್ಷೇತ್ರದಲ್ಲಿ ರಾಜಕಾರಣ ಮುಂದುವರಿಸಲು ತಯಾರಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹೀಗಾಗಿ ಏಕೆಂದರೆ ಬೈರತಿ ಬಸವರಾಜ್ ಅವರು ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಸೇರಿದ ನಂತರ ಆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಕೊರತೆ ಇದೆ. ಅದನ್ನು ತುಂಬುವ ನಿಟ್ಟಿನಲ್ಲಿ ಮಂಜುನಾಥ್ ಸನ್ನದ್ಧರಾಗಿದ್ದಾರೆ ಎನ್ನಲಾಗಿದೆ.

ಕೋಸ್ಟ್ ಗಾರ್ಡ್‌ನಿಂದ ರೋಮಾಂಚಕ ಅಣಕು ಪ್ರದರ್ಶನ

ಮಂಗಳೂರು: ಕಡಲ ಗಸ್ತು, ಕಡಲಿನಲ್ಲಿ ಅನಾಹುತಗಳ ನಿರ್ವಹಣೆ, ನಾಗರಿಕರ ರಕ್ಷಣೆಯ ಜವಾಬ್ದಾರಿ ಹೊಂದಿರುವ ಕೋಸ್ಟ್ ಗಾರ್ಡ್ ಸಮುದ್ರದ ಮಧ್ಯೆ ತನ್ನ ಕಾರ್ಯಾಚರಣೆಯ ರೋಚಕ ಅಣಕು ಪ್ರದರ್ಶನ ನೀಡಿ ಇಲಾಖೆಯ ಕಾಯ ಕ್ಷಮತೆಯನ್ನು ಸಾಬೀತುಪಡಿಸಿತು.

ರಾಜ್ಯಪಾಲರಿಂದ ಅಣಕು ಪ್ರದರ್ಶನ ಕುರಿತು ಮೆಚ್ಚುಗೆ ; ಭಾರತೀಯ ಕರಾವಳಿ ಕಾವಲು ಪಡೆಯ 49ನೇ ಸ್ಥಾಪನಾ ದಿನದ ಅಂಗವಾಗಿ ಭಾನುವಾರ ಎನ್ ಎಂಪಿಎ ಬಂದರಿನಿಂದ 20 ನಾಟಿಕಲ್ ಮೈಲಿ ದೂರದಲ್ಲಿ ವಿವಿಧ ನೌಕೆಗಳು, ಹೆಲಿಕಾಪ್ಟರ್‌ಗಳನ್ನು ಬಳಸಿ ಕೋಸ್ಟ್ ಗಾರ್ಡ್ ಸಿಬ್ಬಂದಿ ಮಿಂಚಿನ ಮತ್ತು ಮೈನವಿರೇಳಿಸುವ ತಾಲೀಮು ಪ್ರದರ್ಶಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ನೌಕೆಯಲ್ಲಿದ್ದುಕೊಂಡೇ ಕೋಸ್ಟ್ ಗಾರ್ಡ್ ನೂರಾರು ಸಿಬ್ಬಂದಿಯ ಈ ಅಣುಕು ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕಡಲ ಗಸ್ತು ಹಡಗು 'ವರಾಹ', 'ಸಕ್ಷಮ್', ವೇಗದ ಹಡಗುಗಳಾದ ಅಮಾರ್ತ್ಯ, ರಾಜದೂತ್ ಹಾಗೂ ಸಾವಿತ್ರಿಬಾಯಿ ಫುಲೆ, ಎರಡು ಇಂಟರ್‌ಸೆಪ್ಟರ್ ಬೋಟುಗಳು, 'ಚೇತಕ್ ಹೆಲಿಕಾಪ್ಟರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದವು.

ಅಕ್ರಮ ಪ್ರವೇಶ ತಡೆ ಕಾರ್ಯಾಚರಣೆ: ಸಮುದ್ರ ಮಾರ್ಗದ ಮೂಲಕ ಅಕ್ರಮ ಪ್ರವೇಶಕ್ಕೆ ತಡೆ, ಕಡಲುಗಳ್ಳರ ಪತ್ತೆ, ಸಮುದ್ರದಲ್ಲಿ ನಡೆಯುವ ಅವಘಡ ಹಾಗೂ ನಾಗರಿಕರ ರಕ್ಷಣೆಯ ಕ್ಷಿಪ್ರ ಕಾರ್ಯಾ ಚರಣೆಗಳನ್ನು ಕೋಸ್ಟ್ ಗಾರ್ಡ್ ಸಿಬ್ಬಂದಿ ಪ್ರದರ್ಶಿಸಿದರು.

ಭಾರತದ ಸೀಮಾರೇಖೆಯೊಳಗೆ ಅಕ್ರಮವಾಗಿ ಹಡಗು ಪ್ರವೇಶ ಮಾಡಿದಾಗ ಅದನ್ನು ಸುತ್ತುವರಿದು ಎಚ್ಚರಿಕೆಯ ಗುಂಡುಗಳನ್ನು ಹಾರಿಸಿ ವಶಕ್ಕೆ ಪಡೆಯುವ ಕಾರ್ಯಾಚರಣೆ ಆರಂಭದಲ್ಲಿ ನಡೆಯಿತು. ಸಮುದ್ರ ನಡುವೆ ದೋಣಿಗಳು ತೊಂದರೆಗೆ ಸಿಲುಕಿದಾಗ ಕ್ಷಿಪ್ರ ಗತಿಯಲ್ಲಿ ಸಾಗಿ ರಕ್ಷಿಸುವುದು, ಗಸ್ತು ಹಡಗಿನಲ್ಲಿ ರುವ- ಸಿಬ್ಬಂದಿ ಸಹಿತ 'ಲೈಫ್ ರಾಫ್ಟ್'ಗಳನ್ನು ಸಮುದ್ರಕ್ಕಿಳಿಸಿ ರಕ್ಷಣಾ ಕಾರ್ಯಾಚರಣೆ, ಹೆಲಿಕಾಪ್ಟರ್‌ನ ಹಗ್ಗದ ಮೂಲಕ ಸಮುದ್ರಕ್ಕಿಳಿದು ರಕ್ಷಣೆ, ನೌಕಾ ಫಿರಂಗಿಗಳಿಂದ ಗುಂಡು ಹಾರಿಸುವ ದೃಶ್ಯ ರೋಮಾಂಚಕವಾಗಿತ್ತು.

ಬಾಲಕಿ ಆಸ್ಪತ್ರೆಗೆ ದಾಖಲು, ಆರೋಪಿಗಳಿಗಾಗಿ ಶೋಧ

ಬಾಲಕಿ ಮೇಲೆ ಅತ್ಯಾಚಾರ

ಮಂಡ್ಯ: ಎಂಟು ವರ್ಷದ ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ಮೂವರು ದುರುಳರು ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ವರದಿಯಾಗಿದೆ. ಸಂತ್ರಸ್ತ ಬಾಲಕಿಯನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಪರಾರಿಯಾಗಿರುವ ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಮಂಡ್ಯದ ಸೆಂಟ್ರಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಎಂಟು ವರ್ಷದ ಬಾಲಕಿಯನ್ನು ಮೂವರು ದುರುಳರು ಕೇಕ್ ಕೊಡಿಸಿ, ಬಳಿಕ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಚಾಕು ತೋರಿಸಿ ಬೆದರಿಸಿ, ಬಲಾತ್ಕಾರ ಎಸಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

2 ದಿನಗಳ ಹಿಂದೆ ನಡೆದ ಘಟನೆ: ಎರಡು ದಿನಗಳ ಹಿಂದೆ ಘಟನೆ ನಡೆದಿದ್ದು, ಬಾಲಕಿ ಈ ವಿಚಾರ ಮನೆಯಲ್ಲಿ ಹೇಳಿಲ್ಲ. ಹೊಟ್ಟೆನೋವು ಕಡಿಮೆಯಾಗದಿದ್ದಾಗ ಸಂಬಂಧಿಕರು ಬಾಲಕಿಯನ್ನು ವಿಚಾರಿಸಿದ ಮೇಲೆ ಕೃತ್ಯ ಬೆಳಕಿಗೆ ಬಂದಿದೆ. ಅಸ್ವಸ್ಥ ಬಾಲಕಿಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೋಕ್ಸೋ ಕಾಯ್ದೆಯಡಿ ಪ್ರಕರಣದಾಖಲು ಮಾಡಿಕೊಳ್ಳಲಾಗಿದೆ. ಈ ಸಂಬಂಧ ಮಿಮ್ಸ್ ಆಸ್ಪತ್ರೆ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಮಂಡ್ಯದ 8 ವರ್ಷದ ಬಾಲಕಿ ತನ್ನ ಮೇಲಿನ ಲೈಂಗಿಕ ದೌರ್ಜನ್ಯದ ಬಗ್ಗೆ ಸರಿಯಾಗಿ ಹೇಳುತ್ತಿಲ್ಲ. ಕುಟುಂಬದವರು ಮತ್ತು ಬಾಲಕಿ ಹೇಳಿಕೆಯಲ್ಲಿ ವ್ಯತ್ಯಾಸವಿದೆ. ಬಾಲಕಿಗೆ ಕೌನ್ಸಿಲಿಂಗ್ ಅವಶ್ಯಕತೆ ಇದೆ. ಮೂವರು ಹುಡುಗರು ಹಲ್ಲೆ ಮಾಡಿದ್ದಾರೆ ಎಂದು ಮಾತ್ರ ಹೇಳುತ್ತಿದ್ದು, ವೈದ್ಯಕೀಯ ಪರೀಕ್ಷೆ ಕೂಡ ಮಾಡಲಾಗಿದೆ. ತನಿಖೆ ಬಳಿಕ ಏನು ಎಂಬುದು ಗೊತ್ತಾಗಲಿದೆ ಎಂದರು.

ಕೃತಜ್ಞತಾ ಸಮಾವೇಶದಲ್ಲಿ ಡಿಸಿಎಂ | ಬಿಜೆಪಿ- ಜೆಡಿಎಸ್‌ಗೆ ಉತ್ತರಿಸುವ ಅಗತ್ಯವಿಲ್ಲ

ರಾಮನಗರ ಜಿಲ್ಲೆಯ ಚಿತ್ರಣ ಬದಲಿಸುವೆ: ಡಿಕೆಶಿ

ರಾಮನಗರ: ಮತದಾರರು ಈ ಜಿಲ್ಲೆಯಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರನ್ನು ಆಯ್ಕೆ ಮಾಡಿ ಸರಕಾರಕ್ಕೆ ಶಕ್ತಿ ನೀಡಿದ್ದು, ಮುಂದಿನ ಮೂರು ವರ್ಷಗಳಲ್ಲಿ ಎಲ್ಲ ನಾಯಕರು ಸೇರಿ ಚನ್ನಪಟ್ಟಣ ಹಾಗೂ ಇಡೀ ಜಿಲ್ಲೆಯ ಚಿತ್ರಣ ಬದಲಿಸುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ. ಕೆ ಶಿವಕುಮಾರ್ ಘೋಷಿಸಿದ್ದಾರೆ.

ಚನ್ನಪಟ್ಟಣದಲ್ಲಿ ಭಾನುವಾರ ನಡೆದ ಕೃತಜ್ಞತಾ ಸಮಾವೇಶದಲ್ಲಿ ಮಾತನಾಡಿದ ಅವರು, ಚುನಾವಣಾ ಗೆಲುವಿಗೆ ಇದು ಋಣ ತೀರಿಸುವ ಕಾರ್ಯಕ್ರಮ. ಜನತೆ ನಮಗೆ ಕೊಟ್ಟ ಶಕ್ತಿಗೆ ಅಭಿನಂದನೆ ಸಲ್ಲಿಸಲು ಈ ಕಾರ್ಯಕ್ರಮ ಮಾಡಿದ್ದೇವೆ. ಬೆಳಗಾವಿ ಅಧಿವೇಶನದ ಶತಮಾನೋತ್ಸವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು 2 ಬಾರಿ ಮುಂದೂಡಲಾಗಿತ್ತು ಎಂದರು. ಮುಖ್ಯಮಂತ್ರಿಯವರ ಕಾಲಿಗೆ ಪೆಟ್ಟಾಗಿ ದ್ದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ ಎಂದ ಡಿಸಿಎಂ, ಚುನಾವಣೆಯಲ್ಲಿ ಹಗಲು- ರಾತ್ರಿ ಶ್ರಮಿಸಿದ ಎಲ್ಲ ನಾಯಕರು, ಸಚಿವರು ಮತ್ತು ಕಾರ್ಯಕರ್ತರಿಗೆ ಧನ್ಯವಾದ ಸಲ್ಲಿಸು ತ್ತೇನೆ. ನೀವು ಅಭಿವೃದ್ಧಿಗೆ ಮತ ಕೊಟ್ಟಿದ್ದೀರಿ. ಅದನ್ನು ನಾನು ಸಾಕಾರಗೊಳಿಸುತ್ತೇನೆ ಎಂದು ಭರವಸೆ ನೀಡಿದರು.

ರಾಮನಗರದಲ್ಲಿ ಭಾನುವಾರ ನಡೆದ ಕೃತಜ್ಞತಾ ಸಮಾವೇಶವನ್ನು ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ನಾನೂ ಅಭ್ಯರ್ಥಿಯೇ: ಈ ಕ್ಷೇತ್ರದಲ್ಲಿ ಶಾಸಕ ಸ್ಥಾನ ಖಾಲಿಯಾದ ಬಳಿಕ, ನಾನು ಕ್ಷೇತ್ರದ ಪ್ರತಿ ಹೋಬಳಿಗೆ ಬಂದು ಮನೆ ಬಾಗಿಲಿಗೆ ಸರ್ಕಾರವನ್ನು ತಂದು 25 ಸಾವಿರಕ್ಕೂ ಹೆಚ್ಚು ಜನರ ಅರ್ಜಿ ಸ್ವೀಕರಿಸಿದ್ದೇನೆ. 19 ಸಾವಿರಕ್ಕೂ ಹೆಚ್ಚು ಜನ ಮನೆ, ನಿವೇಶನ, ಪಹಣಿ ಇಲ್ಲ ಎಂದು ಅರ್ಜಿ ಸಲ್ಲಿಸಿದ್ದೀರಿ. ಚುನಾವಣೆಗೂ ಮುನ್ನ ಈ ಕ್ಷೇತ್ರ ನನ್ನ ಜವಾಬ್ದಾರಿ ಎಂದು ಮಾತು ಕೊಟ್ಟಿದ್ದೆ. ನಾನು ಈಗಲೂ ಹೇಳುತ್ತೇನೆ. ಇಲ್ಲಿ ಯೋಗೇಶ್ವರ್ ಮಾತ್ರವಲ್ಲ, ನಾನು ಕೂಡ ಕ್ಷೇತ್ರದ ಅಭ್ಯರ್ಥಿಯೇ. ನಾನು, ಯೋಗೇಶ್ವರ್, ಬಾಲಕೃಷ್ಣ, ಇಕ್ಬಾಲ್ ಹುಸೇನ್, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ರವಿ, ರಾಮೋಜಿಗೌಡ ಸೇರಿ ಡಿ. ಕೆ ಸುರೇಶ್ ಸಹಕಾರದಲ್ಲಿ ಜಿಲ್ಲೆಯಲ್ಲಿ ಬದಲಾವಣೆ ತರುತ್ತೇವೆ ಎಂದು ಭರವಸೆ ನೀಡಿದರು.

ಟೀಕಾಕಾರರಿಗೆ ಉತ್ತರಿಸುವ ಅಗತ್ಯವಿಲ್ಲ

ನಾನು 1989ರಿಂದ ಈ ಜಿಲ್ಲೆಯ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮನ್ನು ಟೀಕಿಸಿದವರಿಗೆ ತಕ್ಕ ಉತ್ತರ - ನಾನು ಯಾರನ್ನೂ ಟೀಕಿಸುವ ಅಗತ್ಯವಿಲ್ಲ. ನಮ್ಮನ್ನು ಅಪೂರ್ವ ಸಹೋದರರು ಎಂದವರು, ನಮ್ಮ ಬಗ್ಗೆ ತುಚ್ಛವಾಗಿ ಮಾತನಾಡಿದ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು, ಮಾಜಿ ಸಿಎಂಗಳಾದ ಎಚ್ ಡಿ ಕುಮಾರಸ್ವಾಮಿ, ಬಿ ಎಸ್ ಯಡಿಯೂರಪ್ಪ ಸೇರಿದಂತೆ ಬಿಜೆಪಿ ಹಾಗೂ ದಳದ ಎಲ್ಲ ನಾಯಕರಿಗೆ ಇದು ತಕ್ಕ ಉತ್ತರವಾಗಿದೆ. ನೀವು ಕೇವಲ ಚನ್ನಪಟ್ಟಣಕ್ಕೆ ಮಾತ್ರ ಉತ್ತರ ನೀಡಿಲ್ಲ, ಇಡೀ ದೇಶಕ್ಕೆ ಸಂದೇಶ ರವಾನಿಸಿದ್ದೀರಿ. ನಮ್ಮ ಅಧಿಕಾರ ನಶ್ವರ, ನಾವು ಮಾಡುವ ಸಾಧನೆ ಅಜರಾಮರ, ಮತದಾರರೇ ಈಶ್ವರ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಪ್ರಧಾನಿ ನರೇಂದ್ರ ಮೋದಿಯವರ ಜನಪರ ಸರಕಾರಕ್ಕೂ ಜನವಿರೋಧಿ ಲೂಟಿಕೋರ ರಾಜ್ಯ ಕಾಂಗ್ರೆಸ್ ಸರಕಾರಕ್ಕೂ ಇರುವ ವ್ಯತ್ಯಾಸ ಇಷ್ಟೇ. ಸಿದ್ದರಾಮಯ್ಯ ಸರಕಾರ ಬೆಲೆ ಏರಿಕೆ ಮೂಲಕ ಕನ್ನಡಿಗರ ಆದಾಯಕ್ಕೆ ಕತ್ತರಿ ಹಾಕಿ ಲೂಟಿ ಹೊಡೆಯುತ್ತಿದೆ. ಕೇಂದ್ರ ಸರಕಾರ ಬಡವರ ಆದಾಯ ಉಳಿತಾಯಕ್ಕೆ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಿ ತೆರಿಗೆಯಲ್ಲಿ ಭಾರಿ ವಿನಾಯಿತಿ ನೀಡಿದೆ.

ಸುಂದರ್ ಜಿ.ಕೆ, ಬೆಂಗಳೂರು

ದೇಶದಲ್ಲಿ ಇರುವ ಸಿರಿವಂತರು ಎನಿಸಿದ ಸಂಘಟಿತ ವರ್ಗದ ಸುಮಾರು ಶೇ.4 ಜನರಿಗೆ ಆದಾಯ ತೆರಿಗೆಯಲ್ಲಿ ಬಂಪರ್ ಕೊಡುಗೆ.ಸಿರಿವಂತರಿಗೆ ಇನ್ನೊಂದು ಮನೆ ಖರೀದಿಗೆ ತೆರಿಗೆ ವಿನಾಯಿತಿ. ಬಡವರಿಗೆ , ಮನೆ ಇಲ್ಲದವರಿಗೆ ಏನೂ ಇಲ್ಲ. ಬಡ ಹಿರಿಯ ನಾಗರಿಕರಿಗೆ ಏನೂ ಇಲ್ಲ. ಆದರೂ ಬಜೆಟ್ ಬಗ್ಗೆ ಹೆಗ್ಗಳಿಕೆ. ಬಡವರಿಗೆ ಉಚಿತ, ರಿಯಾಯಿತಿ ನೀಡಿದರೆ ಆಕ್ರೋಶ. ಇದು ಸರಿಯೇ..?

ವಿಶ್ವವಾಣಿ ಕ್ಲಬ್ ಹೌಸ್
03.02.2025
ಕಾರ್ನರ್
ಸಂಜೆ: 06.55 ರಿಂದ 08.05ರವರೆಗೆ

ಸೋಮವಾರ
ಶ್ರೀಮತಿ ಶೋಭಾ ಮಳವಳ್ಳಿ
ವಿಷಯ
ಕುಂಭಮೇಳ 2025
vishwavani.news

1008 ಸ್ವಾಮಿಗಳ ಪಾದಪೂಜೆ | ಒಂದು ಲಕ್ಷ ಜನರು ಸೇರುವ ನಿರೀಕ್ಷೆ | ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪ ಘೋಷಣೆ

ಕ್ರಾಂತಿವೀರ ಬ್ರಿಗೇಡ್ ನಾಳೆ ಉದ್ಘಾಟನೆ

ವಿಜಯಪುರ: ಬಸವನ ಬಾಗೇವಾಡಿಯಲ್ಲಿ ಫೆ.4ರಂದು ಕ್ರಾಂತಿವೀರ ಬ್ರಿಗೇಡ್ ಉದ್ಘಾಟನೆ ನೆರವೇರಲಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೆ.22ರಂದು ಬ್ರಿಗೇಡ್ ಬಗ್ಗೆ ಮೊದಲ ಬಾರಿಗೆ ಸಭೆ ಆಗಿತ್ತು. ಈ ಐದು ತಿಂಗಳಲ್ಲಿ ನಿರೀಕ್ಷೆ ಮೀರಿ ಉತ್ತರ ಕರ್ನಾಟಕದಲ್ಲಿ ಬೆಂಬಲ ಸಿಗುತ್ತಿದೆ. ಫೆ.4ರಂದು 1008 ಸ್ವಾಮಿಗಳ ಪಾದಪೂಜೆ ಮೂಲಕ ಬ್ರಿಗೇಡ್ ಉದ್ಘಾಟನೆಯಾಗಲಿದೆ ಎಂದು ಹೇಳಿದರು.

ಪೂರ್ಣಕುಂಭ ಮೆರವಣಿಗೆ: ಕನ್ನೇರಿ ಮಠ, ಕಾಗಿನೆಲೆ ಸ್ವಾಮೀಜಿಗಳ ಸಮ್ಮುಖದಲ್ಲಿ ಉದ್ಘಾಟನೆ ನಡೆಯಲಿದೆ. 1008 ಮಹಿಳೆಯರ ಪೂರ್ಣಕುಂಭ ಮೆರವಣಿಗೆ ಇರಲಿದೆ.1 ಲಕ್ಷ ಜನರು ಸೇರುವ ನಿರೀಕ್ಷೆ ಇದೆ ಎಂದು ಈಶ್ವರಪ್ಪ ತಿಳಿಸಿದರು.

ಕಾರ್ಯಕ್ರಮಕ್ಕೆ ಎಲ್ಲ ಗುರುಪೀಠಗಳ ಸ್ವಾಮೀಜಿಗಳು ತಾವೇ ಬರುವುದಾಗಿ ಹೇಳುತ್ತಿದ್ದಾರೆ. ಮಠಗಳ ಆರ್ಥಿಕವಾಗಿ ದುಃಸ್ಥಿತಿಯಲ್ಲಿವೆ. ಸ್ವಾಮೀಜಿಗಳು ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ, ಅವರ ಮೇಲಿನ ಭಕ್ತಿ ಜನರಲ್ಲಿ ಕಡಿಮೆಯಾಗಿಲ್ಲ. ಬ್ರಿಗೇಡ್ ವತಿಯಿಂದ ಅರ್ಚಕರಿಗೆ ತರಬೇತಿ ಏರ್ಪಡಿಸಲು ಚಿಂತನೆ ನಡೆಸಲಾಗುತ್ತಿದೆ ಎಂದರು.

ಕ್ರಾಂತಿವೀರ ಬ್ರಿಗೇಡ್ ಉದ್ಘಾಟನೆ ಕುರಿತು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ವಿಜಯಪುರದಲ್ಲಿ ಸುದ್ದಿಗೋಷ್ಠಿ ನಡೆಸಿದರು.

ಕುಂಭಮೇಳದ ಬಗ್ಗೆ ಖರ್ಗೆ ಟೀಕೆ ಸರಿಯಲ್ಲ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಹಾ ಕುಂಭಮೇಳದ ಬಗ್ಗೆ ಮಾತನಾಡಿದ್ದು ನೋವು ತರಿಸಿದೆ. ಸೋನಿಯಾ ಗಾಂಧಿ ಮೆಚ್ಚಿಸಲು ಖರ್ಗೆ ಕುಂಭಮೇಳ ಬಗ್ಗೆ ಟೀಕಿಸಿದ್ದಾರೆ. 144 ವರ್ಷಗಳ ಬಳಿಕ ಬಂದ ಕುಂಭಮೇಳದಲ್ಲಿ ಸ್ನಾನ ಮಾಡಿದರೆ ಬಡವರ ಹೊಟ್ಟೆ ತುಂಬುತ್ತಾ ಎಂದು ಕೇಳುವ ಮೂಲಕ ಅವರು ಹಿಂದುಗಳಿಗೆ ಅಪಮಾನ ಮಾಡಿದ್ದಾರೆ. ಖರ್ಗೆ ಬಾಯಿ ಮುಚ್ಚಿ ಎಂದು ತಮ್ಮ ಪಕ್ಷದವರಿಗೆ ಹೇಳುತ್ತಾರೆ. ಆದರೆ ಕುಂಭಮೇಳದ ವಿಚಾರದಲ್ಲಿ ಖರ್ಗೆ ಬಾಯಿ ಮುಚ್ಚಿಕೊಳ್ಳಬೇಕು ಎಂದು ಕೆ.ಎಸ್.ಈಶ್ವರಪ್ಪ ತಾಕೀತು ಮಾಡಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಸಭಾಪತಿ ಯು.ಟಿ.ಖಾದರ್ ಕುಂಭ ಮೇಳಕ್ಕೆ ಹೋಗಿದ್ದಾರೆ. ಹಾಗಾದರೆ ಅವರನ್ನು ಪಕ್ಷದಿಂದ ಕಿತ್ತುಹಾಕಿ ಎಂದು ಖರ್ಗೆಗೆ ಸವಾಲೆಸೆದ ಈಶ್ವರಪ್ಪ, ಹೀಗೆ ಆದರೆ ಕಷ್ಟವಾಗಲಿದೆ ಎಂದು ಅವರು ಎಚ್ಚರಿಕೆ ನೀಡಿದರು.

> ರೈತರು, ಗೋವುಗಳಿಗೆ ಅನ್ಯಾಯವಾಗುತ್ತಿದೆ. ಶ್ರದ್ಧಾ ಕೇಂದ್ರಗಳಿಗೆ ಆಘಾತವಾಗುತ್ತಿದೆ. ಬ್ರಿಗೇಡ್ ಮೂಲಕ ಮಠ-ಮಂದಿರಗಳು, ಮಹಿಳೆಯರು, ರೈತರಿಗೆ ನ್ಯಾಯ ಕೊಡಿಸಲು ಶ್ರಮಿಸಲಾಗುವುದು. ಈ ಬ್ರಿಗೇಡ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ. ಆದರೆ,ಯಾವುದೇ ರಾಜಕೀಯ ಪಕ್ಷದ ನಾಯಕರು ಬಂದರೂ ಸ್ವಾಗತ ಮಾಡುತ್ತೇವೆ.
>
> **-ಈಶ್ವರಪ್ಪ,** ಮಾಜಿ ಡಿಸಿಎಂ

ರಾಜ್ಯ ರಾಜಕಾರಣ ಗಬ್ಬೆದ್ದು ಹೋಗಿದೆ

ರಾಜ್ಯ ರಾಜಕಾರಣ ಗಬ್ಬೆದ್ದು ಹೋಗಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಲ್ಲ ಪಕ್ಷಗಳು ಹಾಳಾಗಿವೆ. ಪರಿಸ್ಥಿತಿ ಸರಿಪಡಿಸಲು ಆ ಪಕ್ಷಗಳ ಕೇಂದ್ರ ನಾಯಕರು ಏನೂ ಮಾಡುತ್ತಿಲ್ಲ ಎಂದು ಈಶ್ವರಪ್ಪ ಕಿಡಿಕಾರಿದರು. ನಾನು ಜೀವನಪೂರ್ತಿ ಕಳೆದ ಬಿಜೆಪಿಗೆ ಸಿದ್ಧಾಂತವೇ ಇಲ್ಲ ಎಂಬಂತಾಗಿದೆ. ಹಿಂದುತ್ವ ಎಂದು ಹೇಳುತ್ತಿದ್ದ ಪಕ್ಷ ಹಾಳಾಗುತ್ತಿದೆ. ಅದರ ಆಡಳಿತ ಒಂದು ಕುಟುಂಬದ ಕೈಲಿ ಸಿಕ್ಕಿದೆ ಎಂದು ಪರೋಕ್ಷವಾಗಿ ಯಡಿಯೂರಪ್ಪ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದರು.

ಹೊಂದಾಣಿಕೆ ರಾಜಕಾರಣ ಅಲ್ಲವೇ?: ಎಲ್ಲ ಪಕ್ಷಗಳಲ್ಲಿ ಹೊಂದಾಣಿಕೆ ನಡೆದಿದೆ. ವಿಜಯೇಂದ್ರ ಗೆದ್ದಿದ್ದು ನಮ್ಮ ಭಿಕ್ಷೆಯಿಂದ ಎಂದು ಡಿಕೆಶಿಗೆ ಹೇಳಿದ್ದಾರೆ. ವಿಜಯೇಂದ್ರ ವಿರುದ್ಧ ಸೂಕ್ತ ಅಭ್ಯರ್ಥಿ ಹಾಕದೇ ಇರುವ ಕಾರಣ ಗೆದ್ದಿದ್ದು ಎಂದಿದ್ದಾರೆ.

ವರುಣಾದಲ್ಲಿ ನಾನು ಸ್ಪರ್ಧಿಸಿದ್ದರೆ ಸಿದ್ದರಾಮಯ್ಯ ಗೆಲ್ಲುತ್ತಿರಲಿಲ್ಲ ಎಂದು ವಿಜಯೇಂದ್ರ ಹೇಳುತ್ತಾರೆ. ಇದೆಲ್ಲಾ ಹೊಂದಾಣಿಕೆ ಅಲ್ಲವೇ ಎಂದು ಮಾಜಿ ಡಿಸಿಎಂ ಪ್ರಶ್ನಿಸಿದರು.

ಸ್ವಇಚ್ಛೆಯಿಂದ ರಾಜ್ಯ ಸರಕಾರದ ಮುಂದೆ ಶರಣಾಗಿದ್ದೇನೆ

ನಕ್ಸಲ್ ತೊಂಬಟ್ಟು ಲಕ್ಷ್ಮೀ ಶರಣು

ಉಡುಪಿ: ಕಳೆದ 20 ವರ್ಷಗಳ ಹಿಂದಿನಿಂದ ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ಕುಂದಾಪುರ ತಾಲೂಕಿನ ತೊಂಬಟ್ಟುವಿನ ಲಕ್ಷ್ಮೀ ಭಾನುವಾರ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ಶರಣಾದರು.

ಪೊಲೀಸ್ ಭದ್ರತೆಯೊಂದಿಗೆ ಎಸ್ಪಿ ಕಚೇರಿಗೆ ಆಗಮಿಸಿದ ಲಕ್ಷ್ಮೀ ಜತೆ ಅವರ ಸಹೋದರ ವಿಠಲ ಪೂಜಾರಿ ಹಾಗೂ ಸಂಬಂಧಿಕರು ಮತ್ತು ನಕ್ಸಲ್ ಶರಣಾಗತಿ ಹಾಗೂ ಪುನರ್ವಸತಿ ಸಮಿತಿಯ ಸದಸ್ಯರಾದ ಶ್ರೀಪಾಲ ಅವರು ಅಗತ್ಯ ಕಾನೂನು ಪ್ರಕ್ರಿಯೆಗಳನ್ನು ಪೂರೈಸಿ, ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಕ್ಸಲ್ ಶರಣಾಗತಿ ಸಮಿತಿ ಜಿಲ್ಲಾಧ್ಯಕ್ಷೆ ಹಾಗೂ ಜಿಲ್ಲಾಧಿಕಾರಿ ಡಾ. ಕೆ ವಿದ್ಯಾಕುಮಾರಿ ಹಾಗೂ ಜಿಲ್ಲಾ ಸಮಿತಿ ಸಂಚಾಲಕ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ, ಜಿಲ್ಲಾ ಸಮಿತಿ ಸದಸ್ಯ ಹಾಗೂ ಜಿ.ಪಂ ಸಿಇಒ ಪ್ರತೀಕ್ ಬಾಯಲ್ ಅವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶರಣಾಗತರಾದರು.

ಶರಣಾಗತಿ ಪ್ರಕ್ರಿಯೆ ವೇಳೆ ಮಾತನಾಡಿದ ಲಕ್ಷ್ಮೀ, ನಕ್ಸಲ್ ಶರಣಾಗತಿ ಬಗ್ಗೆ ಟಿವಿಗಳಲ್ಲಿ ಸುದ್ದಿ ನೋಡಿ ತಿಳಿದುಕೊಂಡೆ. ಸಿದ್ದರಾಮಯ್ಯನವರು ಒಂದು ಅವಕಾಶ ಕೊಟ್ಟಿದ್ದಾರೆ. ಅದರಂತೆ ಶರಣಾಗಿದ್ದೇನೆ. ಸದ್ಯ ಸ್ವಇಚ್ಛೆಯಿಂದ ಸರಕಾರದ ಮುಂದೆ ಶರಣಾಗಿದ್ದೇನೆಯೇ ಹೊರತು, ನನ್ನ ಮೇಲೆ ಯಾರೂ ಒತ್ತಡ ಹೇರಿಲ್ಲ ಎಂದರು. ನನಗೆ ಸಿದ್ದರಾಮಯ್ಯನವರು ಸಹಾಯ ಮಾಡಬೇಕು. ನಮ್ಮೂರಿಗೆ ರಸ್ತೆ, ನೀರು, ಶಾಲೆ, ಆಸ್ಪತ್ರೆ ಇಲ್ಲ. ಅದನ್ನು ಮಾಡಿಕೊಡಬೇಕು ಎಂದು ಹೇಳಿದರು.

ಶರಣಾಗತಿ ಪ್ರಕ್ರಿಯೆ ಬಳಿಕ ಲಕ್ಷ್ಮೀ ಅವರನ್ನು ಪೊಲೀಸರು ವಶಕ್ಕೆ ಪಡೆದು ಆರೋಗ್ಯ ತಪಾಸಣೆಗೊಳಪಡಿಸಿದರು. ನಂತರ ನ್ಯಾಯಾಲಯಕ್ಕೆ ಕರೆದೊಯ್ದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದಾರೆ.

ಉಡುಪಿ ಜಿಲ್ಲಾಧಿಕಾರಿ ಡಾ.ವಿದ್ಯಾಕುಮಾರಿ ಎದುರು ಶರಣಾದ ನಕ್ಸಲ ತೊಂಬಟ್ಟು ಲಕ್ಷ್ಮೀ.

> ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಪ್ಯಾಕೇಜ್ ನಿಯಮದಂತೆ ಲಕ್ಷ್ಮೀ ಅವರು ಶರಣಾಗಿದ್ದು, ಅವರಿಗೆ ಸೌಲಭ್ಯಗಳನ್ನು ಶೀಘ್ರದಲ್ಲಿ ನೀಡಲಾಗುವುದು. ಮೂರು ಹಂತದಲ್ಲಿ ಪ್ಯಾಕೇಜ್ ಇದ್ದು, ಕೆಟಗರಿ ಎ ವರ್ಗದಡಿ ಶರಣಾಗುತ್ತಿರುವವರಿಗೆ 7.50 ಲಕ್ಷ ರು. ನೀಡಲಾಗುತ್ತಿದೆ.
>
> **-ಡಾ. ಕೆ ವಿದ್ಯಾಕುಮಾರಿ,** ಜಿಲ್ಲಾಧಿಕಾರಿ

> ಲಕ್ಷ್ಮೀ ವಿರುದ್ಧ ಬೈಂದೂರು ತಾಲೂಕಿನ ಅಮಾಸೆಬೈಲು ಠಾಣೆಯಲ್ಲಿ ಮೂರು ಪ್ರಕರಣಗಳಿವೆ. 2007ರಲ್ಲಿ ಗುಂಡಿನ ದಾಳಿ ನಡೆಸಿದ ಪ್ರಕರಣ, ಹಲ್ಲೆ ಮಾಡಿ ಬೆದರಿಕೆ ಹಾಕಿದ ಪ್ರಕರಣ ಹಾಗೂ ಕರಪತ್ರಗಳನ್ನು ಅಂಟಿಸಿದ ಪ್ರಕರಣಗಳಿವೆ.
>
> **-ಡಾ. ಅರುಣ್ ಕೆ ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಫೆಬ್ರವರಿ 10ರ ಒಳಗೆ ಹೈಮಾಂಡ್ ಭೇಟಿ ಸಾಧ್ಯತೆ

ಡಿನ್ನರ್ ಪಾರ್ಟಿ ರದ್ದಿನ ಬಗ್ಗೆಯೂ ಚರ್ಚೆ ನಿರೀಕ್ಷೆ

ದಲಿತ ಸಚಿವರಿಂದ ದಿಲ್ಲಿ ಯಾತ್ರೆ ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಧ್ಯಪ್ರವೇಶದಿಂದ ತಣ್ಣಗಾಗಿದ್ದ 'ಬಣ' ರಾಜಕೀಯ ಇದೀಗ ಮತ್ತೊಂದು ಸುತ್ತಿನಲ್ಲಿ ಆರಂಭವಾಗುವ ಸಾಧ್ಯತೆ ದಟ್ಟವಾಗಿದೆ.

ಮುಖ್ಯಮಂತ್ರಿ ಸ್ಥಾನದ ಅಧಿಕಾರ ಹಂಚಿಕೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ವಿವಿಧ ಗಲಾಟೆಗಳಿಗೆ ಮಲ್ಲಿಕಾರ್ಜುನ ಖರ್ಗೆ ಬ್ರೇಕ್ ಹಾಕಿದ್ದರು. ಆದರೀಗ ದಲಿತ ಸಚಿವರು ಫೆ.10ರೊಳಗೆ ದೆಹಲಿ ಯಾತ್ರೆಗೆ ಸಿದ್ಧತೆ ಆರಂಭಿಸುವ ಮೂಲಕ ಮತ್ತೊಂದು ಸುತ್ತಿನ ವಿವಾದ ಶುರುವಾಗುವ ಸಾಧ್ಯತೆ ದಟ್ಟವಾಗಿದೆ. ಹೈಕಮಾಂಡ್ ಎಚ್ಚರಿಕೆಯ ಹೊರತಾಗಿಯೂ, ಎರಡೂ ಬಣದವರು ತಲೆಕೆಡಿಸಿಕೊಂಡಿಲ್ಲ. ಈಗ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಹೇಳಿಕೆಯಿಂದ ವಿಚಲಿತರಾದ ದಲಿತ ಸಚಿವರು ದೆಹಲಿ ಯಾತ್ರೆ ಕೈಗೊಳ್ಳಲು ಮುಂದಾಗಿದ್ದಾರೆ.

ಭಾನುವಾರ ಮಾಗಡಿ ಶಾಸಕ ಬಾಲಕೃಷ್ಣ ಅವರು ಮುಂದಿನ ಸಿಎಂ ಡಿ.ಕೆ. ಶಿವಕುಮಾರ್ ಎಂಬ ಅರ್ಥದಲ್ಲಿ ಹೇಳಿರುವುದು ಸಂಚಲನಕ್ಕೆ ಮತ್ತಷ್ಟು ವೇಗ ತಂದಂತಾಗಿದೆ. ಈ ಮಧ್ಯೆ ಗೃಹಸಚಿವ ಡಾ. ಜಿ. ಪರಮೇಶ್ವರ್ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ದಲಿತ ಸಚಿವರು, ಕೆಲವು ಶಾಸಕರು ದೆಹಲಿಗೆ ತೆರಳಲು ಮುಂದಾಗಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡನೇ ಬಾರಿ ಅಧಿಕಾರ ಸ್ವೀಕರಿಸುವ ಸಮಯದಲ್ಲಿಯೇ ಮುಖ್ಯಮಂತ್ರಿ ಅವಧಿ ಎರಡೂವರೆ ವರ್ಷ ಎಂಬ ಮಾತು ಗಳು ಹರಿದಾಡಿದವು. ಇದೀಗ ನವೆಂಬರ್‌ಗೆ ಸಿದ್ದರಾಮಯ್ಯ ಸಿಎಂ ಅವಧಿ ಖಚಿತವಾಗಿ ಮುಗಿಯಲಿದೆ ಎಂಬ ಅಶೋಕ್ ಹೇಳಿರುವುದು ಇದೀಗ ಹೊಸ ಚರ್ಚೆಯನ್ನು ಹುಟ್ಟು ಹಾಕಿದೆ.

ದೆಹಲಿ ಭೇಟಿಯ ಸಂದರ್ಭದಲ್ಲಿ ಅಧಿಕಾರ ಹಂಚಿಕೆ ಮಾತ್ರವಲ್ಲದೆ, ಕೆಲವರಲ್ಲೇ ಅಧಿಕಾರ ಕೇಂದ್ರೀಕೃತವಾಗಿರುವ ವಿಚಾರವನ್ನು ಈ ಮುಖಂಡರು ಹೈಕಮಾಂಡ್ ಮುಂದಿಡುವ ಲೆಕ್ಕಾಚಾರ ಇದೆ ಎನ್ನಲಾಗಿದೆ. ದೆಹಲಿ ಚುನಾವಣೆ ಮತ್ತು ಕೇಂದ್ರ ಬಜೆಟ್ ಅಧಿವೇಶನದಲ್ಲಿ ಹೈ ಕಮಾಂಡ್ ನಾಯಕರು ತೊಡಗಿಕೊಂಡಿದ್ದು ದೆಹಲಿಗೆ ತೆರಳುವ ಸಚಿವರ ತಂಡದ ಜತೆ ಏನು ಚರ್ಚೆ ನಡೆಸುತ್ತಾರೆ ಎನ್ನುವುದು ರಾಜಕೀಯ ವಲಯದಲ್ಲಿ ಕುತೂಹಲ ಹೆಚ್ಚಾಗಿದೆ

ಸಿಎಂ ಅಧಿಕಾರದ ಅವಧಿ ಕುರಿತು ಅಶೋಕ್ ನೀಡಿರುವ ಹೇಳಿಕೆ ವಿವಿಧ ಲೆಕ್ಕಾಚಾರಗಳಿಗೆ ಕಾರಣವಾಗಿದೆ. ಇದಕ್ಕೆ ಸಚಿವರಾದ, ಎನ್.ಎಸ್. ಬೋಸರಾಜು, ಶಿವರಾಜ ತಂಗಡಗಿ, ಕೆ.ಎನ್. ರಾಜಣ್ಣ ಮತ್ತಿತರರು ತಿರುಗೇಟು ನೀಡಿದ್ದು, ಅಶೋಕನಿಗೆ ಕನಸು ಬಿದ್ದಿದೆಯೇ. ಅವರೇನು ಜ್ಯೋತಿಷಿಯೇ ಎಂದು ವಾಗ್ದಾಳಿ ನಡೆಸಿದ್ದಾರೆ. ಆದರೆ, ಅಶೋಕ್ ಸಿಡಿಸಿರುವ ಮಾತು ಕಾಂಗ್ರೆಸ್ ಪಕ್ಷದಲ್ಲೇ ನಾನಾ ಲೆಕ್ಕಾಚಾರಗಳಿಗೆ ಕಾರಣವಾಗಿರುವುದಂತೂ ಸತ್ಯ.

> ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರ ಹೇಳಿಕೆಗೆ ತಳ ಇಲ್ಲ ಬುಡ ಇಲ್ಲ. ಸುಮ್ಮನೇ ಮಾತನಾಡಬೇಕು ಎಂದು ಮಾತನಾಡುವುದಲ್ಲ ಅವರು ಹೇಳಿದ್ದೆಲ್ಲ ನಿಜವಾಗಿ ಬಿಡುತ್ತದೆಯೇ? ಅವರೇನು ಜೋತಿಷಿಗಳೇ? ಸಿದ್ದರಾಮಯ್ಯ ಅವರೆ ನಮ್ಮ ಮುಖ್ಯಮಂತ್ರಿಗಳು.
>
> **-ಡಾ. ಜಿ. ಪರಮೇಶ್ವರ,** ಗೃಹಸಚಿವ

ಸಮಾಚಾರ ಸಣ್ಣದಲ್ಲ

ಗೂಳಿಹಟ್ಟಿ ಶೇಖರ್‌ಗೆ ಮಾತೃವಿಯೋಗ

ಚಿತ್ರದುರ್ಗ: ಮಾಜಿ ಸಚಿವ ಗೂಳಿಹಟ್ಟಿ ಶೇಖರ್ ತಾಯಿ ಬೋವಿಹಟ್ಟಿಯ ಪುಟ್ಟಮ್ಮ ಭಾನುವಾರ ಮುಂಜಾನೆ ನಿಧನರಾಗಿದ್ದಾರೆ. ಅವರಿಗೆ 79 ವರ್ಷ ವಯಸ್ಸಾಗಿತ್ತು. ಈ ಹಿಂದೆ ಪುಟ್ಟಮ್ಮ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದರು. ಆದರೆ ಮಗನ ಒತ್ತಾಯಕ್ಕೆ ಮಣಿದು ಹಿಂದೂ ಧರ್ಮಕ್ಕೆ ಮರಳಿದ್ದರು. ಹಿಂದೂ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಯಿತು.

ಆಕಸ್ಮಿಕ ಬೆಂಕಿ: 40 ಕುರಿಗಳ ದಹನ

ಬಳ್ಳಾರಿ: ಶೆಡ್‌ಗೆ ಆಕಸ್ಮಿಕವಾಗಿ ಬೆಂಕಿ ತಗುಲಿದ ಪರಿಣಾಮ 40ಕ್ಕೂ ಹೆಚ್ಚು ಕುರಿಗಳು ಬೆಂಕಿಗೆ ಆಹುತಿಯಾದ ಘಟನೆ ವಿಜಯನಗರ ಜಿಲ್ಲೆಯ ಕೂಡ್ಲಿಗಿಯ ಅಮಲಾಪುರ ಗ್ರಾಮದಲ್ಲಿ ನಡೆದಿದೆ. ಅಗಸರ ಶೇಖರಪ್ಪ ಎಂಬ ರೈತರಿಗೆ ಸೇರಿದ ಕಣಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಕಣದಿಂದ ಪಕ್ಕದಲ್ಲಿದ್ದ ಕುರಿಗಳನ್ನು ಕಟ್ಟಿಹಾಕಿದ್ದ ಶೆಡ್‌ಗೆ ಸಹ ಬೆಂಕಿ ತಗುಲಿದೆ. ಘಟನೆ ವೇಳೆ ಯಾರೂ ಇಲ್ಲದ ಕಾರಣ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಎಲ್ಲ ಕುರಿಗಳು ಸಾವನ್ನಪ್ಪಿವೆ. ಸ್ಥಳಕ್ಕೆ ಅಗ್ನಿ ಶಾಮಕ ದಳದ ಸಿಬ್ಬಂದಿ ಧಾವಿಸಿ ಬೆಂಕಿ ನಂದಿಸಿದರೂ ಕುರಿಗಳನ್ನು ಬದುಕಿಸಲು ಸಾಧ್ಯವಾಗಿಲ್ಲ. 4 ಲಕ್ಷ ರು. ಗೂ ಹೆಚ್ಚು ಬೆಲೆಬಾಳುವ ಕುರಿಗಳನ್ನು ಕಳೆದುಕೊಂಡ ರೈತ ಕಂಗಾಲಾಗಿದ್ದಾನೆ.

ಮಂಗಳೂರು-ದೆಹಲಿ ನಡುವೆ ವಿಮಾನ ಸೇವೆ

ಮಂಗಳೂರು: ಕರ್ನಾಟಕದ ವಿಮಾನ ಪ್ರಯಾಣಿಕರಿಗಾಗಿ ಮತ್ತಷ್ಟು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮಂಗಳೂರು ಮತ್ತು ದೆಹಲಿ ನಡುವೆ ನೇರ ವಿಮಾನಯಾನ ಸೇವೆ ಆರಂಭಿಸಿದೆ. ಈ ಮಾರ್ಗದ ಮೊದಲ ವಿಮಾನ ಐಎಕ್ಸ್ 1552 ಮಂಗಳೂರಿನಿಂದ ಬೆಳಗ್ಗೆ 6.40ಕ್ಕೆ ಹೊರಟು ಫೆಬ್ರವರಿ 1ರಂದು ಬೆಳಗ್ಗೆ 9.35ಕ್ಕೆ ದೆಹಲಿಗೆ ಬಂದಿಳಿದಿದೆ ಎಂದು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ. ಅದರಂತೆ ಐಎಕ್ಸ್ 2768 ವಿಮಾನವು ದೆಹಲಿಯಿಂದ ಬೆಳಗ್ಗೆ 6.40ಕ್ಕೆ ಹೊರಟು ಬೆಳಗ್ಗೆ 9.35ಕ್ಕೆ ಮಂಗಳೂರಿಗೆ ಬಂದಿಳಿದಿದೆ. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಕ್ಷಣಾ ಮತ್ತು ಅಗ್ನಿಶಾಮಕ ತಂಡ ಮೊದಲ ವಿಮಾನದಲ್ಲಿದ್ದ ಪ್ರಯಾಣಿಕರನ್ನು ಜಲಫಿರಂಗಿ ಸೆಲ್ಯೂಟ್‌ನೊಂದಿಗೆ ಸ್ವಾಗತಿಸಿದ್ದು ವಿಶೇಷವಾಗಿತ್ತು. ಮೊದಲ ವಿಮಾನದಲ್ಲಿ ಮಂಗಳೂರಿನಿಂದ ದೆಹಲಿಗೆ 167 ಪ್ರಯಾಣಿಕರು ಮತ್ತು ದೆಹಲಿಯಿಂದ ಮಂಗಳೂರಿಗೆ 144 ಪ್ರಯಾಣಿಕರು ಸಂಚರಿಸಿದ್ದಾರೆ.

ಸ್ಫೋಟಕ ಬಳಸಿ ಕಲ್ಲುಬಂಡೆ ಒಡೆದ ಪ್ರಕರಣ: ಇಬ್ಬರ ಸೆರೆ

ಸಿದ್ದಾಪುರ: ಹಳ್ಳಿಹೊಳೆ ಗ್ರಾಮದ ಅರಮನೆಕೊಡ್ಲು ಎಂಬಲ್ಲಿ ಅಕ್ರಮವಾಗಿ ಕಲ್ಲು ಬಂಡೆಗಳನ್ನು ಸ್ಫೋಟಿಸಿದ ಪ್ರಕರಣದಲ್ಲಿ ಅನಂತಮೂರ್ತಿ ಭಟ್ ಮತ್ತು ಪ್ರವೀಣ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಗೆ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ. ಬಂಡೆ ಸ್ಫೋಟಿಸಿದ್ದರಿಂದ ಸುತ್ತಮುತ್ತಲಿನ ಮನೆಗಳಿಗೆ ಹಾನಿಯಾದ ಬಗ್ಗೆ ಶಂಕರನಾರಾಯಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಫೈನಾನ್ಸ್ ಕಿರುಕುಳ: ವ್ಯಕ್ತಿ ಆತ್ಮಹತ್ಯೆ

ಕೋಲಾರ: ಸಾಲಬಾಧೆ ತಾಳಲಾರದೆ ತರಕಾರಿ ವ್ಯಾಪಾರಿ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ತಾಲೂಕಿನ ಚಿಟ್ನಹಳ್ಳಿ ನಾಗರಾಜ್ (40) ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ತರಕಾರಿ ವ್ಯಾಪಾರಿ ನಾಗರಾಜ್ ಹಲವಾರು ಕಡೆ ಸಾಲ ಪಡೆದುಕೊಂಡಿದ್ದು ಮನೆ ನಿರ್ಮಾಣಕ್ಕೆ ಹೆಚ್ಚಿನ ಹಣ ಹಾಕಿ ದ್ದರು. ವಾಸ್ತು, ಧರ್ಮಸ್ಥಳ, ಬಜಾಜ್, ಭರತ್ ಫೈನಾನ್ಸ್‌ನಲ್ಲಿ ಸುಮಾರು 10 ಲಕ್ಷ ರು. ಸಾಲ ಮಾಡಿದ್ದರು. ಸಾಲದ ವಿಚಾರದಲ್ಲಿ ಕುಟುಂಬದಲ್ಲಿ ಹಲವಾರು ಬಾರಿ ಮನೆಯಲ್ಲಿ ಜಗಳ ಆಗಿತ್ತು. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದು ತನಿಖೆ ಮುಂದುವರೆದಿದೆ.

ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿಕೆ

ಮೋದಿ ಸರಕಾರದಿಂದ ಸ್ವಾಮಿನಾಥನ್ ವರದಿ ಜಾರಿ

ಕಲಬುರಗಿ: ಕೃಷಿಕರ ಮತ್ತು ರೈತರ ಕಲ್ಯಾಣದ ದೃಷ್ಟಿಯಿಂದ ಸ್ವಾಮಿನಾಥನ್ ವರದಿಯನ್ನು ಪೂರ್ಣವಾಗಿ ಜಾರಿಗೊಳಿಸಿದ ಹೆಗ್ಗಳಿಕೆ ಮೋದಿ ಸರಕಾರದ್ದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಸ್ವಾಮಿನಾಥನ್ ನೀಡಿದ 200 ವರದಿಗಳಲ್ಲಿ ಎಲ್ಲವನ್ನೂ ಜಾರಿ ಮಾಡಲಾಗಿದೆ. ಸ್ವಾಮಿನಾಥನ್ ವರದಿಯನ್ನು ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಸಲ್ಲಿಸಲಾಗಿದ್ದು, ಅದನ್ನು ಯುಪಿಎ ಜಾರಿಮಾಡಲು ವಿಫಲವಾಗಿತ್ತು. ಆದರೆ ಎನ್‌ಡಿಎ ಸರಕಾರ ಪೂರ್ಣ ಪ್ರಮಾಣದಲ್ಲಿ ಜಾರಿಮಾಡಿ ರೈತ ಪರವಾಗಿ ಕೆಲಸ ಮಾಡಿದೆ ಎಂದರು.

ಕೇಂದ್ರ ಸಚಿವ ನಿರ್ಮಲಾ ಸೀತಾರಾಮನ್ ಅವರು ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಲಾಗುತ್ತಿಲ್ಲ. ಅದು ಆಯಾ ರಾಜ್ಯಗಳ ಬೆಳೆಗಳಿಗೆ ಅನುಗುಣವಾಗಿ ಆಯಾಯ ಕಾಲಕ್ಕೆ ನಿರ್ಧರಿಸಲಾಗುತ್ತದೆ. ರೈತ ಪರವಾಗಿ ಸರಕಾರ ಕನಿಷ್ಠ ಬೆಂಬಲ ಬೆಲೆ ಘೋಷಿಸಿ ರೈತ ಕಲ್ಯಾಣವನ್ನು ಮಾಡುತ್ತಿದೆ ಎಂದರು. ಎಲ್ಲ ರಾಜ್ಯಗಳ ಕೃಷಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮ ಮೂಲಭೂತ ಸೌಲಭ್ಯ,ರಫ್ತು ಸೇರಿದಂತೆ ವಿವಿಧ ವಲಯಗಳ ಅಭಿವೃದ್ಧಿಗೆ ಈ ಮುಂಗಡ ಪತ್ರದಲ್ಲಿ ಆದ್ಯತೆ ನೀಡಿ ಎಲ್ಲಾ ರಾಜ್ಯ, ಪ್ರದೇಶಗಳಿಗೆ ಆದ್ಯತೆ ಕೊಡಲಾಗಿದೆ .ಮುಂಗಡ ಪತ್ರದ ಪೂರ್ಣ ಪಾಠ ಅಧ್ಯಯನ ಮಾಡಿದ ನಂತರ ಪ್ರತಿಕ್ರಿಯೆ ನೀಡುವುದಾಗಿ ಸಚಿವರು ಹೇಳಿದರು.

> ಕಲಬುರಗಿ ಸೇರಿದಂತೆ ಹಲವು ಕಡೆಗಳ ಇಎಸ್‌ಐ ಆಸ್ಪತ್ರೆಗಳಲ್ಲಿ ವ್ಯಾಪಕ ಸಿಬ್ಬಂದಿಯ ಕೊರತೆಯಿದ್ದು ಸಮಸ್ಯೆಯ ವರದಿಯನ್ನು ಆಧರಿಸಿ ನೇಮಕಾತಿಗಾಗಿ ತಕ್ಷಣದಲ್ಲಿ ಕ್ರಮ ಕೈಗೊಳ್ಳಲಾಗುವುದು. ಇನ್ನು ಮುಂದೆ ಈ ಎಸ್ ಐ ಆಸ್ಪತ್ರೆಗಳಲ್ಲಿ ಕೂಡ ಆಯುಷ್ಮಾನ್ ಕಾರ್ಡ್ ಮೂಲಕ ಚಿಕಿತ್ಸೆ ಪಡೆಯುವ ಸೌಲಭ್ಯಗಳನ್ನು ಕಲ್ಪಿಸಲಾಗುವುದು.
>
> **-ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

ಶಿಕ್ಷಣದಲ್ಲಿ ಎಐ ಬಳಕೆ

ಶಿವಮೊಗ್ಗ: ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಾಂತ್ರಿಕತೆ ಅಳವಡಿಸಲಾಗುತ್ತಿದ್ದು, ಮಕ್ಕಳ ಬಾಡಿ ಲಾಂಗ್ವೇಜ್ ಸರಿ ಮಾಡಲು ಎಐ ಬಳಸಿಕೊಳ್ಳಲಿದ್ದೇವೆ. ಉತ್ತರ ಕರ್ನಾಟಕದ ಮಕ್ಕಳು ಕಾರ್ಪೊರೇಟ್ ಕಂಪನಿಗಳಿಗೆ ಹೋದಾಗ ಹಿನ್ನಡೆ ಅನುಭವಿಸುತ್ತಿದ್ದಾರೆ. ಇದನ್ನು ನಿವಾರಣೆ ಮಾಡಲು ಈ ತಂತ್ರಜ್ಞಾನ ಬಳಸಿಕೊಳ್ಳಲಾಗುವುದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, ಬೆಳಗಾವಿ ಸೇರಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತರಲಾಗುವುದು. ಗಣಿತ ಗಣಕ ಮೂಲಕ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳ ಪೋಷಕರ ಫೋನ್‌ಗೆ ಕರೆ ಮಾಡಿ ಗಣಿತ ಕಲಿಸುತ್ತಿದ್ದಾರೆ. ಎಲ್‌ಕೆಜಿ, ಯುಕೆಜಿಗೆ ಚಿಲಿಪಿಲಿ ಯೋಜನೆಯಡಿ ಪಾಠ ಮಾಡಲಾಗುತ್ತಿದೆ ಎಂದರು.

ಜಿಟಿಡಿ ಮಾತಿಗೆ ಹೆಚ್ಚು ತಲೆ ಕೆಡಿಸಿಕೊಳ್ಳಿಲ್ಲ



ಚನ್ನರಾಯಪಟ್ಟಣ: ಜೆಡಿಎಸ್ ಪಕ್ಷದಲ್ಲಿ ಎಲ್ಲವೂ ಸರಿ ಇದೆ. ಜಿ.ಟಿ.ದೇವೇಗೌಡರನ್ನು 15 ವರ್ಷದಿಂದ ನೋಡಿದ್ದೇನೆ. ಅವರ ಮಾತಿಗೆ ತಲೆ ಏಕೆ ಕೆಡಿಸಿಕೊಳ್ಳಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಜಿ.ಟಿ. ದೇವೇಗೌಡರು ಬಯ್ಯೋದು ಹಾಗೂ ಹೊಗಳೋದು ಎರಡನ್ನೂ ಮಾಡುತ್ತಾರೆ. ಅವರಿಗೆ ಕೋಪ ಬಂದಾಗ ಬಯ್ತಾರೆ. ಸಂತೋಷವಾದಾಗ ಜೆಡಿಎಸ್ ವರಿಷ್ಠರನ್ನು ಹೊಗಳುತ್ತಾರೆ. ಇದಕ್ಕೆ ಪಕ್ಷದಲ್ಲಿ ಮಹತ್ವ ಕೊಡುತ್ತಿಲ್ಲ ಎಂದರು.

ಜೆಡಿಎಸ್‌ನಲ್ಲಿ ಗುಂಪುಗಾರಿಕೆ ಇಲ್ಲ, ಯಾರೋ ಒಬ್ಬರ ಹೇಳಿಕೆ ಅವರ ವೈಯಕ್ತಿಕ ಹೇಳಿಕೆಯಾಗುತ್ತದೆ. ಅದಕ್ಕೂ ಪಕ್ಷಕ್ಕೂ ಹೊಂದಾಣಿಕೆ ಮಾಡುವುದು ಬೇಡ. ಅದು ಪಕ್ಷದ ಸಮಸ್ಯೆಯಾಗಲಾರದು, ಬಿಜೆಪಿ ಗುಂಪುಗಾರಿಕೆಯನ್ನು ಅವರ ಪಕ್ಷದ ವರಿಷ್ಠರು ಸರಿ ಮಾಡುತ್ತಾರೆ. ಇದಕ್ಕೆ ನಾನು ಹೇಗೆ ಪ್ರತಿಕ್ರಿಯಿಸಲು ಸಾಧ್ಯ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಪಕ್ಷ ಗಟ್ಟಿಗೊಳಿಸುವೆವು: ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಎಚ್.ಡಿ.ದೇವೇಗೌಡರ ಸಾರಥ್ಯದಲ್ಲಿ ಜೆಡಿಎಸ್ ಪಕ್ಷವನ್ನು ರಾಜ್ಯದಲ್ಲಿ ಮತ್ತಷ್ಟು ಗಟ್ಟಿ ಮಾಡುತ್ತೇವೆ. ದೇವೇಗೌಡರು ರಾಜ್ಯಕ್ಕೆ ಅಗತ್ಯವಿದೆ. ಅವರು ರೈತರ ಪರವಾಗಿ ಹೋರಾಟ ಮಾಡುವ ಏಕೈಕ ರಾಜಕಾರಣಿ ಎಂದು ಎಚ್ಡಿಕೆ ತಿಳಿಸಿದರು.

ಕೇಂದ್ರ ಬಜೆಟ್ 2025

ಸೀತಾರಾಮನ್ ಅವರು ಮಂಡಿಸಿರುವ ಕೇಂದ್ರದ ಬಜೆಟ್ ಸಂಪೂರ್ಣ ನಿರಾಶದಾಯಕವಾಗಿದೆ. ಕೇಂದ್ರ ಬಿಜೆಪಿ ಸರಕಾರದ 2025-26ನೇ ಸಾಲಿನ ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವರ್ಷದ ಬಜೆಟ್ ಅತ್ಯಂತ ನಿರಾಶದಾಯಕವಾದ ಬಜೆಟ್ ಆಗಿದ್ದು, ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಲಾಗಿದೆ. ರಾಜ್ಯದ ರೈತರಿಗೆ ಅನುಕೂಲವಾಗುವ ಯಾವುದೇ ಯೋಜನೆಗಳು ಬಜೆಟ್‌ನಲ್ಲಿ ಘೋಷಣೆ ಯಾಗಿಲ್ಲ. ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿದ್ದು, ಇದರ ಬಗ್ಗೆ ಬಜೆಟ್ ನಲ್ಲಿ ಪ್ರಸ್ತಾಪವಾಗಿಲ್ಲ. ಕಳೆದ 10 ವರ್ಷಗಳಿಂದ ಉತ್ತಮವಾದ ಬಜೆಟ್ ಮಂಡನೆಯಾಗದಿರುವುದು ಪರ್ಯಾಸವಾಗಿದೆ.

-ಎಸ್.ಎಸ್ ಮಲ್ಲಿಕಾರ್ಜುನ, ಗಣಿ ಮತ್ತು ಭೂ ಜ್ಞಾನ ಹಾಗೂ ತೋಟಗಾರಿಕಾ ಸಚಿವ

12 ಲಕ್ಷ ರೂಪಾಯಿ ವರೆಗೆ ತೆರಿಗೆ ವಿನಾಯಿತಿ ಅಂದಿದ್ದಾರೆ. ಆದರೆ ಅದಕ್ಕಿಂತ ಒಂದು ರೂಪಾಯಿ ಹೆಚ್ಚಿನ ಆದಾಯ ಬಂದರೂ ಈ ವಿನಾಯಿತಿ ಸಿಗುವುದಿಲ್ಲ. ಬದಲಿಗೆ ಶೇ.20ಕ್ಕೂ ಹೆಚ್ಚು ತೆರಿಗೆ ವಿಧಿಸುತ್ತಾರೆ. ಇದರ ಬದಲು ತೆರಿಗೆದಾರರಿಗೆ ನೇರವಾಗಿ ಮತ್ತು ಸುಲಭವಾಗಿ ಪ್ರಯೋಜನ ಸಿಗುವಂತೆ ನೋಡಿಕೊಳ್ಳಬೇಕಾಗಿತ್ತು. ಸಮಾಜದ ಈ ನಿರೀಕ್ಷೆಗೆ ಸ್ಪಂದಿಸಲು ನರೇಂದ್ರ ಮೋದಿ ಸರಕಾರ ವಿಫಲವಾಗಿದೆ. ಇದರ ಬಿಸಿ ಮುಂದಿನ ದಿನಗಳಲ್ಲಿ ಜನರಿಗೆ ಗೊತ್ತಾಗಲಿದೆ. ಉತ್ತರ ಕರ್ನಾಟಕದ ಕಡೆಗಣನೆ: ಉತ್ತರ ಕರ್ನಾಟಕದ ಅಭಿವೃದ್ಧಿಗೂ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿಲ್ಲ.

ಎಂ.ಬಿ.ಪಾಟೀಲ, ಸಚಿವ

ಯೂನಿಯನ್ ಬಜೆಟ್ 2025-26 ಭಾರತವನ್ನು ಶಿಕ್ಷಣ, ಆರೋಗ್ಯ ಸೇವೆ ಮತ್ತು ನಾವೀನ್ಯತೆಯ ಗ್ಲೋಬಲ್ ನಾಯಕನಾಗಿ ಪರಿವರ್ತಿಸಲು ನಿರ್ಧಾರಾತ್ಮಕ ಹೆಜ್ಜೆ ಹಾಕುತ್ತದೆ. ಮುಂದಿನ ವರ್ಷ 10,000 ಸೀಟ್‌ಗಳು ಮತ್ತು ಐದು ವರ್ಷಗಳಲ್ಲಿ 75,000 ಸೀಟ್‌ಗಳೊಂದಿಗೆ ವೈದ್ಯಕೀಯ ಶಿಕ್ಷಣದ ವಿಸ್ತರಣೆಯು ನೇರವಾಗಿ ವೈದ್ಯ-ರೋಗಿ ಅಂತರವನ್ನು ಸರಿಹೊಂದಿಸುತ್ತದೆ ಮತ್ತು ಲಕ್ಷಾಂತರ ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಖಚಿತಪಡಿಸುತ್ತದೆ. ಜತೆಗೆ, ಐಐಟಿ ಮೂಲಸೌಕರ್ಯದ ಬಲವರ್ಧನೆ ಮತ್ತು 10 ಸಾವಿರ ಸಂಶೋಧನಾ ಫೆಲೋಶಿಪ್‌ಗಳ ಪ್ರಾರಂಭವು ತಾಂತ್ರಿಕ ಪ್ರಗತಿಗೆ ಉತ್ತೇಜನ ನೀಡುತ್ತವೆ, ನಾವೀನ್ಯತೆ ಮತ್ತು ಆತ್ಮನಿರ್ಭರತೆಯ ಸಂಸ್ಕೃತಿಯನ್ನು ಬೆಳೆಸುತ್ತದೆ.

- ಶ್ರೇಯಸ್ ಕುಮಾರ್ , ನಿರ್ದೇಶಕ, ಎಸ್‌ಡಿಎಂಇ ಸೊಸೈಟಿ

ಕೇಂದ್ರದ ಬಜೆಟ್ ನಿರಾಶಾದಾಯಕವಾಗಿದೆ. ರಾಜ್ಯಕ್ಕೆ ಅನ್ಯಾಯ ಮಾಡಲಾಗಿದೆ. ಬಜೆಟ್‌ನಲ್ಲಿ ಹೇಳಿಕೊಳ್ಳುವಂತಹ ಯಾವುದೇ ವಿಶೇಷ ಇಲ್ಲದಂತಾಗಿದೆ. ಕರ್ನಾಟಕಕ್ಕೆ ನಿರೀಕ್ಷಿತ ಬಜೆಟ್ ನೀಡದೆ ಕಡೆಗಣಿಸಲಾಗಿದೆ. ಈ ಬಜೆಟ್ ಸಂಪೂರ್ಣ ನಿರಾಶಾದಾಯಕವಾಗಿದೆ. ಅಭಿವೃದ್ಧಿ ವಿಷಯದಲ್ಲಿ ರಾಜ್ಯದ ಹಿತಾಸಕ್ತಿ ಕಡೆಗಣಿಸಿರುವ ಮೋದಿ ಸರಕಾರದ ಕ್ರಮ ಸರಿಯಲ್ಲ. ರಾಜ್ಯದ ಹಲವು ಬೇಡಿಕೆಗಳ ಬಗ್ಗೆ ಕೇಂದ್ರ ಗಮನ ಹರಿಸದೆ ತಾರತಮ್ಯ ಎಸಗಿರುವುದು ಖಂಡನೀಯ. ಅಲ್ಲದೆ ರಾಜ್ಯದ ಯೋಜನೆಗಳಿಗೆ ನಾವು ನಿರೀಕ್ಷಿಸಿದಷ್ಟು ಅನುದಾನ ದೊರೆತಿಲ್ಲ. ನಮಗೆ ಅನುದಾನ ನೀಡಿಕೆಯಲ್ಲಿ ಈ ರೀತಿ ಅನ್ಯಾಯವಾಗುತ್ತಿರುವುದು ಬೇಸರ ತರಿಸುತ್ತಿದೆ.

-ರಾಜಶೇಖರ ಪಾಟೀಲ್, ಮಾಜಿ ಸಚಿವ

ವಿಶ್ವವಾಣಿ

ಸಂಪಾದಕೀಯ

ಸಮಸ್ಯೆಗಳನ್ನು ಆಹ್ವಾನಿಸುವುದೇಕೆ?

ಉದ್ಯೋಗಿಗಳ ಕಾರ್ಯಾವಧಿ ಬಗೆಗೆ ಇತ್ತೀಚೆಗೆ ಸಾಕಷ್ಟು ಚರ್ಚೆ ನಡೆದಿದೆ, ನಡೆಯುತ್ತಿದೆ. 'ಉದ್ಯೋಗಿಗಳು ವಾರಕ್ಕೆ 70 ಗಂಟೆ ಕೆಲಸ ಮಾಡಬೇಕು' ಎಂಬ ಇನ್ಫೋಸಿಸ್ ಸಹ-ಸಂಸ್ಥಾಪಕರ ಹೇಳಿಕೆಯ ನಂತರ, ಎಲ್ ಆ್ಯಂಡ್ ಟಿ ಕಂಪನಿಯ ಮುಖ್ಯಸ್ಥರು, ''ಉದ್ಯೋಗಿಗಳು ವಾರಕ್ಕೆ 90 ಗಂಟೆ ಕೆಲಸ ಮಾಡಬೇಕು, ಮನೆಯಲ್ಲಿ ಹೆಂಡತಿಯ ಮುಖವನ್ನೇ ಎಷ್ಟೂಂತ ನೋಡ್ತೀರಿ?'' ಎಂಬರ್ಥದ ಮಾತಾಡಿದ್ದು ಸಾಕಷ್ಟು ವಿವಾದವನ್ನು ಸೃಷ್ಟಿಸಿತ್ತು. ಆದರೆ, ವ್ಯಕ್ತಿಯೊಬ್ಬರು ವಾರಕ್ಕೆ 60 ಗಂಟೆಗಿಂತ ಹೆಚ್ಚು ಕೆಲಸ ಮಾಡಿದಲ್ಲಿ ಅದು ಅಂಥವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎನ್ನುತ್ತಾರೆ ಬಲ್ಲವರು. ಈಗಿರುವ ಕಾರ್ಯಾವಧಿ ಮತ್ತು ಒತ್ತಡಗಳೇ ನೌಕರರಲ್ಲಿ ಸಾಕಷ್ಟು ದೈಹಿಕ-ಮಾನಸಿಕ ಸಮಸ್ಯೆಗಳನ್ನು ಸೃಷ್ಟಿಸಿರುವಾಗ, ಕಾರ್ಯಾವಧಿಯನ್ನು 70 ಅಥವಾ 90 ಗಂಟೆಗೆ ಏರಿಸಿದರೆ ಇಂಥ ಸಮಸ್ಯೆಗಳು ಮತ್ತಷ್ಟು ತೀವ್ರಗೊಳ್ಳುವುದರಲ್ಲಿ ಸಂಶಯವಿಲ್ಲ ಎಂಬುದು ಇಂಥ ತಜ್ಞರ ಅಭಿಮತ. ವ್ಯಕ್ತಿಯೊಬ್ಬನು ದಿನವೊಂದರಲ್ಲಿ 12 ಗಂಟೆ ಅಥವಾ ಅದಕ್ಕಿಂತ ಹೆಚ್ಚು ಕಾಲ ಕಂಪ್ಯೂಟರ್/ಲ್ಯಾಪ್‌ಟಾಪ್ ಮುಂದೆ ಕುಳಿತು ಕೆಲಸ ಮಾಡಿದಲ್ಲಿ ಆತ ದೈಹಿಕ ಅನಾರೋಗ್ಯಕ್ಕೆ ಒಳಗಾಗುವುದರ ಜತೆಗೆ ಮಾನಸಿಕ ಸಾಮರ್ಥ್ಯದಲ್ಲೂ ಕುಸಿತವನ್ನು ಕಾಣುತ್ತಾನೆ ಎನ್ನುತ್ತದೆ ಒಂದು ಸಮೀಕ್ಷೆ. ಉದ್ಯೋಗವು ಸರಕಾರಿಯೇ ಆಗಿರಲಿ ಅಥವಾ ಖಾಸಗಿ ವಲಯಕ್ಕೆ ಸಂಬಂಧಿಸಿದ್ದೇ ಆಗಿರಲಿ, ದಿನಕ್ಕೆ 8 ಗಂಟೆಗಳ ಕಾರ್ಯಾವಧಿಯು ಎಲ್ಲ ನೆಲೆಯಲ್ಲಿಯೂ ಸೂಕ್ತ ಎಂಬುದು ವೈಜ್ಞಾನಿಕ ತಳಹದಿಯಿರುವ ಗ್ರಹಿಕೆ; ಈ ಕಾರಣದಿಂದಲೇ ಸರಕಾರಿ ಕಚೇರಿಗಳಲ್ಲಿ ಈ ಕಾರ್ಯಾವಧಿ ಯನ್ನು ನಿಗದಿಪಡಿಸಿರುವುದು. ನಿಗದಿತ ಕಚೇರಿ ಕಾರ್ಯದ ನಂತರ ವ್ಯಕ್ತಿ ಯೊಬ್ಬನು ಮಿಕ್ಕ ಸಮಯವನ್ನು ತನ್ನ ಕುಟುಂಬಿಕರೊಡನೆ ಒಡನಾಡ ಲೆಂದು, ವೈಯಕ್ತಿಕ ಅಗತ್ಯಗಳ ನೆರವೇರಿಕೆಗೆಂದು ಮೀಸಲಿಡುವುದಕ್ಕೆ ಅನುವು ಮಾಡಿಕೊಡಬೇಕು. ಆಗ ಮಾತ್ರವೇ ಆತನ ಕಾರ್ಯಕ್ಷಮತೆ ವರ್ಧಿಸುತ್ತದೆ ಎನ್ನುತ್ತಾರೆ ಕ್ಷೇತ್ರತಜ್ಞರು. ಆದ್ದರಿಂದ, ವೈಜ್ಞಾನಿಕವಾಗಿ ಮತ್ತು ಸಾಮಾಜಿಕವಾಗಿ 'ಸರಿ' ಎಂದು ಸಾಬೀತಾಗಿರುವ ಈ ಕಾರ್ಯಶೈಲಿಯನ್ನು ಅತಿರೇಕಕ್ಕೆ ಒಯ್ಯುವುದರಲ್ಲಿ ಅರ್ಥವಿಲ್ಲ, ಅಲ್ಲವೇ?

ಸೊಂಪಾದಕೀಯ

ಇದು ನಿಮ್ಮೀ ಬಜೆಟ್

ಪ್ರತಿ ಬಾರಿ ಕೇಂದ್ರ ಸರಕಾರದ ಫೈನಾನ್ಸ್ ಮಿನಿಸ್ಟರ್ ಅರ್ಥಾತ್ ಅರ್ಥ ಸಚಿವರು ಬಜೆಟ್ ಮಂಡಿಸಿದಾಗ ಅದು ಅರ್ಥ ಆಗದೇ 'ವಿತ್ತ ಸಚಿವರ ಬಜೆಟ್ ಸರಿ ಇಲ್ಲ' ಅಂತ ವಿತಂಡವಾದ ಮಾಡೋದು ಕಾಮನ್. ಈ ಬಾರಿ ಕೂಡಾ ಅದು ಹೊರತಾಗಿಲ್ಲ. ಆದರೆ ಈ ಬಾರಿ ಮಧ್ಯಮ ವರ್ಗದ ಜನರಿಗೆ ರಿಲೀಫ್ ಕೊಡುವ ಬಜೆಟ್ ಅನ್ನೋ ಮಾತು ಹೈಲೈಟ್ ಆಗುವಂತೆ ನಿರ್ಮಲಾ ಸೀತಾರಾಮನ್ ಅವರು ಆದಾಯ ತೆರಿಗೆಯ ಮಿತಿಯನ್ನು ಹೆಚ್ಚಿಸಿ ಮಧ್ಯಮ ವರ್ಗದ ಡಾರ್ಲಿಂಗ್ ಎನಿಸಿಕೊಂಡಿದ್ದಾರೆ. ಆದರೂ 12 ಲಕ್ಷ ಆದಾಯದವರೆಗೆ ತೆರಿಗೆ ಇಲ್ಲ ಅನ್ನೋ ಅವರ ಬಜೆಟ್ ಬಗ್ಗೆ ಜನ ಇನ್ನೂ ಮಾತಾಡುತ್ತಿದ್ದಾರೆ. ಇದರ ಬಗ್ಗೆ ಅನೇಕ ಅನುಮಾನಗಳಿವೆ. ಆದರೆ ಪ್ರಶ್ನೆ ಯಾರನ್ನು ಕೇಳೋದು.

ನಿರ್ಮಲಾ ಅವರನ್ನು ಈರುಳ್ಳಿ, ಟೊಮೆಟೋ ಬೆಲೆ ಏರಿಕೆಯ ಬಗ್ಗೆ ಕೇಳಿದರೆ, ಏರಿಕೆಯ ವಿಷಯ ಬಿಟ್ಟು ಹಾರಿಕೆಯ ಉತ್ತರ ಕೊಡುತ್ತಾ 'ನಾನು ಈರುಳ್ಳಿ, ಟೊಮೆಟೋ ತಿನ್ನಲ್ಲ' ಎನ್ನುತ್ತಾರೆ. 'ಈ ಬಾರಿ ನಿಮ್ಮೀ ಬಜೆಟ್ ಅರ್ಥ ಆಗಿಲ್ಲ' ಅಂದ್ರೆ 'ನನ್ನೇ ಹೆಸರಿಡಿದು ನಿಮ್ಮೀ ಅಂತೀಯಾ, ನಾನೇನು ನಿನ್ನ ಡಾರ್ಲಿಂಗಾ?' ಅಂದ್ರೂ ಅಚ್ಚರಿ ಇಲ್ಲ. ಆದ್ರೂ ಮೊದಲೇ ಹೇಳಿದಂತೆ ಅವರು ಈಗ ಮಧ್ಯಮ ವರ್ಗದ ಡಾರ್ಲಿಂಗ್ ಆಗಿದ್ದಾರೆ. ಕೆಟ್ಟು ಹೋದ ಗಡಿಯಾರ ದಿನಕ್ಕೆ ಎರಡು ಬಾರಿ ಸರಿ ಸಮಯ ತೋರಿಸುವಂತೆ ನಿರ್ಮಲಾ ಅವರೂ ಆಗಾಗ ಒಳ್ಳೆ ನಿರ್ಧಾರ ಮಾಡುತ್ತಾರೆ ಅನ್ನೋದನ್ನ ಪ್ರೂವ್ ಮಾಡಿದ್ದಾರೆ ಅಂತ ಸಮಾಧಾನ ಮಾಡಿಕೊಂಡು 'ಶುಭ್ ಘಡೀ ಆಯೀ ಹೈ' ಅಂತ ಜನಸಾಮಾನ್ಯ ಖುಷಿಯಾಗಿದ್ದಾನೆ. ಆದರೆ 12 ಲಕ್ಷಕ್ಕೆ ಟ್ಯಾಕ್ಸ್ ಇಲ್ಲದಿದ್ದರೂ ಹಳೆಯ ಸ್ಲ್ಯಾಬ್, ಹೊಸ ಸ್ಲ್ಯಾಬ್ ಅನ್ನುವ ಮೂಲಕ ಮತ್ತೆ ನಿರ್ಮಲಾ ಅವರು ಮಧ್ಯಮ ವರ್ಗದ ಜನರ ತಲೆ ಮೇಲೆ ಸ್ಲ್ಯಾಬ್ ಅಂದ್ರೆ ಚಪ್ಪಡಿ ಎಳೆದಿದ್ದಾರೆಯೇ ಅನ್ನೋ ಅನುಮಾನ ಎಲ್ಲರದ್ದು. ಈ ಪ್ರಶ್ನೆ ಸೇರಿದಂತೆ, ಬಜೆಟ್‌ನ ಉಳಿದ ನೆಗೆಟಿವ್ ವಿಷಯಗಳ ಬಗ್ಗೆ ನಿರ್ಮಲಾ ಅವರನ್ನು ಕೇಳಿದರೆ ಕರ ಜಾಸ್ತಿ ಆಗಲು ಕಾಂಗ್ರೆಸ್‌ನ ಕೈ ಅರ್ಥಾತ್ ಕರವೇ ಕಾರಣ ಅಂತ ಅವರು ಉತ್ತರ ಕೊಟ್ಟು, ಅದಕ್ಕೆ ಕಾಂಗ್ರೆಸ್ ಮತ್ತು ಕರವೇ ರಾಜ್ಯಾಧ್ಯಕ್ಷರು ಸೇರಿಕೊಂಡು ಪ್ರತಿಭಟನೆ ಮಾಡುವ ಸಾಧ್ಯತೆ ಇದೆ.

ಸಂಪಾದಕರ ಸದ್ಯಶೋಧನೆ

ಬೆನ್ನೆಟ್-ಕೋಲಮನ್ ಯಾರು?

ಭಾರತದ ಅತಿ ಹೆಚ್ಚು ಪ್ರಸಾರ ಹೊಂದಿದ ಇಂಗ್ಲಿಷ್ ದೈನಿಕ ಎಂಬ ಅಗ್ಗಳಿಕೆಗೆ ಪಾತ್ರವಾಗಿರುವ 'ಟೈಮ್ಸ್ ಆಫ್ ಇಂಡಿಯಾ' ಬೆನೆಟ್, ಕೋಲಮನ್ ಅಂಡ್ ಕಂಪನಿ ಲಿಮಿಟೆಡ್ (ಬಿಸಿಸಿಎಲ್) ಎಂಬ ಸಂಸ್ಥೆಗೆ ಒಳಪಟ್ಟಿದೆಯೆಂಬುದು ಅನೇಕರಿಗೆ ಗೊತ್ತಿರಬಹುದು. ಈ ಬೆನ್ನೆಟ್ ಮತ್ತು ಕೋಲಮನ್ ಯಾರು? ಅವರಿಗೂ ಈ ಪತ್ರಿಕೆಗೂ ಏನು ಸಂಬಂಧ? 1838 ರ ನವೆಂಬರ್‌ನಲ್ಲಿ 'ಮುಂಬೈ ಟೈಮ್ಸ್ ಅಂಡ್ ಜರ್ನಲ್ ಕಾಮರ್ಸ್' ಎಂಬ ಪತ್ರಿಕೆ ಆರಂಭವಾಯಿತು. ಆದಾದ ಎರಡು ವರ್ಷಗಳ ಬಳಿಕ, ಈ ಹೆಸರನ್ನು 'ಟೈಮ್ಸ್ ಆಫ್ ಇಂಡಿಯಾ' ಎಂದು ಬದಲಿಸಲಾಯಿತು. ಆಗ ಅದು ದಿನಪತ್ರಿಕೆ ಆಗಿರಲಿಲ್ಲ. ಅದು ವಾರದಲ್ಲಿ ಎರಡು ದಿನ ಮಾತ್ರ ಪ್ರಕಟವಾಗು ತ್ತಿತ್ತು. 1850 ರಲ್ಲಿ ಅದು ದಿನಪತ್ರಿಕೆಯಾಗಿ ಪರಿವರ್ತಿತವಾಯಿತು. ಆ ದಿನಗಳಲ್ಲಿ ರಾಬರ್ಟ್ ನೈಟ್ ಎಂಬುವವರು 'ಬಾಂಬೆ ಟೈಮ್ಸ್ ಅಂಡ್ ಸ್ಟ್ಯಾಂಡರ್ಡ್' ಪತ್ರಿಕೆಯ ಸಂಪಾದಕರಾಗಿದ್ದರು. ಅವರನ್ನು 'ಟೈಮ್ಸ್ ಆಫ್ ಇಂಡಿಯಾ'ದ ಮೊದಲ ಸಂಪಾದಕರಾಗಿ ನೇಮಿಸಲಾಯಿತು. ಅವರು ಆ ಪತ್ರಿಕೆಗೆ ರಾಷ್ಟ್ರೀಯ ಸ್ವರೂಪವನ್ನು ನೀಡಿದರು. ಈ ಮಧ್ಯೆ ಪತ್ರಿಕೆಯ ಆಡಳಿತ ಮಂಡಳಿಯಲ್ಲಿ ಹಲವು ಬದಲಾವಣೆಗಳಾದವು. ಐದು ವರ್ಷ ಪೂರೈಸುವುದರೊಳಗೆ ಮಾಲೀಕತ್ವ ಬದಲಾಗುತ್ತಿತ್ತು. ನಂತರ 1892 ರಲ್ಲಿ ಇಂಗ್ಲಿಷ್ ಪತ್ರಕರ್ತರಾದ ಥಾಮಸ್ ಜೆವೆಲ್ ಬೆನ್ನೆಟ್ ಮತ್ತು ಫ್ರಾಂಕ್ ಮೋರಿಸ್ ಕೋಲಮನ್, ಈ ಪತ್ರಿಕೆಯನ್ನು ಖರೀದಿಸಿದರು. ಆಗ ಬ್ರಿಟಿಷರಿಗೆ ಭಾರತದಲ್ಲಿ ತಮ್ಮ ಪರವಾಗಿ ಬರೆಯುವ ಪತ್ರಿಕೆಗಳ ಅಗತ್ಯವಿತ್ತು. ಹೀಗಾಗಿ ಬೆನ್ನೆಟ್ ಮತ್ತು ಕೋಲಮನ್‌ಗೆ ಉದ್ಯಮಿಗಳ ಮೂಲಕ ಹಣ ನೀಡಿ ಪತ್ರಿಕೆ ಖರೀದಿಸಲು ಬ್ರಿಟಿಷ್ ಆಡಳಿತ ಪರೋಕ್ಷ ಸಹಾಯ ಮಾಡಿತು. ಇವರಿಬ್ಬರ ನೇತೃತ್ವದಲ್ಲಿ ಪತ್ರಿಕೆ ಸರ್ವಾಂಗೀಣ ಪ್ರಗತಿಯನ್ನು ಕಂಡಿತು. ಇವರಿಬ್ಬರೂ ಪತ್ರಕರ್ತರಾಗಿ ಮತ್ತು ಬೇರೆ ಪತ್ರಿಕೆಗಳಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದರು. ಇವರಿಬ್ಬರೂ ಸೇರಿ ಬೆನ್ನೆಟ್, ಕೋಲಮನ್ ಅಂಡ್ ಕಂಪನಿ ಲಿಮಿಟೆಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆ ದಿನಗಳಲ್ಲಿ ಎಂಟು ನೂರು ಸಿಬ್ಬಂದಿ ಕೆಲಸ ಮಾಡುತ್ತಿದ್ದರು. 1915ರಲ್ಲಿ ಲಂಡನ್ ಗೆ ಹೋಗುವಾಗ, ಹಡಗು ಮುಳುಗಿ ಕೋಲಮನ್ ಅಸು ನೀಗಿದರು. ಅಷ್ಟೊತ್ತಿಗೆ ಪತ್ರಿಕೆ ಸದೃಢವಾಗಿತ್ತು. ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ಶಿಖರಕ್ಕೇರಿದ ದಿನಗಳವು. ಬ್ರಿಟಿಷರು ಭಾರತ ಬಿಟ್ಟು ತೊಲಗುವುದು ಅನಿವಾರ್ಯವಾಗಿತ್ತು. ಚಳವಳಿಯ ಕಾವು ದಿನದಿಂದ ದಿನಕ್ಕೆ ಹೊಸ ಸ್ವರೂಪ ಪಡೆದುಕೊಳ್ಳುತ್ತಿತ್ತು. ಆಗ ಪತ್ರಿಕೆ ಆಡಳಿತ ಮಂಡಳಿ ಹೊಸ ನೇತೃತ್ವವನ್ನು ಎದುರು ನೋಡುತ್ತಿತ್ತು. ಆಗ ಮುಂದೆ ಬಂದವರು ಉದ್ಯಮಿ ರಾಮಕೃಷ್ಣ ದಾಲ್ಮಿಯಾ. ಇದಕ್ಕೆ ಗಾಂಧೀಜಿಯವರ ಒತ್ತಾಸೆಯಿತ್ತು. ಅವರೇ ಪತ್ರಿಕೆ ಖರೀದಿಸುವಂತೆ ದಾಲ್ಮಿಯಾ ಅವರನ್ನು ಪ್ರಚೋದಿಸಿದರು. 1946 ರಲ್ಲಿ ಅವರು ಆ ಪತ್ರಿಕಾ ಒಡೆತನದ ಸಂಸ್ಥೆಯನ್ನು ಖರೀದಿಸಿದರು. ಆ ದಿನಗಳಲ್ಲಿ ಅವರು ನೀಡಿದ ಹಣ ಎರಡು ಕೋಟಿ ರುಪಾಯಿ. ಹಾಗೆ ನೋಡಿದರೆ, ದಾಲ್ಮಿಯಾ ಅವರೇ ಟೈಮ್ಸ್ ಆಫ್ ಇಂಡಿಯಾದ ಮೊದಲ ಭಾರತೀಯ ಮಾಲೀಕರು. ಆ ದಿನಗಳಲ್ಲಿ ಪತ್ರಿಕೆಯ ಸಂಪಾದಕರೂ ಬ್ರಿಟಿಷರೇ ಆಗಿರುತ್ತಿದ್ದರು. ಆ ಪತ್ರಿಕೆಯ ಕೊನೆಯ ಇಬ್ಬರು ಬ್ರಿಟಿಷ್ ಸಂಪಾದಕರು ಸ್ಕಾಟ್ಲ್ಯಾಂಡ್ ಮೂಲದವರು ಎಂಬುದು ಗಮನಾರ್ಹ. ಸ್ವಾತಂತ್ರ್ಯ ಚಳವಳಿ ಮತ್ತು ಎರಡನೇ ಮಹಾಯುದ್ಧದಂಥ ಅತ್ಯಂತ ನಿರ್ಣಾಯಕ ಸಂದರ್ಭದಲ್ಲಿ ಸಂಪಾದಕರಾಗಿದ್ದವರು ಫ್ರಾನ್ಸಿಸ್ ಲೋ. ಅವರು ಸುಮಾರು ಹದಿನಾರು ವರ್ಷಗಳ (1932-1948) ವರೆಗೆ ಸಂಪಾದಕರಾಗಿದ್ದರು. ಅವರ ನಂತರ ಇವೊರ್ ಜೆಹು ಎನ್ನುವವರು ಸಂಪಾದಕರಾದರು. ಸ್ವಾತಂತ್ರ್ಯ ಪ್ರಾಪ್ತವಾದ ಬಳಿಕ ಪತ್ರಿಕೆಯ ಸಂಪಾದಕೀಯ ನಿಲುವಿನಲ್ಲಿ ಗಣನೀಯ ಬದಲಾವಣೆಗಳಾದವು. ಸ್ವಾತಂತ್ರ್ಯ ಸಿಕ್ಕು 75 ವರ್ಷಗಳಾದರೂ, ಇಂದಿಗೂ ಆ ಪತ್ರಿಕೆಯ ಒಡೆತನದ ಹೆಸರು ಮಾತ್ರ ಬದಲಾಗಿಲ್ಲ. ಇಂದಿಗೂ ಬೆನ್ನೆಟ್ ಮತ್ತು ಕೋಲಮನ್ ಹೆಸರಿನದೇ ಕೋಲುಗಾರಿಕೆ!

ಬಿಜೆಪಿಯ ಚಾಣಾಕ್ಷ ಅಮಿತ್ ಶಾ ಆಟವನ್ನು ಬಲ್ಲವರಾರು?

ಆಂತರಿಕ ಸಂಘರ್ಷದಿಂದ ಕಂಗಾಲಾಗಿರುವ ರಾಜ್ಯ ಬಿಜೆಪಿಯ ಇಬ್ಬಣಗಳಿಗೆ ಕೇಂದ್ರ ಸಚಿವ ಅಮಿತ್ ಶಾ ಹಲ್ವಾ ತಿನ್ನಿಸುತ್ತಿದ್ದಾರೆ. ಅಂದ ಹಾಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕು ಅಂತ ಯತ್ನಾಳ್ ಆ್ಯಂಡ್ ಟೀಮು ಪಟ್ಟು ಹಿಡಿದಿದ್ದರೆ, ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲೇಬೇಕು, ಮುಂದಿನ ವಿಧಾನಸಭಾ ಚುನಾವಣೆಯನ್ನು ವಿಜಯೇಂದ್ರ ನೇತೃತ್ವದಲ್ಲೇ ಎದುರಿಸಬೇಕು ಅಂತ ಮತ್ತೊಂದು ಟೀಮು ವರಿಷ್ಠರ ಮೇಲೆ ಒತ್ತಡ ಹೇರುತ್ತಿದೆ.

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ವಿಧಾನಸೌಧದ ಮೂರನೇ ಅಂತಸ್ತಿನಲ್ಲಿರುವ ಗೃಹ ಸಚಿವ ಡಾ.ಪರಮೇಶ್ವರ್ ಅವರ ಕೊಠಡಿಯಲ್ಲಿ ಮೊನ್ನೆ ಶುಕ್ರವಾರ ಮಹತ್ವದ ಸಭೆ ನಡೆದಿದೆ. ಈ ಸಭೆಯಲ್ಲಿ ಮಾತನಾಡಿದ ಸಚಿವರ ಪಡೆ ಒಂದು ನಿರ್ಣಾಯಕ ಹೆಜ್ಜೆ ಇಡಲು ತೀರ್ಮಾನಿಸಿದೆ. ಮುಂದಿನ ದಿನಗಳಲ್ಲಿ ಉದ್ಭವವಾಗುವ ರಾಜಕೀಯ ಸನ್ನಿವೇಶವನ್ನು ಎದುರಿಸಲು ನಾವು ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಬೇಕು ಎಂಬುದು ಈ ತೀರ್ಮಾನ. ಅರ್ಥಾತ್, ಮುಂದಿನ ಕೆಲವೇ ದಿನಗಳಲ್ಲಿ ಅಹಿಂದ ವರ್ಗಗಳ ಶಕ್ತಿಯನ್ನು ತೋರ್ಪಡಿಸುವ ಬೃಹತ್ ಸಮಾವೇಶ ನಡೆಸುವುದು ಈ ಸಚಿವರ ತೀರ್ಮಾನ.

ಅಂದ ಹಾಗೆ, ಗೃಹ ಸಚಿವ ಪರಮೇಶ್ವರ್ ಅವರ ಕೊಠಡಿಯಲ್ಲಿ ನಡೆದ ಈ ಸಭೆಯಲ್ಲಿದ್ದವರು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹಾದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಸಹಕಾರ ಸಚಿವ ಕೆ.ಎನ್.ರಾಜಣ್ಣ. ಗಮನಿಸಬೇಕಾದ ಸಂಗತಿ ಎಂದರೆ ಇತ್ತೀಚಿನ ದಿನಗಳಲ್ಲಿ ಈ 'ಫೋರ್‌ಮ್ಯಾನ್ ಆರ್ಮಿ' ಪದೇ ಪದೇ ಸಭೆ ಸೇರುತ್ತಿದೆ. ಅಷ್ಟೇ ಅಲ್ಲ, ಒಂದು ಅಜೆಂಡಾ ಸೆಟ್ ಮಾಡಿ ಅದರ ಅನುಸಾರ ಹೆಜ್ಜೆ ಇಡುತ್ತಿದೆ. ಮೂಲಗಳ ಪ್ರಕಾರ, ಸಿದ್ದರಾಮಯ್ಯ ಅವರು ಸಿಎಂ ಆಗಿರುವವರೆಗೆ ಈ ಫೋರ್‌ಮ್ಯಾನ್ ಆರ್ಮಿ ಯಾವ ತಕರಾರೂ ಎತ್ತುವುದಿಲ್ಲ. ಆದರೆ ಒಂದು ವೇಳೆ ಸಿದ್ದರಾಮಯ್ಯ ಅವರು ಕೆಳಗಿಳಿಯುವ ಸನ್ನಿವೇಶ ನಿರ್ಮಾಣವಾದರೆ ಸಿಎಂ ಹುದ್ದೆಗೆ ಲಗ್ಗೆ ಹಾಕುವುದು ಅದರ ನಿರ್ಧಾರ. ಎಷ್ಟೇ ಆದರೂ ಪರಮೇಶ್ವರ್ ಅವರು ಎಂಟು ವರ್ಷ ಕಾಲ ಕೆಪಿಸಿಸಿ ಅಧ್ಯಕ್ಷರಾಗಿದ್ದವರು. ಅಷ್ಟೇ ಅಲ್ಲ, ನಾಲ್ಕು ದಶಕಗಳಿಂದ ಪಕ್ಷಕ್ಕಾಗಿ ದುಡಿದವರು. ಹೀಗಾಗಿ ಪರ್ಯಾಯ ನಾಯಕತ್ವದ ಪ್ರಶ್ನೆ ಬಂದರೆ ಪರಮೇಶ್ವರ್ ತಮ್ಮ ಏಕೈಕ ಕ್ಯಾಂಡಿಡೇಟು ಎಂಬುದು ಈ ಫೋರ್‌ಮ್ಯಾನ್ ಆರ್ಮಿಯ ತೀರ್ಮಾನ.

ಹೀಗೆ ಅಜೆಂಡಾ ಸೆಟ್ ಮಾಡಿಕೊಂಡು ಫೀಲ್ಡಿಗಿಳಿದಿರುವ ಫೋರ್‌ಮ್ಯಾನ್ ಆರ್ಮಿ, ಸಿದ್ದರಾಮಯ್ಯ ಅವರು ಕೆಳಗಿಳಿದರೆ ಅವರ ಜಾಗಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಬರಬೇಕು ಎಂಬ ವಾದವನ್ನು ಒಪ್ಪುತ್ತಿಲ್ಲ. ಕಾರಣ ಕೇಳಿದರೆ, ಕರ್ನಾಟಕದಲ್ಲಿ ಡಿ.ಕೆ.ಶಿವಕುಮಾರ್ ಮಾತ್ರ ಪಕ್ಷ ಕಟ್ಟಿದರಾ? ನಾವು ಕಟ್ಟಿಲ್ಲವಾ? ಅಂತ ಪಕ್ಷದ ವರಿಷ್ಠರಿಗೇ ಮೆಸೇಜು ಕಳಿಸುತ್ತಿದೆ. ನೋಡುತ್ತಾ ಹೋದರೆ ತಮ್ಮ ತಮ್ಮ ಜಿಲ್ಲೆಗಳ ವ್ಯಾಪ್ತಿಯಲ್ಲಿ ಎಲ್ಲರೂ ಶಕ್ತಿಶಾಲಿಗಳೇ. ಇಲ್ಲದಿದ್ದರೆ ಚಿಕ್ಕೋಡಿ ಲೋಕಸಭಾ ಕ್ಷೇತ್ರದಿಂದ ಸತೀಶ್ ಜಾರಕಿಹೊಳಿ ತಮ್ಮ ಪುತ್ರಿಯನ್ನು ಗೆಲ್ಲಿಸಿಕೊಂಡು ಬರಲು ಸಾಧ್ಯವಾಗುತ್ತಿತ್ತೇ? ಅಥವಾ ಚಾಮರಾಜನಗರ ಕ್ಷೇತ್ರದಿಂದ ತಮ್ಮ ಪುತ್ರ ಸುನೀಲ್ ಬೋಸ್ ಅವರನ್ನು ಗೆಲ್ಲಿಸಿಕೊಂಡು ಬರಲು ಮಹಾದೇವಪ್ಪ ಅವರಿಗೆ ಸಾಧ್ಯವಾಗುತ್ತಿತ್ತೇ? ಇದಕ್ಕೆ ಹೋಲಿಸಿ ನೋಡಿದರೆ ಎಷ್ಟು ಮಂದಿ ಕಾಂಗ್ರೆಸ್ ನಾಯಕರು ತಮ್ಮ ಕುಟುಂಬ ದವರನ್ನು, ಪಕ್ಷದ ಕಾರ್ಯಕರ್ತರನ್ನು ಗೆಲ್ಲಿಸಿಕೊಂಡು ಬಂದಿದ್ದಾರೆ? ಹೀಗಾಗಿ ಪಕ್ಷ ಕಟ್ಟಿದವರು ಎಂಬ ಹೆಸರಿನಲ್ಲಿ ಶಾಸಕರನ್ನು ಬುಲ್ಡೋಜ್ ಮಾಡಿ ಪರ್ಯಾಯ ನಾಯಕನ ಆಯ್ಕೆ ಆಗಬಾರದು. ಬದಲಿಗೆ ಶಾಸಕಾಂಗ ನಾಯಕನ ಆಯ್ಕೆಗಾಗಿ ಶಾಸಕಾಂಗ ಸಭೆ ನಡೆಸಲೇಬೇಕು ಎಂಬುದು ಈ ಫೋರ್‌ಮ್ಯಾನ್ ಆರ್ಮಿಯ ಮಾತು. ಹೀಗಾಗಿಯೇ ಅದು ಮುಂದಿನ ದಿನಗಳಲ್ಲಿ ಉದ್ಭವವಾಗುವ ರಾಜಕೀಯ ಸನ್ನಿವೇಶ ತನಗೆ ಪ್ಲಸ್ ಆಗಲಿ ಎಂಬ ಕಾರಣಕ್ಕಾಗಿ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗುತ್ತಿದೆ.

ಇದಕ್ಕೆ ಮತ್ತೊಂದು ಕಾರಣವೆಂದರೆ ಕೇಂದ್ರದ ಜಾರಿ ನಿರ್ದೇಶನಾಲಯ. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಅದು ಆಗಾಗ ಸಿಎಂ ಸಿದ್ದರಾಮಯ್ಯ ಅವರಿಗೆ ಲೈಟ್ ಶಾಕ್ ಕೊಡುತ್ತಿದೆ. ಮತ್ತದು ಇಂಥ ಶಾಕ್ ಕೊಟ್ಟಾಗಲೆಲ್ಲ ಡಿಕೆಶಿ ಆಪ್ತ ಶಾಸಕರು ರಪಕ್ಕಂತ ಮೇಲೆದ್ದು ನಿಂತು ಸಿಎಂ ಆಯ್ಕೆ ಹೈಕಮಾಂಡ್ ತೀರ್ಮಾನವೇ ಹೊರತು ಶಾಸಕರದಲ್ಲ ಎಂಬಂಥ ಗರ್ನಲ್ಲುಗಳನ್ನು ಬಿಸಾಡುತ್ತಿದ್ದಾರೆ. ಇಂಥ ಸನ್ನಿವೇಶದಲ್ಲಿ ತಾವು ಮೈ ಮರೆತು ಕೂರಬಾರದು ಎಂಬುದು ಫೋರ್‌ಮ್ಯಾನ್ ಆರ್ಮಿ ತೀರ್ಮಾನ. ಇದರ ಪರಿಣಾಮವಾಗಿಯೇ ಅದೀಗ ತನ್ನ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದೆ.

ಪರ್ಯಾಯಕ್ಕೆ ಖರ್ಗೆ ರೆಡಿ?

ಹೀಗೆ ಫೋರ್‌ಮ್ಯಾನ್ ಆರ್ಮಿ ವತಿಯಿಂದ ಪರ್ಯಾಯ ನಾಯಕತ್ವಕ್ಕೆ ಡಾ.ಪರಮೇಶ್ವರ್ ಅವರ ಹೆಸರು ಮುಂದೆ ಬಂದಿರುವುದೇನೋ ಸರಿ. ಆದರೆ ಪರ್ಯಾಯ ನಾಯಕತ್ವದ ವಿಷಯ ಬಂದರೆ ಪಕ್ಷದ ದಿಲ್ಲಿಯ ಪಡಸಾಲೆಯಿಂದ ಬೇರೆಯೇ ಕತೆ ಕೇಳಿ ಬರುತ್ತಿದೆ. ಅದರ ಪ್ರಕಾರ, ಮುಖ್ಯಮಂತ್ರಿ ಹುದ್ದೆಯಿಂದ ಸಿದ್ದರಾಮಯ್ಯ ಕೆಳಗಿಳಿಯುವುದೇ ಆದರೆ ಆ ಜಾಗಕ್ಕೆ ಬರಲು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ರೆಡಿ ಇದ್ದಾರೆ.



ಇವತ್ತಿನ ಸ್ಥಿತಿಯಲ್ಲಿ ಸಿದ್ದರಾಮಯ್ಯ ಅವರ ಜಾಗಕ್ಕೆ ಬರಲು ಡಿ.ಕೆ.ಶಿವಕುಮಾರ್ ರೆಡಿ ಇರುವುದೇನೋ ನಿಜ. ಆದರೆ ಸಿದ್ದರಾಮಯ್ಯ ಗ್ಯಾಂಗು ಮಾತ್ರ ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಆಗಿ ನೋಡಲು ಬಯಸುತ್ತಿಲ್ಲ. ಪರಿಣಾಮ, ಪರ್ಯಾಯ ನಾಯಕತ್ವಕ್ಕೆ ಯಾರು? ಎಂಬ ಪ್ರಶ್ನೆ ಮೇಲೆದ್ದರೆ ಡಿಕೆಶಿ ವರ್ಸಸ್ ಪರಮೇಶ್ವರ್ ನಡುವೆ ಸಂಘರ್ಷ ಶುರುವಾಗುತ್ತದೆ. ಈ ಸಂಘರ್ಷ ವಿಕೋಪಕ್ಕೆ ಹೋದರೆ ಕಾಂಗ್ರೆಸ್ ವರಿಷ್ಠರು 'ಇಬ್ಬರೂ ಬೇಡ, ಮೂರನೆಯವರು ಬರಲಿ' ಅನ್ನಬಹುದು.

ಅಂದ ಹಾಗೆ, ಲೋಕಸಭಾ ಚುನಾವಣೆಗೂ ಮುನ್ನ ಇಂಥ ಮಾತು ಶುರುವಾದಾಗ ರಾಹುಲ್ ಗಾಂಧಿ ಮಧ್ಯೆ ಪ್ರವೇಶಿಸಿದ್ದರಂತೆ. ''ಖರ್ಗೇಜಿ, ಯಾವ ಕಾರಣಕ್ಕೂ ನೀವು ರಾಜ್ಯ ರಾಜಕಾರಣಕ್ಕೆ ಹೋಗಬೇಡಿ. ಈ ಸಲ ದಿಲ್ಲಿ ಗದ್ದುಗೆಯ ಮೇಲೆ ನಾವೇ ಕೂರುತ್ತೇವೆ. ಆಗ ಸಹಜವಾಗಿಯೇ ನೀವು ಟಾಪ್ ಲೆವೆಲ್ಲಿಗೆ ಹೋಗುತ್ತೀರಿ'' ಎಂದಿದ್ದರಂತೆ. ಹೀಗೆ ರಾಹುಲ್ ಗಾಂಧಿ ಅವರು ಖರ್ಗೆಯವರಿಗೆ ಹೇಳಿದ ಮಾತು ಕರ್ನಾಟಕದಲ್ಲಿ ಅನುರಣಿಸಿತಲ್ಲದೆ, ಲೋಕಸಭೆ ಚುನಾವಣೆಯ ನಂತರ ಖರ್ಗೆ ಪ್ರಧಾನಿ ಆದರೆ ಅಚ್ಚರಿಪಡಬೇಡಿ ಎಂಬ ಮಾತುಗಳೂ ಕೇಳಿ ಬಂದಿದ್ದವು. ಆದರೆ ಲೋಕಸಭಾ ಚುನಾವಣೆಯಲ್ಲಿ ಪವಾಡ ನಡೆಯಲಿಲ್ಲ, ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಅಧಿಕಾರ ಹಿಡಿಯಲಿಲ್ಲ. ಹೀಗಾಗಿ ಖರ್ಗೆಯವರಿಗೆ ಕರ್ನಾಟಕದ ರಾಜಕಾರಣಕ್ಕೆ ಹಿಂದಿರುಗುವ ಮನಸ್ಸಾಗಿದೆ. ಹಾಗಂತ ಅವರೇನೂ ಬಹಿರಂಗವಾಗಿ ತಮ್ಮ ಆಸೆಯನ್ನು ತೋಡಿಕೊಂಡಿಲ್ಲ, ಆದರೆ ಇತ್ತೀಚಿನ ದಿನಗಳಲ್ಲಿ ಅವರ ಬಳಿ ಮಾತನಾಡಿದ ಬಹುತೇಕ ಕಾಂಗ್ರೆಸ್ ನಾಯಕರಿಗೆ ಅವರಿಗಿರುವ ಏಕೈಕ ಕೊರಗಿನ ಕುರುಹು ಸಿಗುತ್ತಿದೆ. ಯಾಕೆಂದರೆ ತಮ್ಮ ಬಳಿ ಕಷ್ಟ ಹೇಳಲು ಬರುವ ಹಲವು ನಾಯಕರ ಬಳಿ ತಮ್ಮ ನೋವನ್ನು ತೋಡಿಕೊಳ್ಳುತ್ತಿರುವ ಖರ್ಗೆಯವರು, ''ನಿಮ್ಮದು ಕಷ್ಟ ಎನ್ನುತ್ತೀರಿ. ಆದರೆ ನನ್ನ ನೋವು ಏನು ಅಂತ ಹೇಳಲಿ? 1999ರಲ್ಲಿ ಪಕ್ಷ ಅಧಿಕಾರಕ್ಕೆ ಬಂದಾಗ ನಾನು ಸಿಎಂ ಆಗಬೇಕಿತ್ತು. ಆದರೆ ಅದು ಎಸ್.ಎಂ.ಕೃಷ್ಣ ಅವರ ಪಾಲಾಯಿತು. ಇನ್ನು 2004ರಲ್ಲಿ ಅತಂತ್ರ ವಿಧಾನಸಭೆ ರಚನೆಯಾಗಿ ಜೆಡಿಎಸ್ ಜತೆ ಸೇರಿ ಮೈತ್ರಿ ಸರಕಾರ ಮಾಡುವುದು ಅನಿವಾರ್ಯವಾದಾಗ ನಾನೇ ಸಿಎಂ ಆಗಬೇಕಿತ್ತು. ವರಿಷ್ಠರ ಆಯ್ಕೆ ಕೂಡಾ ನಾನೇ ಆಗಿದ್ದೆ. ಆದರೆ ಮಾಜಿ ಪ್ರಧಾನಿ ದೇವೇಗೌಡರು ನನ್ನ ಬದಲು ಧರ್ಮಸಿಂಗ್ ಸಿಎಂ ಆಗಲಿ ಅಂತ ಒತ್ತಡ ಹೇರಿ ಅವಕಾಶ ತಪ್ಪಿಸಿದರು. ಹೋಗಲಿ, 2008ರಲ್ಲಿ ಪಕ್ಷೇತರರ ಜತೆ ಕೈ ಜೋಡಿಸಿ ಕಾಂಗ್ರೆಸ್-ಜೆಡಿಎಸ್ ಅಧಿಕಾರದ ಸನಿಹ ಬಂದಾಗ, 'ಖರ್ಗೆ ನೇತೃತ್ವದಲ್ಲಿ ಸರಕಾರ ರಚಿಸೋಣ' ಅಂತ ದೇವೇಗೌಡರು ಕಾಂಗ್ರೆಸ್ ವರಿಷ್ಠರಿಗೆ ಮೆಸೇಜ್ ಕಳಿಸಿದರು. ಆದರೆ ನಾನೆಲ್ಲಿ ಸಿಎಂ ಆಗುತ್ತೇನೋ ಅಂತ ನಮ್ಮವರೇ ಪಕ್ಷೇತರರ ಶಕ್ತಿ ಬಿಜೆಪಿಗೆ ದಕ್ಕುವಂತೆ ಮಾಡಿದರು. 2013ರಲ್ಲಿ ಸಿದ್ದರಾಮಯ್ಯ ಎಂಟರ್ ಆಗಿ ನನಗೆ ಅವಕಾಶ ತಪ್ಪಿಹೋಯಿತು. ಹೀಗೆ ನೋಡುತ್ತಾ ಹೋದರೆ ಒಂದಲ್ಲ, ಎರಡಲ್ಲ ಹಲವು ಬಾರಿ ನನಗೆ ಸಿಎಂ ಹುದ್ದೆ ತಪ್ಪಿದೆ'' ಎನ್ನುತ್ತಿದ್ದಾರೆ. ಅರ್ಥಾತ್, ಒಂದು ಬಾರಿಯೂ ಕರ್ನಾಟಕದ ಮುಖ್ಯಮಂತ್ರಿಯಾಗುವ ತಮ್ಮ ಕನಸು ಈಡೇರದ ಬಗ್ಗೆ ಖರ್ಗೆ ತುಂಬ ಕೊರಗುತ್ತಿದ್ದಾರೆ. ಹೀಗೆ ಕೊರಗು ಉಳಿದಿದೆ ಎಂದರೆ ಅದನ್ನು ಪರಿಹರಿಸಿಕೊಳ್ಳುವ ಆಸೆ ಅವರಿಗಿದೆ ಅಂತಲೇ ಅರ್ಥ ಎಂಬುದು ದಿಲ್ಲಿಯ ಕಾಂಗ್ರೆಸ್ ನಾಯಕರ ಮಾತು.

ಅಮಿತ್ ಶಾ ಆಟ ಬಲ್ಲವರಾರು?

ಈ ಮಧ್ಯೆ ಆಂತರಿಕ ಸಂಘರ್ಷದಿಂದ ಕಂಗಾಲೆದ್ದು ಹೋಗಿರುವ ರಾಜ್ಯ ಬಿಜೆಪಿಯ ಇಬ್ಬಣಗಳಿಗೆ ಕೇಂದ್ರ ಸಚಿವ ಅಮಿತ್ ಶಾ ಹಲ್ವಾ ತಿನ್ನಿಸುತ್ತಿದ್ದಾರೆ. ಅಂದ ಹಾಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಬೇಕು ಅಂತ ಯತ್ನಾಳ್ ಆ್ಯಂಡ್ ಟೀಮು ಪಟ್ಟು ಹಿಡಿದಿದ್ದರೆ, ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲೇಬೇಕು. ಮುಂದಿನ ವಿಧಾನಸಭಾ ಚುನಾವಣೆಯನ್ನು ವಿಜಯೇಂದ್ರ ನೇತೃತ್ವದಲ್ಲೇ ಎದುರಿಸಬೇಕು ಅಂತ ಮತ್ತೊಂದು ಟೀಮು ವರಿಷ್ಠರ ಮೇಲೆ ಒತ್ತಡ ಹೇರುತ್ತಿದೆ.

ಈ ಗೊಂದಲದ ನಡುವೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಕಳೆದ ಬುಧವಾರ ಅಮಿತ್ ಶಾ ಅವರಿಗೆ ಫೋನು ಮಾಡಿ, ''ಸರ್, ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬಾರದು ಅಂತ ವಿನಾಕಾರಣ ಕೆಲವರು ಗಲಾಟೆ ಮಾಡುತ್ತಿದ್ದಾರೆ.ನೋಡಿದರೆ ಇದೇಕೋ ಅತಿಯಾಯಿತು ಅನ್ನಿಸುತ್ತಿದೆ. ಈ ಬಗ್ಗೆ ನಾನು ಪದೇ ಪದೇ ಕಂಪ್ಲೇಂಟು ಕೊಟ್ಟರೂ ಪ್ರಯೋಜನವಾಗುತ್ತಿಲ್ಲ. ಹೀಗಾದರೆ ನಾವು ಪಕ್ಷ ಕಟ್ಟುವುದಾದರೂ ಹೇಗೆ?'' ಅಂತ ನೋವು ತೋಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರನ್ನು ಸಮಾಧಾನಿಸಿದ ಅಮಿತ್ ಶಾ, ''ಡೋಂಟ್ ವರಿ ಯಡೂರಪ್ಪಾಜಿ. ನನಗೆ ಕರ್ನಾಟಕದ ಫೀಡ್‌ಬ್ಯಾಕು ಬಂದಿದೆ. ಅದರ ಆಧಾರದ ಮೇಲೆ ಹೇಳುತ್ತೇನೆ. ವಿಜಯೇಂದ್ರ ಪಕ್ಷದ ರಾಜ್ಯಾಧ್ಯಕ್ಷರಾಗಿ ಸೆಟ್ಲ್ ಆಗುತ್ತಾರೆ. ಇದಾದ ನಂತರ ಯತ್ನಾಳ್ ಮತ್ತಿತರರು ಏನು ಮಾಡಲು ಸಾಧ್ಯ? ಹೀಗಾಗಿ ಈ ವಿಷಯದ ಬಗ್ಗೆ ತುಂಬ ಯೋಚಿಸಬೇಡಿ. ಯತ್ನಾಳ್ ಮತ್ತಿತರರ ಮೇಲೆ ಹರಿಹಾಯದಂತೆ ನಿಮ್ಮ ಕಡೆಯವರಿಗೆ ಸೂಚನೆ ಕೊಡಿ'' ಎಂದಿದ್ದಾರೆ.

ಯಾವಾಗ ಅಮಿತ್ ಶಾ ಬಾಯಲ್ಲಿ ಈ ಮಾತು ಬಂತೋ, ಇದಾದ ನಂತರ ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ನಿವಾಸದಲ್ಲಿ ವಿಜಯೇಂದ್ರ ಪರ ನಡೆಯುತ್ತಿದ್ದ ಸಭೆಗಳಿಗೆ ಯಡಿಯೂರಪ್ಪ ಬ್ರೇಕ್ ಹಾಕಿದ್ದಾರೆ.

ಯತ್ನಾಳ್ ಬಣಕ್ಕೂ ಹಲ್ವಾ

ಹೀಗೆ ಒಂದು ಕಡೆಯಿಂದ ಯಡಿಯೂರಪ್ಪ ಅವರನ್ನು ಸಮಾಧಾನಿಸಿದ ಅಮಿತ್ ಶಾ, ಮತ್ತೊಂದು ಕಡೆಯಿಂದ ಯತ್ನಾಳ್ ಆ್ಯಂಡ್ ಟೀಮಿನ ಬಾಯಿಗೆ ಬೀಗ ಹಾಕಿದ್ದಾರಾ? ಅಂತ ನೋಡಿದರೆ ಅದರ ಸಣ್ಣ ಸುಳಿವೂ ಸಿಗುವುದಿಲ್ಲ. ಬದಲಿಗೆ ಮೊನ್ನೆ ದಿಲ್ಲಿಗೆ ಹೋದ ವಿಜಯೇಂದ್ರ ಅವರಿಗೆ ಅಮಿತ್ ಶಾ ಕ್ಲಾಸು ತಗೊಂಡಿದ್ದಾರೆ ಎಂಬ ಸುದ್ದಿ ಯತ್ನಾಳ್ ಟೀಮಿನಲ್ಲಿ ಅನುರಣಿಸುತ್ತಿದೆ. ಅದರ ಪ್ರಕಾರ, ದಿಲ್ಲಿಗೆ ಹೋದ ವಿಜಯೇಂದ್ರ ಅವರನ್ನು ತರಾಟೆಗೆ ತೆಗೆದುಕೊಂಡ ಅಮಿತ್ ಶಾ ಅವರು, ''ಪಕ್ಷದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲು ನೀವು ವಿಫಲರಾಗಿದ್ದೀರಿ. ಇದು ಒಳ್ಳೆಯದಲ್ಲ'' ಅಂತ ಹೇಳಿದ್ದಾರೆ. ಹಾಗೆಯೇ, ''ನಿಮಗೆ ಬೇಕಾದವರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡುತ್ತಿರುವ ಕ್ರಮವೂ ಸರಿ ಇಲ್ಲ'' ಅಂತ ಝಾಡಿಸಿದ್ದಾರೆ. ಹೀಗೆ ಅವರಾಡಿದ ಮಾತು ಕೇಳಿ ಸುಸ್ತಾದ ವಿಜಯೇಂದ್ರ, ಬೇರೆ ದಾರಿ ಕಾಣದೆ ರಾಜ್ಯಕ್ಕೆ ವಾಪಸಾಗಿದ್ದಾರೆ ಎಂಬುದು ಯತ್ನಾಳ್ ಕ್ಯಾಂಪಿನ ಮಾತು.

ಹೀಗೆ ರಾಜ್ಯ ಬಿಜೆಪಿಯ ಇಬ್ಬಣಗಳಿಗೂ ಒಂದೊಂದು ಮೆಸೇಜು ರವಾನಿಸಿ ಸಮಾಧಾನಿಸುತ್ತಿರುವ ಅಮಿತ್ ಶಾ ಅಂತಿಮವಾಗಿ ಯಾವ ಆಟ ಆಡುತ್ತಾರೋ ಗೊತ್ತಿಲ್ಲ. ಆದರೆ ಬಿಜೆಪಿಯಲ್ಲಿರುವ ತಟಸ್ಥ ಬಣದ ಪ್ರಕಾರ, ವಿಜಯೇಂದ್ರ ಸದ್ಯದಲ್ಲೇ ರಾಜ್ಯಾಧ್ಯಕ್ಷರಾಗಿ ಸೆಟ್ಲ್ ಆಗಲಿದ್ದಾರೆ. ಆದರೆ ಪದಾಧಿಕಾರಿಗಳ ಪಟ್ಟಿಯಲ್ಲಿರುವ ಅವರ ಹಲವು ಆಪ್ತರು ಹೊರಬಿದ್ದು, ಭಿನ್ನರ ಟೀಮಿನ ಹಲವರು ಒಳಗೆ ಬರಲಿದ್ದಾರೆ.

ಲಾಸ್ಟ್ ಸಿಪ್: ಇನ್ನು ಕರ್ನಾಟಕದಲ್ಲಿ ಬಿಜೆಪಿ ಉಸ್ತುವಾರಿಯಾಗಿರುವ ರಾಧಾಮೋಹನ ದಾಸ್ ಅಗರ್ವಾಲ್ ಎತ್ತಂಗಡಿಯಾಗುವ ಕುರುಹುಗಳು ಕಾಣಿಸಿಕೊಂಡಿವೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕಕ್ಕೆ ಬಂದ ಅಗರ್ವಾಲ್ ಚೆನ್ನಾಗಿಯೇ ಕೆಲಸ ಮಾಡಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಬಿಜೆಪಿ-ಜೆಡಿಎಸ್ ನಡುವಣ ಮೈತ್ರಿಗೆ ಗುನ್ನ ಹೊಡೆಯಲು ಯತ್ನಿಸಿದವರ 'ಗುಡ್‌ದಾ' ಅಲುಗಾಡಿಸಿದ್ದರು. ಪರಿಣಾಮವಾಗಿ, ಕರ್ನಾಟಕದಲ್ಲಿ ಮಿತ್ರಕೂಟ 19 ಕ್ಷೇತ್ರಗಳಲ್ಲಿ ಗೆಲುವು ಗಳಿಸಿದ ಮೇಲೆ ಅಮಿತ್ ಶಾ ಅವರೇ ಅಗರ್ವಾಲ್‌ಗೆ ಶಭಾಷ್‌ಗಿರಿ ಕೊಟ್ಟಿದ್ದರು.

ಆದರೆ ಹೀಗೆ ಮೆಚ್ಚುಗೆ ಪಡೆದ ಅಗರ್ವಾಲ್ ಬರುಬರುತ್ತಾ ಬಾಸ್ ಗೇಟಪ್ಪಿಗೆ ತಿರುಗಿ ಹಲವರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಇತ್ತೀಚೆಗೆ ಶ್ರೀರಾಮುಲು ಎಪಿಸೋಡು ಭುಗಿಲೇಳಲೂ ಅಗರ್ವಾಲ್ ಕಾರಣ ಎಂಬುದು ರಹಸ್ಯವಾಗುಳಿದಿಲ್ಲ, ಪರಿಣಾಮವಾಗಿ, ಕರ್ನಾಟಕ ಬಿಜೆಪಿಯಲ್ಲಿ 'ಅಗರ್ವಾಲ್ ಗೋ ಬ್ಯಾಕ್' ಎಂಬ ಕೂಗು ಶುರುವಾಗಿದೆ. ಬಿಜೆಪಿ ಮೂಲಗಳ ಪ್ರಕಾರ, ಅಗರ್ವಾಲ್ ಅವತಾರಗಳ ಬಗ್ಗೆ ಕೆಲ ನಾಯಕರು ಅಮಿತ್ ಶಾ ಅವರಿಗೆ ದೂರು ನೀಡಿದ್ದಾರೆ.

ಸೂರ್ಯನೆಡೆ ಮುನ್ನುಗ್ಗಲು ಮಕ್ಕಳಿಗೆ ಹೇಳಬೇಕಾಗಿಲ್ಲ

ಕೆಲ ವಿದ್ಯಾರ್ಥಿಗಳ ಮನೆಯಲ್ಲಿ ತೀರಾ ಬಡತನ, ತಮ್ಮ ಯಾವುದೇ ಬಯಕೆಗಳನ್ನು ಈಡೇರಿಸಿಕೊಳ್ಳಲಾಗುತ್ತಿಲ್ಲ ಎಂಬ ಹತಾಶೆ. ಮತ್ತೆ ಕೆಲವರ ಹೆತ್ತವರಲ್ಲಿ ಸಾಮರಸ್ಯವಿಲ್ಲ, ದಿನಾ ಜಗಳ. ಇನ್ನು ಕೆಲವರ ಮನೆಗಳಲ್ಲಿ ಹೆತ್ತವರಿಗೆ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆ ಒಂದೂ ಗೊತ್ತಿಲ್ಲ. ಅದರ ಬಗ್ಗೆ ತಲೆಕೆಡಿಸಿಕೊಳ್ಳುವಷ್ಟು ಅವರಿಗೆ ವ್ಯವಧಾನವಿಲ್ಲ. ಹೀಗಾದಲ್ಲಿ ಮಕ್ಕಳು ದಾರಿ ತಪ್ಪುವುದು ಸಹಜ ತಾನೇ?

ಒಡಲಾಳ

ಡಾ. ಪರಿಣಿತ ರವಿ

vveditoped@gmail.com

ಯಾವುದೇ ಕಾರ್ಯಕ್ರಮ, ಸಭೆ-ಸಮಾರಂಭಗಳಲ್ಲಿ ಪರಿಚಯದವರು, ಬಂಧುಗಳು ಎದುರಾದಾಗ, ''ಅಬ್ಬಾ! ಈಗಿನ ಮಕ್ಕಳು ದಿನದ 24 ಗಂಟೆ ಮೊಬೈಲಿಂದ ಕಣ್ಣು ತೆಗೆಯೋದಿಲ್ಲ, ಗುರು-ಹಿರಿಯರು, ಹೆತ್ತವರು ಅನ್ನುವ ಗೌರವವಿಲ್ಲ. ಬುದ್ಧಿಮಾತು ಹೇಳಿದರೆ ಉರಿದುಬೀಳ್ತಾರೆ. ಹೇಗೆ ಸಂಭಾಳಿಸುವುದೋ ಗೊತ್ತಾಗ್ತಿಲ್ಲ. ಈಗಲೇ ಹೀಗಾದರೆ ಮುಂದೆ ಹೇಗೋ?'' ಎಂಬಂಥ ಮಾತುಗಳು ಸಾಧಾರಣವಾಗಿ ಕೇಳಿಬರುವುದುಂಟು. ಇದು ವಾಸ್ತವ ಕೂಡ. ಹಾಗಂತ, ಇದಕ್ಕೆ ಮಕ್ಕಳನ್ನೇ ಸಂಪೂರ್ಣ ಹೊಣೆಮಾಡಿ, 'ನಮ್ಮದೇನೂ ಪಾತ್ರವಿಲ್ಲ' ಎಂದು ಕೈತೊಳೆದುಕೊಳ್ಳಲಾದೀತೇ?

ಇಂದಿನ ಮಕ್ಕಳು, ಅದರಲ್ಲೂ 18-22ರ ವಯೋಮಾನದವರು ಯಾವುದೋ ಭ್ರಮಾಲೋಕದಲ್ಲಿ ತೇಲುತ್ತಿದ್ದಾರೆ. ಸಮಾನ ವಯಸ್ಕರೆಲ್ಲ ಜತೆಗೂಡಿ ಕುಡಿತ, ಧೂಮಪಾನ, ಮಾದಕ ವಸ್ತುಗಳ ವ್ಯಸನಕ್ಕೆ ಒಡ್ಡಿಕೊಳ್ಳುವುದು ಬಹಳಷ್ಟು ಕಡೆ ಕಂಡುಬರುತ್ತಿದೆ. ಯಾಕೆ ಹೀಗೆ? ರುಚಿಯಾದ ಅಡುಗೆ ತಯಾರಿಸುವುದು ಹೇಗೆ, ಉಡುಪನ್ನು ನವವಿನ್ಯಾಸದಲ್ಲಿ ಹೊಲಿಯುವುದು ಹೇಗೆ ಎಂಬೆಲ್ಲ ವಿಷಯಗಳನ್ನು ಪುಸ್ತಕ ಓದಿ ಕಲಿಯಬಹುದು. ಇಂಥ ಯಾವುದೇ ವಿಚಾರ ಕೇಳಿದರೂ 'ಗೂಗಲ್ ಭಗವಾನ್' ನಮಗೆ ದಾರಿ ತೋರದಿರಲಾರ. ಈಗ ಬಂದಿರುವ 'ಚಾಟ್ ಜಿಪಿಟಿ'ಯಂತೂ ಏನು ಕೇಳಿದರೂ ಪುಟಗಟ್ಟಲೆ ಉತ್ತರವನ್ನು ಹೆಕ್ಕಿ ಕೊಡುತ್ತದೆ. ಆದರೆ, ನಮ್ಮ ಮಕ್ಕಳನ್ನು ಬೆಳೆಸುವುದು ಹೇಗೆಂಬುದನ್ನು ಪುಸ್ತಕ ಓದಿಯೋ, ಗೂಗಲ್ ಸಹಾಯದಿಂದಲೋ ಕಲಿಯಲಾಗದು. ಈ ಕುರಿತಾಗಿ ಮಾರುಕಟ್ಟೆಯಲ್ಲಿ ಹಲವು ಪುಸ್ತಕಗಳು ಲಭ್ಯವಿರಬಹುದು; ಆದರೆ ಅದರಲ್ಲಿ ಹೇಳಿದ ವಿಚಾರಗಳನ್ನು ಎಲ್ಲ ಮಕ್ಕಳಿಗೂ ಅನ್ವಯಿಸಲಾದೀತೇ?

ಪ್ರತಿಯೊಂದು ಮಗುವೂ ವಿಭಿನ್ನ. ಒಂದೇ ತಾಯಿಯ ಇಬ್ಬರು ಮಕ್ಕಳು ಭಿನ್ನವಾಗಿರುವುದನ್ನೂ ತದ್ವಿರುದ್ಧವಾಗಿರುವುದನ್ನೂ ಕಂಡಿದ್ದೇವೆ. ಅನುಭವದಿಂದ ಬಲ್ಲವರೂ ಆಗಿದ್ದೇವೆ. ಮೊದಲ ಮಗುವನ್ನು ಬೆಳೆಸಲು ಅನುಸರಿಸಿದ ರೀತಿಗಳೆಲ್ಲವೂ ಎರಡನೇ ಮಗುವಿಗೂ ಸರಿಹೊಂದುತ್ತವೆ ಎನ್ನಲಾಗದು. ಹೀಗಿರುವಾಗ, ಜಗತ್ತಿನ ಮಕ್ಕಳ ವಿಭಿನ್ನತೆಯನ್ನು ಒಂದೇ ಮಾಪಕದಿಂದ ಅಳೆಯಲಾದೀತೇ? ಪ್ರತಿಯೊಂದು ಮಗುವಿನ ಭಾವನೆಗಳು ಮತ್ತು ಆಲೋಚನೆಗಳು, ಮನೆಯ ಹಾಗೂ ಸುತ್ತಮುತ್ತಲಿನ ಪರಿಸರ, ಅದು ಎದುರಿಸುವ ಸವಾಲುಗಳು ಎಲ್ಲವೂ ಭಿನ್ನವಾಗಿರುವ ಕಾರಣ ಇದಕ್ಕೊಂದು 'ಸಾಮಾನ್ಯೀಕರಿಸಿದ ಸಿದ್ಧಾಂತ'ವನ್ನು ಹೇಳಲಾಗದು. ವಿವಿಧ ಸ್ತರದ ಬೋಧನಾ ವೃತ್ತಿಯಲ್ಲಿ ಸಾಕಷ್ಟು ವರ್ಷಗಳನ್ನು ಕಳೆದಿರುವ ನನಗೆ ಎಲ್ಲ ಹಂತದ ಮಕ್ಕಳ ಸ್ವಭಾವ ಮತ್ತು ಒಡನಾಟದ ಅನುಭವವಿದೆ. ಇದರ ಆಧಾರದ ಮೇಲೆ ಒಂದಿಷ್ಟು ಸಂಗತಿಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ಅದು ಡಿಗ್ರಿ 6ನೇ ಸೆಮಿಸ್ಟರ್ ಮಕ್ಕಳಿಗೆ ಯೂನಿವರ್ಸಿಟಿ ಪರೀಕ್ಷೆಯ ಸಮಯವಾದ್ದರಿಂದ ಒಂದು ವಾರ 'ಸ್ಟಡಿ ಲೀವ್' ನೀಡಲಾಗಿತ್ತು. ಪರೀಕ್ಷೆ ಆರಂಭವಾಗಲು 2 ದಿನವಷ್ಟೇ ಉಳಿದಿತ್ತು. ನಾವು ಬಿ.ಎ. ಇಂಗ್ಲಿಷ್ ವಿದ್ಯಾರ್ಥಿಗಳಿಗೆ, ''ಯಾರೂ ಕಾಲೇಜು ಪರಿಸರದಲ್ಲಿ ಕಾಣಿಸಿಕೊಳ್ಳಬಾರದು, ಮನೆಯಲ್ಲಿದ್ದು ಕೊನೆಯ ಒಂದು ವಾರವಾದರೂ ಓದಬೇಕು'' ಎಂದು ತಿಳಿಸಿದ್ದೆವು. ಜತೆಗೆ, ಸೆಕ್ಯುರಿಟಿಯವರಲ್ಲಿ ಕೆಲ ವಿದ್ಯಾರ್ಥಿಗಳ ಹೆಸರು ಹೇಳಿ, ''ಅವರೇನಾದರೂ ಬಂದರೆ ವಿಭಾಗದ ಮುಖ್ಯಸ್ಥರ ಅನುಮತಿಯಿಲ್ಲದೆ ಒಳಗೆ ಬಿಡಬಾರದು'' ಎಂದು ಹೇಳಿದ್ದೆವು. ಮರುದಿನ ಸುಮಾರು 11 ಗಂಟೆಯ ಹೊತ್ತಿಗೆ, ನಾವು ಹೆಸರಿಸಿದ್ದವರು ಕಾಲೇಜಿನ ಇತರ ವಿಭಾಗದ ವಿದ್ಯಾರ್ಥಿಗಳ ಜತೆ ಬಂದರು. ಸೆಕ್ಯುರಿಟಿಯವರು ಒಳಗೆ ಬಿಡಲಿಲ್ಲವೆಂದು ರೊಚ್ಚಿಗೆದ್ದ ಇಬ್ಬರು ವಿದ್ಯಾರ್ಥಿಗಳು ಕಾಲೇಜಿನ ಗೋಡೆ ಹಾರಿ, ದೊಡ್ಡದೊಂದು ಕಲ್ಲಿನಿಂದ ಗೇಟಿನ ಬೀಗ ಮುರಿದರು. ತಡೆಯಲು ಬಂದ ಸೆಕ್ಯುರಿಟಿಯವರಿಗೆ ಹೊಡೆದು ಗೇಟು ತೆರೆದರು. ಹೊರಗೆ ಕಾದಿದ್ದ ವಿದ್ಯಾರ್ಥಿಗಳೆಲ್ಲ ಒಳನುಗ್ಗಿದರು. ಗಲಾಟೆ ಜೋರಾಗಿ, ಪ್ರಿನ್ಸಿಪಾಲ್, ಡೈರೆಕ್ಟರ್, ಡೀನ್, ಎಚ್‌ಒಡಿ, ಕೆಲವು ಪ್ರಾಧ್ಯಾಪಕರು ಇವರನ್ನು ತಡೆಯಲು ಬಂದಾಗ, ಅವಾಚ್ಯ ಶಬ್ದಗಳಿಂದ ನಿಂದಿಸಿದರು ಆ ವಿದ್ಯಾರ್ಥಿಗಳು. ಪೊಲೀಸರು ಬಂದರು, ಕೇಸ್ ಆಯಿತು. ಕೊನೆಗೆ, ಗಲಾಟೆಯ ಮುಖ್ಯ ಪಾತ್ರಧಾರಿಗಳಾದ ನಾಲ್ವರು ಹುಡುಗರು ಮತ್ತು ಮೂವರು ಹುಡುಗಿಯರನ್ನು ಗುರುತಿಸಿ ಕೇಸ್ ಸ್ಟಡಿ ಮಾಡಲೆಂದು ಪ್ರಾಧ್ಯಾಪಕರ ತಂಡವೊಂದನ್ನು ಕಾಲೇಜು ಆಡಳಿತ ಮಂಡಳಿಯು ನಿಯೋಜಿಸಿತು. ತಂಡದಲ್ಲಿ ನಾನೂ ಒಬ್ಬಳಾಗಿದ್ದೆ, ಹೀಗಾಗಿ ಆ ವಿದ್ಯಾರ್ಥಿಗಳ ಹೆತ್ತವರನ್ನು ಕರೆಸಿ ಮಾತನಾಡಬೇಕಿತ್ತು.

ಆಗ, ಬೀಗ ಒಡೆದ ವಿದ್ಯಾರ್ಥಿಯ ಪೋಷಕರೆಂದರು- ''ನಮ್ಮ ಮಗ ಬಹಳ ಒಳ್ಳೆಯವನು, ಸ್ನೇಹಿತರ ಜತೆ ಸೇರಿ ಹಾಳಾಗಿದ್ದಾನೆ. ಅವನದ್ದೇನೂ ತಪ್ಪಿಲ್ಲ. ಮನೆಯಲ್ಲಿ ನಾವು ತುಂಬಾ ಕಟ್ಟುನಿಟ್ಟು''. ಆತನಿಗೆ ಕುಡಿತ, ಧೂಮಪಾನ, ಡ್ರಗ್ಸ್ ಚಟಗಳಿರುವುದರ ಬಗ್ಗೆ ಅವರಿಗೆ ಹೇಳಿದಾಗ, ''ಅವನು ಮೊದಲು ಹಾಗಿರಲಿಲ್ಲ, ಎಲ್ಲವೂ ಸ್ನೇಹಿತರಿಂದ ಕಲಿತದ್ದು. ನೀವು ಮೊದಲು ಅವರಿಗೆ ಬುದ್ಧಿ ಹೇಳಿ'' ಅಂದರು. ಎರಡನೇ ವಿದ್ಯಾರ್ಥಿಯ ಹೆತ್ತವರು, ''ಸಮಾಜದಲ್ಲಿ ಮರ್ಯಾದಸ್ಥರಾಗಿರುವ ನಾವು ಇವನಿಂದ ತಲೆ ತಗ್ಗಿಸುವಂತಾಯಿತು. ಮನೆಯಲ್ಲಿ ನಾವು ಹೇಳಿದ್ದನ್ನು ಇವನು ಕೇಳುವುದಿಲ್ಲ, ನಿಮ್ಮಿಂದಲೂ ಇವನನ್ನು ಬಗ್ಗಿಸಲು ಆಗುವುದಿಲ್ವಾ?'' ಎಂದು ಮರುಪ್ರಶ್ನಿಸಿದರು. ಮೂರನೇ ವಿದ್ಯಾರ್ಥಿಯ ಮನೆಯವರು, ''ನೋಡಿ ಮೇಡಮ್, ಒಂದು ಹಂತದವರೆಗೆ ಮಕ್ಕಳಿಗೆ ಬುದ್ಧಿ ಹೇಳಬಹುದು. ಇಷ್ಟು ದೊಡ್ಡವನಾಗಿದ್ದಾನೆ, ಮರ್ಯಾದೆಯಿಂದ ಬದುಕಬೇಕೆಂದು ಅವನಿಗೇ ಗೊತ್ತಿರಬೇಡವೇ? ಕಾಲೇಜು ಫೀಸ್ ಕಟ್ಟುವುದಷ್ಟೇ ನಮ್ಮ ಕೆಲಸ. ಹಾಳಾದರೆ ಅವನಿಗೆ ತಾನೇ ನಷ್ಟ.. ನಾವೇನೂ ಮಾಡಲಾಗದು'' ಅಂದರು. ನಾಲ್ಕನೆಯ ವಿದ್ಯಾರ್ಥಿಯ ಮನೆಯವರು, ''ಇದೇನು ಶಾಲೆಯೋ ಕಾಲೇಜೋ? ಇಷ್ಟು ದೊಡ್ಡ ಮಕ್ಕಳ ಹೆತ್ತವರನ್ನು ಹೀಗೆ ಕರೆಸಿಕೊಳ್ಳುವುದು ನಾಚಿಕೆಗೇಡು ಅಲ್ಲವೇ? ನಾವು ಮಗನನ್ನು ಸ್ವತಂತ್ರವಾಗಿ ಬೆಳೆಯಲು ಬಿಟ್ಟಿದ್ದೇವೆ, ಅವನ ವಿಷಯದಲ್ಲಿ ಹೆಚ್ಚು ಮೂಗು ತೂರಿಸುವುದಿಲ್ಲ. ನಮಗಿಲ್ಲದ ಕಾಳಜಿ ನಿಮಗ್ಯಾಕೆ?'' ಎಂದುಬಿಟ್ಟರು. ಇನ್ನುಳಿದ ಮೂವರು ವಿದ್ಯಾರ್ಥಿನಿಯರ ಪೋಷಕರ ಮಾತುಗಳೂ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ!

ಯಾವುದೇ ಪದವಿ ಕೋರ್ಸ್ ಆದರೂ ಮೊದಲ ವರ್ಷದ ಎರಡು ಸೆಮಿಸ್ಟರ್ ಪೇಪರ್ ಇಂಗ್ಲಿಷ್ ಇದೆಯಾದ್ದರಿಂದ ಬಹುತೇಕ ವಿದ್ಯಾರ್ಥಿಗಳು ನನಗೆ ಪರಿಚಿತರೇ. ಆದರೆ ಅವರು ಅಂತಿಮ ವರ್ಷಕ್ಕೆ ತಲುಪಿದಾಗ ಬಹಳಷ್ಟು ಬದಲಾಗಿರುತ್ತಾರೆ. ಆ ಪೈಕಿ ಕೆಲವರಾದರೂ ಮಾತಿಗಿಳಿದಾಗ

ಮನದಾಳದ ಸತ್ಯಗಳನ್ನು ಹೇಳಿದ್ದಿದೆ. ಅದನ್ನು ಕೇಳಿ ನಾನು ದಿಗಿಲುಗೊಂಡಿದ್ದಿದೆ. ಕೆಲವರಿಗೆ ಮನೆಯಲ್ಲಿ ತೀರಾ ಬಡತನ, ತಮ್ಮ ಯಾವುದೇ ಬಯಕೆಗಳನ್ನು ಈಡೇರಿಸಿಕೊಳ್ಳಲಾಗುತ್ತಿಲ್ಲ ಎಂಬ ಹತಾಶೆ. ಮತ್ತೆ ಕೆಲವರ ಹೆತ್ತವರಲ್ಲಿ ಸಾಮರಸ್ಯವಿಲ್ಲ, ದಿನಾ ಜಗಳ. ಇನ್ನು ಕೆಲವರ ಮನೆಗಳಲ್ಲಿ ಹೆತ್ತವರಿಗೆ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆ ಒಂದೂ ಗೊತ್ತಿಲ್ಲ, ಅದರ ಬಗ್ಗೆ ತಲೆಕೆಡಿಸಿಕೊಳ್ಳುವಷ್ಟು ಅವರಿಗೆ ವ್ಯವಧಾನವಿಲ್ಲ. ಹೆಚ್ಚಿನ ಮನೆಗಳಲ್ಲಿ ಅಪ್ಪ-ಅಮ್ಮ ಇಬ್ಬರೂ ಕೆಲಸಕ್ಕೆ ಹೋಗುವವರು. 18 ದಾಟಿದ ಮಕ್ಕಳ ಬಗ್ಗೆ ಇನ್ನೇನು ಕಾಳಜಿ ಮಾಡುವುದಿದೆ ಎಂಬುದು ಅವರ ಧೋರಣೆ. ಇನ್ನು ಕೆಲವೊಂದು ಮನೆಗಳಲ್ಲಿ ಹೆತ್ತವರು ಅವಿದ್ಯಾವಂತರು, ಈಗಿನ ತಂತ್ರಜ್ಞಾನ ಯುಗ ಅವರಿಗೆ ಹೊಸದು. ಹಾಗಾಗಿ ಮಕ್ಕಳು ಏನು ಹೇಳಿದರೂ ಕೇಳುತ್ತಾರೆ, ನಂಬುತ್ತಾರೆ. ಮಕ್ಕಳಿಗೆ ತಮಗಿಂತಲೂ ಹೆಚ್ಚು ಗೊತ್ತು ಎಂಬ ಭಾವ. ಈ ಅಮಾಯಕತೆಯನ್ನೇ ಮಕ್ಕಳು ದುರುಪಯೋಗಪಡಿಸಿಕೊಳ್ಳುತ್ತಾರೆ. ಅಪ್ಪ-ಅಮ್ಮನ ಮುಖವನ್ನೇ ಸರಿಯಾಗಿ ನೋಡಿರದ ಮಕ್ಕಳೂ ಇದ್ದಾರೆ. ಏಕೆಂದರೆ, ಮಕ್ಕಳು ಬೆಳಗ್ಗೆ ಏಳುವಷ್ಟರಲ್ಲಿ ಅವರು ಕೆಲಸಕ್ಕೆ ಹೋಗಿರುತ್ತಾರೆ, ಕೆಲಸ ಮುಗಿದು 11 ಗಂಟೆಗೆ ಮನೆಗೆ ಮರಳುವಷ್ಟರಲ್ಲಿ ಮಕ್ಕಳು ಮಲಗಿರುತ್ತಾರೆ. ''ಅಮ್ಮ ಇಡೀ ದಿನ ಸೀರಿಯಲ್ ನೋಡ್ತಾ ಇರ್ತಾರೆ, ನಾನು ಮನೆಯಲ್ಲಿದ್ದೀನೋ ಇಲ್ಲವೋ ಎಂಬುದೂ ಅವರಿಗೆ ಗೊತ್ತಿರುವುದಿಲ್ಲ. ಮಾತಿಲ್ಲ, ಕಥೆಯಿಲ್ಲ. ಜೀವನ ಬರೀ ಬೋರು'' ಎಂಬುದು ವಿದ್ಯಾರ್ಥಿನಿಯೊಬ್ಬಳ ಅಳಲು. ''ನನಗೆ ಮನೆಯಿಂದ ಒಮ್ಮೆ ತೊಲಗಿದರೆ ಸಾಕೆನಿಸಿದೆ, ಮನೆಯಲ್ಲಿ ಎಲ್ಲದಕ್ಕೂ ಬೈತಾರೆ, ರೇಗುತ್ತಾರೆ'' ಎಂಬುದು ಮತ್ತೊಬ್ಬನ ಮಾತು.

''ಈಗಿನ ಮಕ್ಕಳಿಗೆ ಯಾವುದೇ ಸಮಾರಂಭ ಬೇಕಿಲ್ಲ. ಪೂಜೆಯಲ್ಲಿ, ದೇಗುಲ ಭೇಟಿಯಲ್ಲಿ ಆಸಕ್ತಿಯಿಲ್ಲ. ಸಂಸ್ಕೃತಿ-ಮೌಲ್ಯಗಳೆಂದರೆ ಅಲರ್ಜಿ. ಅಡ್ವೈಸ್ ಮಾಡಿದರೆ ಆಗುವುದಿಲ್ಲ. ಹೀಗಾಗಿ, ದಿನವಿಡೀ ಗೆಳೆಯರೊಂದಿಗೆ ಇರುವುದೆಂದರೆ ಓಕೆ, ಮೊಬೈಲ್ ಹಿಡಿದು ದಿನವಿಡೀ ಕೋಣೆಯೊಳಗಿರುವುದೆಂದರೆ ಪರಮಸುಖ''- ಈಗಿನ ಮಕ್ಕಳ ಬಗೆಗಿನ ಇಂಥ ಎಲ್ಲ ದೂರುಗಳನ್ನೂ ಒಪ್ಪಿಕೊಳ್ಳೋಣ; ಆದರೆ ಅವರು ಹಾಗಿರುವುದೇಕೆ ಎಂಬುದರ ಕುರಿತೂ ಆಲೋಚಿಸಬೇಕಲ್ಲವೇ? ಅಮೆರಿಕನ್ ಕಾದಂಬರಿಗಾರ್ತಿ ಜೊಯ್ಸ್ ಮೆನಾರ್ಡ್ ಹೇಳುತ್ತಾರೆ, ''ಕೇವಲ ಮಕ್ಕಳಷ್ಟೇ ಬೆಳೆಯುವುದಿಲ್ಲ, ಅವರ ಜತೆಗೆ ಪೋಷಕರೂ ಬೆಳೆಯುತ್ತಾರೆ. ಮಕ್ಕಳು ತಮ್ಮ ಜೀವನದಲ್ಲಿ ಏನು ಮಾಡುತ್ತಾರೆಂಬುದನ್ನು ನಾವು ನೋಡುವ ಹಾಗೆ, ನಮ್ಮ ಜೀವನದಲ್ಲಿ ನಾವೇನು ಮಾಡುತ್ತಿದ್ದೇವೆ ಎಂಬುದನ್ನೂ ಅವರು ನೋಡುತ್ತಿರುತ್ತಾರೆ. ನನ್ನ ಮಕ್ಕಳಿಗೆ ಸೂರ್ಯನ ಕಡೆಗೆ ಮುನ್ನುಗ್ಗುವಂತೆ ನಾನು ಹೇಳಲಾರೆ, ನಾನು ಅದನ್ನು ಮುಟ್ಟಲು ಪ್ರಯತ್ನವನ್ನಷ್ಟೇ ಮಾಡಬಹುದು'' ಅಂತ. ಮಕ್ಕಳ ಬದುಕಲ್ಲಿ ಹೆತ್ತವರಿಗೆ ಇರುವ ಮಹತ್ತರ ಪಾತ್ರವನ್ನು ಹೇಳುವ ಅರ್ಥಗರ್ಭಿತ ಮಾತುಗಳಿವು. Show interest in what your children are interested in ಎಂದಿದ್ದಾರೆ ಮಹತ್ರಿಯ ರಾ ಅವರು. ಮಕ್ಕಳಿಗೆ ರಜನಿಕಾಂತ್ ಇಷ್ಟವಾದರೆ ನಾವೂ ಇಷ್ಟಪಡಬೇಕಂತೆ, ಅವರಿಗೆ ಐಪಿಎಲ್ ಇಷ್ಟವಾದರೆ ನಾವೂ ಆಸಕ್ತಿ ತೋರಿಸಬೇಕಂತೆ. ಮಕ್ಕಳ ದಿಕ್ಕಿನಲ್ಲಿ ನಾವು ಎರಡು ಹೆಜ್ಜೆಗಳನ್ನಿಟ್ಟರೆ, ಅವರು ನಮ್ಮ ದಿಕ್ಕಿನಲ್ಲಿ ಹತ್ತು ಹೆಜ್ಜೆಗಳನ್ನಿಡಲು ಆಸಕ್ತಿ ತೋರುತ್ತಾರೆ ಎನ್ನುತ್ತಾರೆ ಮಹತ್ರಿಯ ರಾ.

ಮಕ್ಕಳು ದಾರಿತಪ್ಪುವುದಕ್ಕೆ ಸಮಾಜ, ಸಹವಾಸ, ಸನ್ನಿವೇಶ ಎಲ್ಲವೂ ಅವುಗಳದ್ದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ಡಿವಿಜಿಯವರು ಹೇಳಿದಂತೆ, ''ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು। ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥ ಬೆಲ್ಲಸಕ್ಕರೆಯಾಗು ದೀನ ದುರ್ಬಲರಿಂಗೆ। ಎಲ್ಲರೊಳಗೊಂದಾಗು ಮಂಕುತಿಮ್ಮ॥'' ಎಂಬ ನೀತಿಸಾಲುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಮನೆಯ ಮಕ್ಕಳಿಗೆ ತಿಳಿಹೇಳಲು ಪ್ರಯತ್ನಿಸುವುದಷ್ಟೇ ನಮ್ಮ ಕರ್ತವ್ಯ.

(ಲೇಖಕಿ ಸಹ ಪ್ರಾಧ್ಯಾಪಕಿ)

ಭಟ್ಟರ್ ಸ್ಕಾಚ್

- **ರಾಜು ಮಂಡ್ಯ, ಮಂಡ್ಯ**
ಭಟ್ರೇ, ಎಲ್ಲ ಪ್ರಶ್ನೆಗಳಿಗೂ ಕೊಡಬಹುದಾದ ಒಂದೇ ಒಂದು ಉತ್ತರ ಯಾವುದು?
- **ನನಗಂತೂ ಗೊತ್ತಿಲ್ಲ!**

- **ವಿಶ್ವನಾಥ ಹಾಸಿಗಿ, ಧಾರವಾಡ**
ಭಟ್ರೇ ಹೆಂಡತಿಗೇಕೆ ಪಾದಪೂಜೆ ಮಾಡುವುದಿಲ್ಲ?
- **ಈ ಪ್ರಶ್ನೆಯನ್ನು ನೀವು, 'ಹೆಂಡತಿಗೇಕೆ ಪಾದಪೂಜೆಯನ್ನು ಸಾರ್ವಜನಿಕವಾಗಿ ಮಾಡುವುದಿಲ್ಲ' ಎಂದು ಕೇಳಿದ್ದರೆ ಉತ್ತರಿಸುತ್ತಿದ್ದೆ!**

- **ವಿ. ಹೇಮಂತಕುಮಾರ್, ಬೆಂಗಳೂರು**
ಭಟ್ರೇ, ಲೈಬ್ರರಿಯಲ್ಲಿ ಓದುವವರಿಗಿಂತ ತೂಕಡಿಸುವವರೇ ಹೆಚ್ಚಾಗಿ ಇರುತ್ತಾರಲ್ಲ?
- **ನಿದ್ದೆಯಲ್ಲದವನು ಗೂಬೆಗಿಂತ ಕಡೆ ಎಂಬುದನ್ನು ಅವರು ಸಾಬೀತು ಮಾಡುತ್ತಾರೆ!**

- **ನಾಗರಾಜ್ ಹೊಸಮನಿ, ಚಿತ್ರದುರ್ಗ**
ಭಟ್ರೇ, ಆಕೆ ಬರೀ ಹಣೆಗೆ ಮುತ್ತು ಕೊಡ್ತಾಳಲ್ಲ?
- **ಹೈ ಹೀಲ್ಡ್ ಚಪ್ಪಲಿ ಇಲ್ಲದೇ ಟ್ರೈ ಮಾಡಲು ಹೇಳಬಾರದೇ ?!**

- **ಶಿವಾನಂದ ಹೆಗಡೆ, ಸಿದ್ದಾಪುರ**
ಸರ್, ಗಂಡಸರೇಕೆ ಎಲ್ಲವನ್ನೂ ಮರೆಯುತ್ತಾರೆ?
- **ವಿಷಯ ಅದಲ್ಲ, ಹೆಂಗಸರೇಕೆ ಎಲ್ಲವನ್ನೂ ನೆನಪಿಟ್ಟುಕೊಳ್ಳುತ್ತಾರೆ ಅನ್ನೋದು!**

- **ಶ್ರೀರಾಮ ನಾಡೀಗ, ಹಿರಿಯೂರು**
ಭಟ್ರೇ, ಹೆಂಡತಿಯನ್ನು ಯಾವುದಕ್ಕೆ ಹೋಲಿಸಬಾರದು?
- **ಮೂದೇವಿಗೆ!**

- **ಜನಾರ್ದನ ಸಾಕೂರು, ಮೈಸೂರು**
ವಾಹನಗಳ ಮೇಲೆಯೇ 'ನಡುವೆ ಅಂತರ ಇರಲಿ' ಎಂದು ಬರೆದಿರುತ್ತಾರಲ್ಲ, ಯಾಕೆ?
- **ಹಾಗೆ ಬರೆಯೋದಾದ್ರೆ ಹುಡುಗ ಹುಡುಗಿಯರ ಮೇಲೆಯೂ ಹಾಗೇ ಬರೆಯಬೇಕಾಗುತ್ತೆ!**

- **ಜಯರಾಮ ಗೋಳೀದುಹಟ್ಟಿ, ರಾಮನಗರ**
ನಿಮ್ಮ ಜತೆಗಾರ ಎತ್ತು ಯಾವುದು?
- **ನಾನು ಹಾಗೂ ನನ್ನ ಓದುಗರು!**

- **ಕೆಂಪಣ್ಣ ಗೌಡ, ಪದ್ಮನಾಭನಗರ**
ತಮಗೇ ಎಲ್ಲಾ ಗೊತ್ತು ಎಂದು ಪತ್ರಕರ್ತರು ಪೋಸು ಕೊಡುವು ದೇಕೆ?
- **ಯಾರಲ್ಲಿ ಯಾವುದು ಇರುವುದಿಲ್ಲವೋ ಅದು ಇದೆ ಎಂದು ತೋರಿಸುತ್ತಾರೆ!**

ದೂರಕೆ ಹಕ್ಕಿಯು ಹಾರುತಿದೆ, ನೋಡಿದಿರಾ?

ವಿಮಾನದ ಕಲ್ಪನೆ ನಮಗೆ ಹೊಸದಲ್ಲ, ನಮ್ಮ ಪುರಾಣದಲ್ಲಿ, ಕಥೆಗಳಲ್ಲಿ ಈ ರೀತಿಯ ವಿಮಾನಗಳು ಸಾಕಷ್ಟು ಸಲ ಬಂದು ಹೋಗಿವೆ. ದೇವೇಂದ್ರನಂಥ ದೇವತೆಗಳು, ರಾವಣನಂಥ ರಾಕ್ಷಸರು ಬಾನ ಮಾರ್ಗದಲ್ಲಿ ವಿಮಾನಯಾನ ಮಾಡಿದ ಕಥೆಗಳು ಎಲ್ಲರಿಗೂ ಗೊತ್ತು. ಅಂಥ ಮಾಯಾಲೋಕದ ಕನಸನ್ನು ವಾಸ್ತವಿಕತೆಗೆ ಇಳಿಸಿದವರು ಅಮೆರಿಕದ ಆರ್ವಿಲ್ ಮತ್ತು ವಿಲ್ಬರ್ ರೈಟ್ ಸಹೋದರರು. ವಿಮಾನಯಾನ ಇಲ್ಲವಾಗಿದ್ದರೆ ಇಂದೂ ದಿನಗಟ್ಟಲೆ, ತಿಂಗಳುಗಟ್ಟಲೆ ಪ್ರಯಾಣ ಮಾಡಬೇಕಾಗುತ್ತಿತ್ತು. ಇಂದು ವಿಮಾನಯಾನವಿಲ್ಲದ ಜಗತ್ತನ್ನು ಊಹಿಸಿಕೊಳ್ಳುವುದೂ ಕಷ್ಟ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಒಂದು ಮಾತಿದೆ, ''ಒಮ್ಮೆ ನಿಮಗೆ ಹಾರಾಟದ ಅನುಭವವಾದರೆ ಸಾಕು, ಮುಂದೆ ನೆಲದ ಮೇಲೆ ನಡೆಯುತ್ತಿದ್ದರೂ ನಿಮ್ಮ ಕಣ್ಣು ಆಗಾಗ ಆಕಾಶ ನೋಡುತ್ತಿರುತ್ತದೆ, ಏಕೆಂದರೆ ನೀವು ಮತ್ತೆ ಮತ್ತೆ ಹಾರಲು ಬಯಸುತ್ತೀರಿ'' ಅಂತ. ಇದು ಸತ್ಯ. ಕೆಲವರಿಗೆ ಮೊದಲ ಬಾರಿಯ ವಿಮಾನಯಾನವೆಂದರೆ ಭಯ, ಆತಂಕಗಳಿದ್ದರೂ, ಅದು ಮೊದಲನೆಯ ಪ್ರಯಾಣಕ್ಕೆ ಮಾತ್ರ ಸೀಮಿತ. ವಿಮಾನದ ಮಹಿಮೆಯೇ ಹಾಗೆ, ಮಕ್ಕಳಿಂದ ಹಿಡಿದು ವೃದ್ಧರವರೆಗೆ ಪ್ರತಿಯೊಬ್ಬನಿಗೂ ವಿಮಾನವೆಂದರೆ ಕೌತುಕ, ಉಲ್ಲಾಸ, ಸಂತಸ. ಆದ್ದರಿಂದಲೇ ದೂರದ ಬಾನಿನಲ್ಲಿ ವಿಮಾನದ ಸದ್ದು ಕೇಳಿದರೆ ಸಾಕು, ಮನೆಯಿಂದ ಹೊರಗೆ ಓಡಿ ಬಂದು ಕಣ್ಣಿಗೆ ಕಾಣುವ ಸಣ್ಣ ವಿಮಾನದೆಡೆಗೆ ಕೈಬೀಸುವ ಮಕ್ಕಳನ್ನು ಇಂದಿಗೂ ಕಾಣಬಹುದು. ನೂರಾರು ಬಾರಿ ವಿಮಾನದಲ್ಲಿ ಓಡಾಡಿದವನೂ ಆಕಾಶದಲ್ಲೊಂದು ವಿಮಾನ ಹಾರುವಾಗ ನೋಡದೇ ಇರಲಾರ. ಇದು ಲೋಹದ, ಯಂತ್ರದ ಹಕ್ಕಿಯ ಎಳೆತ-ಸೆಳೆತ.

ವಿಮಾನದ ಕಲ್ಪನೆ ನಮಗೆ ಹೊಸದಲ್ಲ, ನಮ್ಮ ಪುರಾಣದಲ್ಲಿ, ಕಥೆಗಳಲ್ಲಿ ಈ ರೀತಿಯ ವಿಮಾನಗಳು ಸಾಕಷ್ಟು ಸಲ ಬಂದು ಹೋಗಿವೆ. ದೇವೇಂದ್ರನಂಥ ದೇವತೆಗಳು, ರಾವಣನಂಥ ರಾಕ್ಷಸರು ಬಾನ ಮಾರ್ಗದಲ್ಲಿ ವಿಮಾನಯಾನ ಮಾಡಿದ ಕಥೆಗಳು ಎಲ್ಲರಿಗೂ ಗೊತ್ತು. ಅಂಥ ಮಾಯಾಲೋಕದ ಕನಸನ್ನು ವಾಸ್ತವಿಕತೆಗೆ ಇಳಿಸಿದವರು ಅಮೆರಿಕದ ಆರ್ವಿಲ್ ಮತ್ತು ವಿಲ್ಬರ್ ರೈಟ್ ಸಹೋದರರು. 20ನೇ ಶತಮಾನದ ಆವಿಷ್ಕಾರಗಳಲ್ಲಿ ಮನರಂಜನೆಗೆ ಸಂಬಂಧಿಸಿದಂತೆ ರೇಡಿಯೊ, ಟೆಲಿವಿಷನ್, ಆರೋಗ್ಯಕ್ಕೆ ಸಂಬಂಧಿಸಿದಂತೆ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಆ್ಯಂಟಿಬಯೋಟಿಕ್, ಆಹಾರಕ್ಕೆ ಸಂಬಂಧಪಟ್ಟ ಮೈಕ್ರೊವೇವ್ ಓವನ್, ಟೀ ಬ್ಯಾಗ್, ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕಂಪ್ಯೂಟರ್, ಇಂಟರ್ನೆಟ್ ಇತ್ಯಾದಿಗಳ ನಡುವೆ ಎದ್ದು ಕಾಣುವುದು ವಿಮಾನ ವಿಜ್ಞಾನ. ಬಹುಶಃ ಆ ಶತಮಾನದಲ್ಲಿ ಕಂಪ್ಯೂಟರ್, ಅಂತರ್ಜಾಲ ಹೊರತುಪಡಿಸಿದರೆ ವಿಮಾನದಷ್ಟು ಕ್ರಾಂತಿ ಮಾಡಿದ ವಸ್ತು ಇನ್ನೊಂದಿರಲಿಕ್ಕಿಲ್ಲ. ಹೇಗೆ ಅಂತರ್ಜಾಲ ಜಗತ್ತನ್ನೇ ಕುಗ್ಗಿಸಿತೋ, ಹಾಗೆಯೇ ವಿಮಾನವೂ ವಿಶ್ವವನ್ನು ಸಣ್ಣದಾಗಿಸಿತು. ಈಗ ವಿಶ್ವದ ಯಾವ ಮೂಲೆಯಿಂದ ಯಾವ ಮೂಲೆಗೆ ಬೇಕಾದರೂ ಕೆಲವೇ ಗಂಟೆಗಳಲ್ಲಿ ಪ್ರಯಾಣಿಸಬಹುದು. ವಿಮಾನಯಾನ ಇಲ್ಲವಾಗಿದ್ದರೆ ಇಂದೂ ದಿನಗಟ್ಟಲೆ, ತಿಂಗಳುಗಟ್ಟಲೆ ಪ್ರಯಾಣ ಮಾಡಬೇಕಾಗುತ್ತಿತ್ತು. ಇಂದು ವಿಮಾನಯಾನವಿಲ್ಲದ ಜಗತ್ತನ್ನು ಊಹಿಸಿಕೊಳ್ಳುವುದೂ ಕಷ್ಟ. ಅದಕ್ಕಾದರೂ ರೈಟ್ ಸಹೋದರರಿಗೆ ಒಂದು ಮನಃಪೂರ್ವಕ ಧನ್ಯವಾದ ಹೇಳಲೇಬೇಕು.

ಅದಕ್ಕಿಂತ ಮುಂಚೆ ಹಾರಾಟದ ಪ್ರಯೋಗ ನಡೆದಿಲ್ಲ ಎಂದಲ್ಲ. 1783ರಲ್ಲಿ ಮೊದಲ ಬಾರಿ ಹಾಟ್ ಏರ್ ಬಲೂನ್ ಮುಖೇನ ಗಾಳಿಯಲ್ಲಿ ಹಾರಲಾಯಿತು ಎಂದು ಇತಿಹಾಸ ಹೇಳುತ್ತದೆ. ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್‌ನಲ್ಲಿ ಮೊದಲ ಉಡಾವಣೆ ಕಂಡ ಈ ಪುಗ್ಗೆಯ ಜನಕರು ಮಾಂಟ್ಗಾಲ್ಫಿಯರ್ ಸಹೋದರರು. 1853ರಲ್ಲಿ ಜಾರ್ಜ್ ಕೇಲಿ ಎಂಬ ಹೆಸರಿನ ಬ್ರಿಟಿಷ್ ಎಂಜಿನಿಯರ್ ಗ್ಲೈಡರ್ ನಿರ್ಮಿಸಿ, ಹಾರಾಟದ ಮೊದಲ ವಿಫಲ ಪ್ರಯತ್ನ ಮಾಡಿದ್ದ ಎಂದು ಇತಿಹಾಸ ಹೇಳುತ್ತದೆ. ನಂತರ 1890ರಲ್ಲಿ ಜರ್ಮನಿಯ ಒಟ್ಟೊ ಲಿಲಿಯೆಂಥಾಲ್ ಎಂಬ ವ್ಯಕ್ತಿ 18 ವಿವಿಧ ಬಗೆಯ ಗ್ಲೈಡರ್‌ಗಳನ್ನು ನಿರ್ಮಿಸಿದ್ದ, ತಾನೇ ನಿರ್ಮಿಸಿದ್ದ ಗ್ಲೈಡರ್‌ನಲ್ಲಿ 350 ಮೀಟರ್ ದೂರ ಹಾರಿದ್ದ ಎಂಬ ವಿಷಯವೂ ದಾಖಲೆಯ ಪುಟಗಳನ್ನು ಸೇರಿದೆ. ಈತನ ಪ್ರಯೋಗವೂ ರೈಟ್ ಸಹೋದರರಿಗೆ ಪ್ರೇರಣೆ ನೀಡಿತು ಎಂಬ ಮಾತೂ ಇದೆ. ರೈಟ್ ಸಹೋದರರು ಯಶಸ್ವಿಯಾಗುವುದಕ್ಕೆ ಮುಂಚೆ ಹತ್ತಕ್ಕೂ ಹೆಚ್ಚು ಜನ ಆಕಾಶದಲ್ಲಿ ಹಾರುವ ಪ್ರಯೋಗಕ್ಕೆ ಕೈಹಾಕಿ ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಆದರೆ ಅನ್ವೇಷಣೆಯ ನಂತರದ ಬೆಳವಣಿಗೆಗೆ 'ವಾಹ್!' ಎನ್ನಲೇಬೇಕು. ಆರಂಭದ ದಿನಗಳಲ್ಲಿ ನೂರರಿಂದ ನೂರ ಇಪ್ಪತ್ತು ಅಡಿ ಎತ್ತರದಲ್ಲಿ ಹಾರುತ್ತಿದ್ದ ವಿಮಾನ ಹತ್ತು ವರ್ಷಗಳ ಒಳಗಾಗಿ ಹತ್ತು ಸಾವಿರ ಅಡಿ ಎತ್ತರಕ್ಕೆ ಹಾರುವಷ್ಟು ಬೆಳೆಯಿತು. ಇದು ರಾಕೆಟ್ ತಂತ್ರಜ್ಞಾನಕ್ಕೂ ಮೆಟ್ಟಿಲಾಯಿತು. ವಿಮಾನ ಹಾರಾಟ ಆರಂಭಿಸಿದ 70 ವರ್ಷಗಳ ಒಳಗೆ, ಭೂಮಿಯಿಂದ ಸುಮಾರು 3,84,000 ಕಿಲೋಮೀಟರ್ ದೂರವಿರುವ ಚಂದ್ರನಲ್ಲಿಗೆ ಪ್ರಯಾಣಿಸುವುದೆಂದರೆ ಹುಡುಗಾಟವಲ್ಲ. ಆದರೆ, ಯಾವ ಅನ್ವೇಷಣೆಯೇ ಆದರೂ ಕಾಲಕ್ರಮೇಣ ವ್ಯವಹಾರವಾಗಿ ಬದಲಾಗುತ್ತದೆ. ಅದಕ್ಕೆ ವಾಯುಯಾನವೂ ಹೊರತಲ್ಲ.

ಇಂದು ವಿಶ್ವದಾದ್ಯಂತ ಬಾನಂಗಳದಲ್ಲಿ ಹಾರಾಡುವ ಪ್ರಮುಖವಾದ ಎರಡು ಯಂತ್ರದ ಹಕ್ಕಿಗಳ ವಂಶ ಎಂದರೆ ಬೋಯಿಂಗ್ ಮತ್ತು ಏರ್‌ಬಸ್. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಣನೀಯ ಪಾಲನ್ನು ಇದೇ ಎರಡು ಸಂಸ್ಥೆಯ ವಿಮಾನಗಳು ಆವರಿಸಿಕೊಂಡಿವೆ.

ಬೇರೆ ಯಾವ ಸಂಸ್ಥೆಗಳೂ ಇವೆರಡರ ಹತ್ತಿರಕ್ಕೆಲ್ಲೂ ಸುಳಿಯುವುದಿಲ್ಲ. ಈ ಸಂಸ್ಥೆಗಳು ಅನ್ಯರು ತಮ್ಮ ಸ್ಥಳವನ್ನು ಆಕ್ರಮಿಸಿಕೊಳ್ಳದಂತೆ ವ್ಯವಹಾರವನ್ನು ತಮ್ಮ ಹತೋಟಿಯಲ್ಲಿ ಹಿಡಿದಿಟ್ಟುಕೊಂಡಿವೆ. ಮೊದಲು ಈ ಕಂಪನಿಗಳ ಬಯೋಡಾಟಾದ ಕಡೆಗೆ ಕಣ್ಣಾಡಿಸಿದರೆ ಅದರ ಅಗಾಧತೆ ಅರ್ಥವಾಗುತ್ತದೆ. ಬೋಯಿಂಗ್ ಸಂಸ್ಥೆ ಆರಂಭವಾದದ್ದು 1916ರಲ್ಲಿ, ಅಮೆರಿಕದ ವಾಷಿಂಗ್ಟನ್‌ನಲ್ಲಿ. ಸ್ಥಾಪಕ ವಿಲಿಯಮ್ ಬೋಯಿಂಗ್. ಈಗ ಶಿಕಾಗೊದಲ್ಲಿ ಕೇಂದ್ರ ಕಾರ್ಯಾಲಯ. ಅಂದಿನಿಂದ ಇಂದಿನವರೆಗೆ ಸಂಸ್ಥೆಯ ಸಾಧನೆ ಅಭೂತಪೂರ್ವ. ಈ ಸಂಸ್ಥೆ 2019ರಲ್ಲಿ ತಯಾರಿಸಿದ ಕಮರ್ಷಿಯಲ್ ಏರ್‌ಕ್ರಾಫ್ಟ್ (ಪ್ರಯಾಣಿಕರು ಮತ್ತು ಸರಕು ಸಾಗಣೆಗೆ ಯೋಗ್ಯವಾದ ವಿಮಾನಗಳು) ಸಂಖ್ಯೆ 380 (2018ರಲ್ಲಿ ಈ ಸಂಸ್ಥೆ ಎಂಟು ನೂರಕ್ಕೂ ಅಧಿಕ ವಿಮಾನಗಳನ್ನು ತಯಾರಿಸಿತ್ತು). ಅದರೊಂದಿಗೆ ಆ ವರ್ಷ 230 ಯುದ್ಧ ವಿಮಾನಗಳು ಮತ್ತು ಎರಡು ಉಪಗ್ರಹಗಳನ್ನೂ ತಯಾರಿಸಿದೆ. ಈ ಸಂಸ್ಥೆಗೆ ಇನ್ನೂ 3400 ವಿಮಾನ ತಯಾರಿಸಲು ಬೇಡಿಕೆ ಇದೆ. ಸಂಸ್ಥೆಯಲ್ಲಿ ಒಂದು ಲಕ್ಷದ ಅರವತ್ತು ಸಾವಿರಕ್ಕೂ ಹೆಚ್ಚು ನೌಕರರಿದ್ದಾರೆ. ತಮ್ಮ ಸಂಸ್ಥೆಯ ವಿಮಾನಗಳು ಇತರರಿಗಿಂತ ಶೇ.8ರಷ್ಟು ಕಡಿಮೆ ಇಂಧನ ಬಳಸುತ್ತವೆ ಎಂದು ಸಂಸ್ಥೆ ಹೇಳಿಕೊಳ್ಳುತ್ತದೆ. 747, 777, 787 ಹೆಸರುಮಾಡಿದ ಮಾಡೆಲ್‌ಗಳು. 2018ರಲ್ಲಿ 737 ಮಾಡೆಲ್‌ನ ಎರಡು ವಿಮಾನಗಳು ದುರಂತಕ್ಕೊಳಗಾದ್ದರಿಂದ ವಿಶ್ವದಾದ್ಯಂತ ಆ ಮಾಡೆಲ್‌ನ 387 ವಿಮಾನಗಳ ಹಾರಾಟವನ್ನು ನಿಲ್ಲಿಸಲಾಗಿತ್ತು. ಅದಕ್ಕೇ ಹೇಳುವುದು, Flying is not dangerous, crashing is dangerous!

ಇನ್ನೊಂದು ಅಸಾಮಾನ್ಯ ಸಂಸ್ಥೆಯೆಂದರೆ ಏರ್‌ಬಸ್. 1970ರ ಕೊನೆಯಲ್ಲಿ ಐರೋಪ್ಯ ರಾಷ್ಟ್ರಗಳು, ಅದರಲ್ಲೂ ಫ್ರಾನ್ಸ್, ಜರ್ಮನಿ, ಸ್ಪೇನ್ ಮೊದಲಾದ ದೇಶಗಳು ಪ್ರಮುಖ ಪಾತ್ರವಹಿಸಿ ಸ್ಥಾಪಿಸಿದ ಏರ್‌ಬಸ್ ಇಂಡಸ್ಟ್ರೀಸ್‌ನ ಕೇಂದ್ರ ಕಾರ್ಯಾಲಯ ನೆದರ್ಲ್ಯಾಂಡ್‌ನ ಲೇಡನ್‌ನಲ್ಲಿದ್ದರೂ, ವಿಮಾನಗಳನ್ನು ತಯಾರಿಸುವ ಕಾರ್ಖಾನೆ ಇರುವುದು ಫ್ರಾನ್ಸ್‌ನ ಟೋಲೌಸ್‌ನಲ್ಲಿ. ಸಂಸ್ಥೆಯು ಒಂದು ಲಕ್ಷ ಮೂವತ್ತನಾಲ್ಕು ಸಾವಿರ ಜನರಿಗೆ ಉದ್ಯೋಗ ನೀಡಿದೆ. ಸಂಸ್ಥೆ ವಾರ್ಷಿಕ ಎಪ್ಪತ್ತು ಬಿಲಿಯನ್ ಡಾಲರ್‌ಗಿಂತ ಅಧಿಕ ಆದಾಯ ಹೊಂದಿದ್ದು, ಮೂರು ಬಿಲಿಯನ್ ಡಾಲರ್‌ಗಿಂತಲೂ ಅಧಿಕ ನಿವ್ವಳ ಲಾಭ ಮಾಡುತ್ತಿದೆ. ಎ-319, ಎ-320, ಎ-321, ಎ-220 ಸಫಲ ಮಾಡೆಲ್‌ಗಳು. ಸಾಮಾನ್ಯವಾಗಿ ವಿಮಾನದಲ್ಲಿ ಎರಡು ಎಂಜಿನ್‌ಗಳಿರುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಏರ್‌ಬಸ್ ಈ ವರ್ಷ ಮಾರುಕಟ್ಟೆಗೆ ತರುತ್ತಿರುವ ಎ-380 ಮಾಡೆಲ್ ವಿಮಾನ ನಾಲ್ಕು ಎಂಜಿನ್ ಹೊಂದಿದ್ದು, 850ಕ್ಕೂ ಹೆಚ್ಚು ಜನರನ್ನು ಒಟ್ಟಿಗೆ ಕೊಂಡೊಯ್ಯುವ ಸಾಮರ್ಥ್ಯ ಹೊಂದಿದೆ. ಇದುವರೆಗೆ ಸುಮಾರು 19 ಸಾವಿರಕ್ಕೂ ಹೆಚ್ಚು ವಿಮಾನ ತಯಾರಿಸಿದ ಹೆಗ್ಗಳಿಕೆ ಸಂಸ್ಥೆಯದ್ದು.

ಇಷ್ಟಾಗಿಯೂ ಈ ಎರಡೂ ಸಂಸ್ಥೆಗಳು ವಿಮಾನಕ್ಕೆ ಅತ್ಯವಶ್ಯಕವಾದ ಎಂಜಿನ್ ತಯಾರಿಸುವುದಿಲ್ಲ. ವಿಶ್ವದಾದ್ಯಂತ ವಿಮಾನಗಳಿಗೆ ಎಂಜಿನ್ ತಯಾರಿಸುವ ಕಂಪನಿಗಳಲ್ಲಿ ಮೊದಲನೆಯ ಸ್ಥಾನದಲ್ಲಿರುವುದು ಜನರಲ್ ಎಲೆಕ್ಟ್ರಿಕ್ (GE). ಎರಡನೆಯ ಸ್ಥಾನದಲ್ಲಿ ರೋಲ್ಸ್ ರಾಯ್ (RR), ನಂತರದ ಸ್ಥಾನದಲ್ಲಿ ಪ್ರಾಟ್ ಎಂಡ್ ವಿಟ್ನ (PW), ಸಿಎಫ್‌ಎಂ ಇಂಟರ್‌ನ್ಯಾಷನಲ್ ಇತ್ಯಾದಿ ಕಂಪನಿಗಳಿವೆ. ಇನ್ನು ಭಾರತದ ಹಿಂದೂಸ್ತಾನ್ ಏರೊನಾಟಿಕಲ್ ಲಿಮಿಟೆಡ್ (HAL) 1940ರಲ್ಲಿ ಆರಂಭವಾಗಿ ಇಪ್ಪತ್ತೆಂಟು ಸಹಸ್ರ ಜನರಿಗೆ ಉದ್ಯೋಗ ಒದಗಿಸಿದೆ.

ಆಕಾಶದಲ್ಲಿ ಒಂದು ವಿಮಾನ ಹಾರಾಡುತ್ತಿದೆಯೆಂದರೆ ಅದರ ಹಿಂದೆ ಲಕ್ಷಾಂತರ ಜನರು ಕಾರ್ಯನಿರ್ವಹಿಸುತ್ತಿದ್ದಾರೆ, ಉದ್ಯೋಗ ಮಾಡುತ್ತಿದ್ದಾರೆ ಎಂದು ಅರ್ಥ. ವಿಮಾನದ ಪ್ರಮುಖ ಎಂಜಿನ್, ಬಾಡಿ, ಆಸನಗಳು, ಹವಾ ನಿಯಂತ್ರಣ, ಅಲಂಕಾರದಿಂದ ಮೊದಲಾದವುಗಳಿಂದ ವಿಮಾನವನ್ನು ಸಿದ್ಧಪಡಿಸಿ, ಹಾರಾಟಕ್ಕೆ ಬೇಕಾದ ಪೈಲಟ್‌ಗಳು, ನಿರ್ವಹಣೆ ಸಿಬ್ಬಂದಿಗಳು, ವಿಮಾನ ನಿಲ್ದಾಣದ ಸಿಬ್ಬಂದಿಗಳು, ಭೂ ಸಿಬ್ಬಂದಿಗಳು, ಸಂಕೇತ ನೀಡುವ ಸಿಬ್ಬಂದಿಗಳವರೆಗೆ ಎಲ್ಲರ ಶ್ರಮವಿದೆ. ಇದರ ಹೊರತಾಗಿ ಪ್ರವಾಸೋದ್ಯಮ, ಹೋಟೆಲ್, ಟಿಕೆಟ್ ಬುಕಿಂಗ್, ಕ್ಯಾಟರಿಂಗ್, ಸ್ವಚ್ಛತೆ, ಇತ್ಯಾದಿ ದೊಡ್ಡದೊಂದು ವಿಸ್ತೃತ ಕುಟುಂಬವೇ ಇದೆ. ಆದೇನೇ ಇದ್ದರೂ, ನಿರ್ಮಾಣ ಕಾರ್ಯದಲ್ಲಿ ಬೋಯಿಂಗ್ ಮತ್ತು ಏರ್‌ಬಸ್ ಸಂಸ್ಥೆಗಳೊಂದಿಗೆ ಸ್ಪರ್ಧಿಸಲು ಯಾರಿಂದಲೂ ಸಾಧ್ಯವಾಗುತ್ತಿಲ್ಲ, ಈ ಸಂಸ್ಥೆಗಳೊಂದಿಗೆ ಸ್ಪರ್ಧೆಗಿಳಿಯಲು ಇತರರಿಗೆ ಸಾಧ್ಯವಾಗದಿರುವುದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದು, ವಿಮಾನ ಅಭಿವೃದ್ಧಿ ವೆಚ್ಚ (Development Cost). ಸಾಮಾನ್ಯವಾಗಿ ಒಂದು ಪ್ರಯಾಣಿಕರ ವಿಮಾನವನ್ನು ಅಭಿವೃದ್ಧಿಪಡಿಸಲು ಹತ್ತರಿಂದ ಹದಿನೈದು ಬಿಲಿಯನ್ ಡಾಲರ್ ಬೇಕು. ಏರ್‌ಬಸ್ ಎ-380ಯಂಥ ಆಧುನಿಕ ವಿಮಾನವನ್ನು ತಯಾರಿಸುವಾಗ ಈ ವೆಚ್ಚ ಇಪ್ಪತ್ತು ಬಿಲಿಯನ್ ಡಾಲರ್‌ವರೆಗೂ ಹೋಗುತ್ತದೆ. ನಂತರದ ನಿರ್ಮಾಣ, ಪರೀಕ್ಷಾ ವೆಚ್ಚ ಇತ್ಯಾದಿಗಳನ್ನೆಲ್ಲ ಸೇರಿಸಿದರೆ ಒಂದು ವಿಮಾನ ಹಾರಾಟಕ್ಕೆ ಸಿದ್ಧವಾಗುವವರೆಗೆ ತಗಲುವ ವೆಚ್ಚ ಸುಮಾರು ಮೂವತ್ತೈದು ಬಿಲಿಯನ್ ಡಾಲರ್‌ಗಳು. ಯಾವುದೇ ದೇಶದ ಸರಕಾರವಾಗಲೀ ಅಥವಾ ಯಾವುದೇ ಸಂಸ್ಥೆಯಾಗಲೀ ಇಷ್ಟೊಂದು ದೊಡ್ಡ ಮೊತ್ತವನ್ನು ತೊಡಗಿಸುವ ರಿಸ್ಕ್ ತೆಗೆದುಕೊಳ್ಳುವುದಿಲ್ಲ. ಅದರಲ್ಲೂ ಎರಡನೆಯ ಕಾರಣ ತಿಳಿದ ಮೇಲಂತೂ ಈ ಸಾಹಸಕ್ಕೆ ಯಾರೂ ಇಳಿಯುವುದಿಲ್ಲ.

ಎರಡನೆಯ ಕಾರಣ, ಬೋಯಿಂಗ್ ಅಮೆರಿಕ ಸರಕಾರದೊಂದಿಗೂ, ಏರ್‌ಬಸ್ ಯುರೋಪಿಯನ್ ಯೂನಿಯನ್ ದೇಶಗಳೊಂದಿಗೂ ತಮ್ಮ ಬಾಂಧವ್ಯವನ್ನು ಗಟ್ಟಿಗೊಳಿಸಿಕೊಂಡಿವೆ. ಮೊದಲನೆಯ ಮತ್ತು ಎರಡನೆಯ ವಿಶ್ವಯುದ್ಧದ ಸಂದರ್ಭದಲ್ಲಿ ಆಯಾ ದೇಶಗಳಿಗೆ ಬೇಕಾದ ಯುದ್ಧ ವಿಮಾನ ತಯಾರಿಸಿ ಕೊಡುವ ಸಂದರ್ಭದಲ್ಲಿ ಗಟ್ಟಿಗೊಂಡ ಈ ಬೆಸುಗೆ ಇನ್ನೂ ಸುಭದ್ರವಾಗಿದೆ. ಇದು ಕಾಲಕ್ಕೆ ತಕ್ಕಂತೆ ಸರಕಾರದ ನೀತಿ ನಿಯಮಗಳನ್ನು ತಮಗೆ ಬೇಕಾದಂತೆ ಬದಲಾಯಿಸಿಕೊಳ್ಳುವಷ್ಟರ ಮಟ್ಟಕ್ಕೆ ಬೆಳೆದು ನಿಂತಿದೆ.

ಇನ್ನು, ವಾಯುಯಾನದ ನಿಯಮಾವಳಿಗಳನ್ನು ರೂಪಿಸುವ ಎರಡು ಪ್ರಮುಖ ಸಂಸ್ಥೆಗಳೆಂದರೆ, ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (FAA) ಮತ್ತು ಯುರೋಪಿಯನ್ ಯೂನಿಯನ್ ಏವಿಯೇಷನ್ ಸೇಫ್ಟಿ ಏಜೆನ್ಸಿ (EASA). ರಷ್ಯಾ, ಕೆನಡಾ, ಚೀನಾದಂಥ ಕೆಲವೇ ದೇಶಗಳನ್ನು ಹೊರತುಪಡಿಸಿ, ವಿಶ್ವದ ಬಹುತೇಕ ದೇಶಗಳು ಈ ಸಂಸ್ಥೆಗಳ ಮಾರ್ಗಸೂಚಿಯನ್ನು ಒಪ್ಪಿಕೊಂಡಿವೆ. ಈ ದೇಶಗಳಿಗೆ ದೊಡ್ಡ ಮೊತ್ತ ತೊಡಗಿಸಿ, ಪ್ರಯಾಣಿಕರ ವಿಮಾನಗಳನ್ನು ತಯಾರಿಸುವುದು ಸಾಧ್ಯವೇ ಇಲ್ಲದ ಮಾತು. ತಯಾರಿಸುವ ತಾಕತ್ತಿದ್ದ ರಾಷ್ಟ್ರಗಳು ತಮ್ಮ ವ್ಯವಹಾರದ ಕೋಟೆಯಲ್ಲಿ ನುಗ್ಗದಂತೆ ಈ ಸಂಸ್ಥೆಗಳು ನಿಯಮಗಳನ್ನು ರೂಪಿಸುತ್ತವೆ, ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತಲೂ ಇರುತ್ತವೆ. ಅಲ್ಲಿಗೆ ದೊಡ್ಡ ಮೊತ್ತವನ್ನು ತೊಡಗಿಸಿ ವಿಮಾನ ತಯಾರಿಸಿದರೂ ಅದು ದೇಶದೊಳಗೆ ಹಾರಬೇಕೇ ವಿನಾ ಈ ರಾಷ್ಟ್ರಗಳಿಗೆ ಹೋಗಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ ಭಾರತ, ಚೀನಾ, ಜಪಾನ್, ರಷ್ಯಾದಂಥ ದೇಶಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಬಲ್ಲ ವಿಮಾನಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದ್ದರೂ, ಯುದ್ಧ ವಿಮಾನ ತಯಾರಿಸುವುದರಲ್ಲಿಯೋ, ತಮ್ಮ ದೇಶದೊಳಗೆ ಸಂಚರಿಸುವ ಪ್ರಯಾಣಿಕರು ಮತ್ತು ಸರಕು ಸಾಗಿಸುವ ವಿಮಾನ ತಯಾರಿಸುವುದರಲ್ಲಿಯೇ ಸಮಾಧಾನಪಟ್ಟುಕೊಳ್ಳುತ್ತಿವೆ. ಅಷ್ಟೇ ಅಲ್ಲ, ಭಾರತದ ಎಚ್‌ಎಎಲ್ ಸೇರಿದಂತೆ ಇತರ ರಾಷ್ಟ್ರಗಳ ಕೆಲವು ಸಂಸ್ಥೆಗಳು ವಿಮಾನಕ್ಕೆ ಬೇಕಾದ ಬಿಡಿಭಾಗಗಳನ್ನು ತಯಾರಿಸಿ ಅದೇ ಬೋಯಿಂಗ್ ಮತ್ತು ಏರ್‌ಬಸ್ ಸಂಸ್ಥೆಗೆ ಮಾರಾಟಮಾಡುತ್ತಿವೆ.

ಈ ವ್ಯಾಪಾರ, ವ್ಯವಹಾರ, ರಾಜಕೀಯ, ಏಕಸ್ವಾಮ್ಯ, ಪೂರ್ಣಾಧಿಕಾರದ ವಿಷಯಗಳಿಗೆ ನಾವು ಅಷ್ಟೊಂದು ತಲೆ ಕೆಡಿಸಿಕೊಳ್ಳಬೇಕಾ? ಬೋಯಿಂಗ್ ಆದರೂ ಸರಿ, ಏರ್‌ಬಸ್ ಆದರೂ ಸರಿ, ಯಂತ್ರದ ಹಕ್ಕಿಯ ರೆಕ್ಕೆಯ ಕೆಳಗಿರುವ ಪಂಖ ತಿರುಗಬೇಕು, ವಿಮಾನದಲ್ಲಿ ಕುಳಿತು ಹಾರಬೇಕು, ತಾಣ ಸೇರಬೇಕು ಅಷ್ಟೇ!

ಕೊನೆಯದಾಗಿ, The propeller is just a big fan in front of the plane used to keep the pilot cool. When it stops, pilot starts sweating.

ಅಮೆರಿಕ ವಲಸೆ ನೀತಿ: ಡೊನಾಲ್ಡ್ ಟ್ರಂಪ್ ಈಗ ಖಳನಾಯಕರೇ?

ದೃಷ್ಟಿಕೋನ
ರಮಾನಂದ ಶರ್ಮಾ
vveditoped@gmail.com

ಅಮೆರಿಕ ಸೀನಿದರೆ ಜಗತ್ತಿನಾದ್ಯಂತ ನೆಗಡಿಯಾಗುತ್ತದೆ. ಅಮೆರಿಕದಲ್ಲಿ ಏನೇ ಆಗಲಿ, ಜಗತ್ತಿನಾದ್ಯಂತ ಅದರ ಪರಿಣಾಮ ಕಂಡುಬರುತ್ತದೆ. 'ಜಗತ್ತಿನ ದೊಡ್ಡಣ್ಣ' ಎಂಬ ಹಣೆಪಟ್ಟಿ ಹೊತ್ತಿರುವ ಅಮೆರಿಕವು ಇಂದು ಆಲೋಚಿಸುವುದನ್ನು ಜಗತ್ತು ನಾಳೆ ಆಲೋಚಿಸುತ್ತದೆ ಎಂಬ ಮಾತು ಸತ್ಯ. ಅದರಲ್ಲೂ ಆರ್ಥಿಕ ವಿಷಯಗಳಲ್ಲಿ ಅಮೆರಿಕವು ಜಗತ್ತನ್ನೇ ನಿಯಂತ್ರಿಸುತ್ತದೆ. ಜಾಗತಿಕ ವ್ಯಾಪಾರದಲ್ಲಿ ಹಾಗೂ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲೂ ಅಮೆರಿಕದ ಡಾಲರ್ 'ಅಗ್ರಗಣ್ಯ ಕರೆನ್ಸಿ' ಆಗಿದ್ದು, ಅಮೆರಿಕದ ಪ್ರತಿಯೊಂದು ನಡೆಗೂ ಈ ವಲಯಗಳು ತೀವ್ರವಾಗಿ ಸ್ಪಂದಿಸುತ್ತವೆ.

ಇದೇ ರೀತಿಯಲ್ಲಿ, ಅಮೆರಿಕದ ವಿದೇಶಾಂಗ, ರಾಜಕೀಯ, ರಕ್ಷಣಾ ಮತ್ತು ವಲಸೆ ನೀತಿಗಳು ಕೂಡ ಜಗತ್ತನ್ನು ನಡುಗಿಸುತ್ತವೆ. ಹತ್ತು ರಾಷ್ಟ್ರಗಳ 'ಬ್ರಿಕ್ಸ್' ಸಂಘಟನೆಯ ಪ್ರತ್ಯೇಕ ಕರೆನ್ಸಿ ಪ್ರಸ್ತಾವದ ವಿರುದ್ಧ ಅಮೆರಿಕದ ಕಡೆಯಿಂದ ನೇರ ಎಚ್ಚರಿಕೆ ಹೊಮ್ಮಿದ್ದು, ಈ ರಾಷ್ಟ್ರಗಳು ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಜಾಣಮೌನಕ್ಕೆ ಶರಣಾಗಿವೆ. ಪರ್ಯಾಯ ಕರೆನ್ಸಿ ರೂಪಿಸಿದರೆ ಬ್ರಿಕ್ಸ್ ರಾಷ್ಟ್ರಗಳ ಸರಕುಗಳ ಮೇಲೆ ಶೇ.100ರಷ್ಟು ಸುಂಕವನ್ನು ವಿಧಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಧಮಕಿ ಹಾಕಿದ್ದು, ಬ್ರಿಕ್ಸ್ ರಾಷ್ಟ್ರಗಳ ಮುಂದಿನ ಕಾರ್ಯತಂತ್ರವಿನ್ನೂ ರೂಪಿತವಾಗಬೇಕಿದೆ.

ಎರಡನೇ ಅವಧಿಗೆ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಟ್ರಂಪ್ ಅವರು ವಲಸೆ ಮತ್ತು ಸುಂಕದ ವಿಚಾರದಲ್ಲಿ ಮಾಡಿರುವ ಎರಡು ಘೋಷಣೆಗಳು ಜಗತ್ತನ್ನು ತಲ್ಲಣಗೊಳಿಸಿವೆ. ಈವರೆಗೆ ಇದ್ದ, ಅಮೆರಿಕದಲ್ಲಿ ಹುಟ್ಟಿದ ಮಾತ್ರಕ್ಕೆ ಅಲ್ಲಿನ ನಾಗರಿಕರಾಗುವ 'ಜನ್ಮದತ್ತ ಪೌರತ್ವ'ದ ಹಕ್ಕನ್ನು ಹಿಂತೆಗೆದುಕೊಳ್ಳುವ ಟ್ರಂಪ್ ಅವರ ನಿರ್ಧಾರವು ಫೆಬ್ರವರಿ 28ರೊಳಗೆ ಹೆರಿಗೆ ಮಾಡಿಸಿಕೊಳ್ಳಲು ಹಲವು ಗರ್ಭಿಣಿಯರು ಅಮೆರಿಕದ ಆಸ್ಪತ್ರೆಗಳಿಗೆ ದೌಡಾಯಿಸುವಂತೆ ಮಾಡಿದೆಯಂತೆ. ಅಮೆರಿಕದಲ್ಲಿ ನೀಡಲಾಗುವ ಪೌರತ್ವವು ಅಕ್ರಮ ವಲಸಿಗರಿಗಲ್ಲ ಎಂದು ಟ್ರಂಪ್ ಗುಡುಗಿದ್ದಾರೆ. ಗುಲಾಮರ ಮಕ್ಕಳಿಗೆ ಪ್ರಯೋಜನ ನೀಡುವ ಉದಾತ್ತ ಉದ್ದೇಶದೊಂದಿಗೆ ಜನ್ಮದತ್ತ ಪೌರತ್ವದ ಸೌಲಭ್ಯ ನೀಡಲಾಗಿತ್ತು. ಅಂದು ಮಾಡಿದ ನೀತಿಯ ಮೇಲೆ ಸದ್ಯ ವಿಶ್ವದ ಇತರ ದೇಶಗಳಿಂದ ಬಂದು ಅಮೆರಿಕದಲ್ಲಿ ಅಕ್ರಮವಾಗಿ ನೆಲೆಸುವ ಜನರಿಗೆ ಪೌರತ್ವ ನೀಡುವ ಉದ್ದೇಶ ಅಲ್ಲಿರಲಿಲ್ಲ; ಇದೇ ನೀತಿಯನ್ನಾಧರಿಸಿ ಜಗತ್ತಿನ ಜನರು ಬಂದು ಅಮೆರಿಕದಲ್ಲಿ ನೆಲೆಸುವುದಕ್ಕೆ ಅವಕಾಶ ನೀಡುವುದಿಲ್ಲ. ನೀತಿಯಲ್ಲಿ ಅವಕಾಶ ಕಲ್ಪಿಸಿರುವ ಅರ್ಹರಿಗೆ ಮತ್ತು ಅವರ ಮಕ್ಕಳಿಗೆ ಮಾತ್ರ ಪ್ರವೇಶ ನೀಡಲಾಗುವುದು ಎಂದು ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

ಹೊಸ ವಲಸೆ ನೀತಿಯಿಂದ ತಪ್ಪಿಸಿಕೊಳ್ಳಲು, ಗಡಿಪಾರಾಗುವುದರಿಂದ ಬಚಾವಾಗಲು ಅಮೆರಿಕದಲ್ಲಿ ಅರೆಕಾಲಿಕ ಉದ್ಯೋಗದಲ್ಲಿರುವ ವಲಸೆ ವಿದ್ಯಾರ್ಥಿಗಳು ಉದ್ಯೋಗವನ್ನು ಬಿಡುತ್ತಿದ್ದಾರಂತೆ. ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ಹೋಗುವ ಬಹುತೇಕ ವಿದ್ಯಾರ್ಥಿಗಳು ತಮ್ಮ ವೆಚ್ಚವನ್ನು ಸರಿದೂಗಿಸಿಕೊಳ್ಳಲು ಅಲ್ಲಿ ಅರೆಕಾಲಿಕ ಉದ್ಯೋಗ ಮಾಡುವುದು ತೀರಾ ಸಾಮಾನ್ಯ. ಇವು ಅನಧಿಕೃತ ಉದ್ಯೋಗಗಳಾಗಿದ್ದು, ಅವರು ಅಪಾಯದ ಸುಳಿಯಲ್ಲಿ ಸಿಲುಕುವ ಸಾಧ್ಯತೆಯಿದೆ. ಮುಂಬರುವ ವಲಸೆ ನೀತಿಯಲ್ಲಿ, ಅಮೆರಿಕದಲ್ಲಿರುವ ಅಕ್ರಮ ವಲಸಿಗರನ್ನು ಹೊರಗಟ್ಟುವ ಮತ್ತು ಆ ನಿಟ್ಟಿನಲ್ಲಿ ವಲಸೆ ನೀತಿಯನ್ನು ಮಾರ್ಪಡಿಸುವ ಉದ್ದೇಶವನ್ನು ಟ್ರಂಪ್ ಹೊಂದಿದ್ದಾರೆ.

ಅಮೆರಿಕದ ಜನಸಂಖ್ಯೆಯಲ್ಲಿ ಸುಮಾರು ಶೇ.14.01ರಷ್ಟು ವಲಸಿಗರಿದ್ದಾರೆ. ಟ್ರಂಪ್‌ರ ಉದ್ದೇಶವು ಇಂಥವರ ನಿದ್ರೆಗೆಡಿಸಿದ್ದು, ಮುಂದಿನ ದಿನಗಳನ್ನು ಅವರು ಆತಂಕದಿಂದಲೇ ನೋಡುತ್ತಿದ್ದಾರೆ. 'ಟ್ರಂಪ್ ಎಂದರೆ ಬಿಜಿನೆಸ್' ಎನ್ನುವಂತೆ ಅಕ್ರಮ ವಲಸಿಗರನ್ನು ಹೊರಹಾಕುವ ಕೆಲಸವನ್ನು ಟ್ರಂಪ್ ಅಧಿಕಾರ ಸ್ವೀಕಾರದ ಮೊದಲ ದಿನದಿಂದಲೇ ಆರಂಭಿಸಿದ್ದಾರಂತೆ. ಅಮೆರಿಕದಲ್ಲಿರುವ ಸುಮಾರು 7500 ಅಕ್ರಮ ಭಾರತೀಯ ವಲಸಿಗರನ್ನು ಭಾರತಕ್ಕೆ ಮರಳಿಸುವ ನಿಟ್ಟಿನಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಮಾತುಕತೆ ನಡೆಸಿದ್ದಾರೆ.

ಈ ಮೊದಲು ಫಾರಿನ್ ಸರಕುಗಳ 'ಕ್ರೇಜ್' ಹೊಂದಿದ್ದ ಭಾರತೀಯರು ಕಳೆದ 2-3 ದಶಕಗಳಿಂದ 'ಫಾರಿನ್ ಕ್ರೇಜಿ' ಆಗಿದ್ದಾರೆ. ಯಾವುದಾದರೂ ಹೊರದೇಶಕ್ಕೆ ಹೋಗಿ ಸೆಟ್ಲ್ ಆಗಬೇಕು ಎಂಬ ಅದಮ್ಯ ಬಯಕೆ ನಮ್ಮಲ್ಲಿ ಬಹುತೇಕರಿಗಿದೆ. ಕೇರಳಿಗರು ಸದಾ ಮಧ್ಯಪ್ರಾಚ್ಯ ದೇಶಗಳತ್ತ ನೋಡುತ್ತಿದ್ದರೆ, ತಮಿಳರು ಸಿಂಗಾಪುರ, ಅಮೆರಿಕ, ಆಸ್ಟ್ರೇಲಿಯಾದತ್ತ ಕಣ್ಣು ನೆಟ್ಟಿರುತ್ತಾರೆ. ತೆಲುಗರು ಅಮೆರಿಕದತ್ತ ನೆಟ್ಟ ದೃಷ್ಟಿಯನ್ನು ಬದಲಿಸುವುದಿಲ್ಲ ಎನ್ನಲಾಗುತ್ತದೆ. ಗುಜರಾತಿಗಳು ಇಂಗ್ಲೆಂಡ್ ಮತ್ತು ಅಮೆರಿಕಕ್ಕೆ, ಪಂಜಾಬಿಗಳು ಕೆನಡಾಕ್ಕೆ ಮತ್ತು ಕನ್ನಡಿಗರು ಮಧ್ಯಪ್ರಾಚ್ಯ, ಅಮೆರಿಕ, ಆಸ್ಟ್ರೇಲಿಯಾಕ್ಕೆ ವಿಮಾನ ಹತ್ತಲು ಕಾಯುತ್ತಿರುತ್ತಾರೆ.

ಅಮೆರಿಕದ ಜನಸಂಖ್ಯೆ 340.01 ಮಿಲಿಯನ್. ಇದರಲ್ಲಿ ಸುಮಾರು 47.8 ಮಿಲಿಯನ್ (ಶೇ.14.70ರಷ್ಟು) ವಲಸಿಗರಿದ್ದಾರೆ. ಇದು ಯಾವುದೇ ರಾಷ್ಟ್ರವು ಆತಂಕದಿಂದ ನೋಡಬಹುದಾದ ಸಂಖ್ಯೆ. 2024ರಲ್ಲಿ ಸುಮಾರು 2.80 ಮಿಲಿಯ್ ವಲಸಿಗರು ಅಮೆರಿಕವನ್ನು ಸೇರಿಕೊಂಡಿದ್ದಾರೆ. ಒಟ್ಟು ವಲಸಿಗರಲ್ಲಿ ಶೇ.23ರಷ್ಟು ಮೆಕ್ಸಿಕೋದವರಾದರೆ, ಶೇ.6ರಷ್ಟು ಭಾರತೀಯರು ಮತ್ತು ಶೇ.5ರಷ್ಟು ಚೀನಿಯರು ಎನ್ನಲಾಗುತ್ತದೆ. ಅಮೆರಿಕದಲ್ಲಿ 5.40 ಮಿಲಿಯನ್ ಭಾರತೀಯರಿದ್ದು, ಇದು ಅಮೆರಿಕದ ಒಟ್ಟು ಜನಸಂಖ್ಯೆಯ ಶೇ. 1.6ರಷ್ಟು ಭಾಗ ಎನ್ನಲಾಗುತ್ತದೆ. ಇವರ ಪೈಕಿ 7,25,000 ವಲಸಿಗರಿಗೆ ಸರಿಯಾದ ದಾಖಲೆಗಳೇ ಇಲ್ಲ ಎಂಬುದು ಗಮನಿಸಬೇಕಾದ ಸಂಗತಿ. ವಿಶೇಷವೆಂದರೆ, ಅಮೆರಿಕದ ಆಡಳಿತ ವ್ಯವಸ್ಥೆಯ ಪ್ರಮುಖ ಹುದ್ದೆಗಳಲ್ಲಿ ಭಾರತೀಯರೂ ಇದ್ದಾರೆ. ಪ್ರತಿದಿನ ಸುಮಾರು 2,200 ವಲಸಿಗರು ಅಮೆರಿಕಕ್ಕೆ ಬರುತ್ತಾರಂತೆ, ತಾಸಿಗೆ 10ರಂತೆ ಭಾರತೀಯರು ಅಮೆರಿಕವನ್ನು ಸೇರಲು ಯತ್ನಿಸುತ್ತಿದ್ದಾರಂತೆ. 2024ರಲ್ಲಿ 90,415 ಭಾರತೀಯರು ಮೆಕ್ಸಿಕೋ ಮತ್ತು ಕೆನಡಾ ಗಡಿಯ ಮೂಲಕ ಅಮೆರಿಕವನ್ನು ಅಕ್ರಮವಾಗಿ ಪ್ರವೇಶಿಸಿದ್ದು ಇವರಲ್ಲಿ ಸುಮಾರು ಅರ್ಧದಷ್ಟು ಮಂದಿ ಗುಜರಾತಿಗಳಂತೆ. ಈ ಅಂಕಿ-ಅಂಶಗಳನ್ನೆಲ್ಲ ನೋಡಿದಾಗ ಅಮೆರಿಕವು ವಲಸಿಗರ ದೇಶ ಎಂದು ಕೆಲವರು ಆಡಿಕೊಳ್ಳುವುದನ್ನು ಸತ್ಯಕ್ಕೆ ದೂರ ಎನ್ನಲಾಗದು.

ಬದುಕಿನ ಬಂಡಿ ನಡೆಸಲು ಜನರು ಒಂದೂರಿನಿಂದ ಇನ್ನೊಂದೂರಿಗೆ ಹೋಗುವಂತೆ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವುದು ಮತ್ತು ನೆಮ್ಮದಿಯ ಬದುಕಿಗೆ ಆ ಸ್ಥಳವು ಸರಿಯೆನಿಸಿದಾಗ ಅಲ್ಲಿಯೇ ಕಾಯಮ್ಮಾಗಿ ತಳವೂರುವುದು ಲಾಗಾಯ್ತಿನಿಂದ ಇರುವ ಪರಿಪಾಠ. ಇದು ಇತ್ತೀಚೆಗೆ ತೀರಾ ಸಾಮಾನ್ಯವಾಗಿ ದೆಯಷ್ಟೇ. ಕೆಲವರು ಗುಣಮಟ್ಟದ/ಹೊಸ ರೀತಿಯ ಬದುಕಿಗೆಂದು, ತೊಡಕು ಮತ್ತು ಜಂಜಾಟಗಳಿಲ್ಲದ ನೆಮ್ಮದಿಯ ಜೀವನ ನಡೆಸಲೆಂದು ಆರ್ಥಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿರುವ ಪಾಶ್ಚಾತ್ಯ ರಾಷ್ಟ್ರಗಳಿಗೆ, ಅದರಲ್ಲೂ ಮುಖ್ಯವಾಗಿ ಅಮೆರಿಕಕ್ಕೆ ಹೀಗೆ ವಲಸೆ ಹೋಗಲು ಹಾತೊರೆಯುತ್ತಾರೆ. ಇಂದಿನ

ಯುವಜನಾಂಗ, ನಿರ್ದಿಷ್ಟವಾಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ತೆರಳಿ, ಅಲ್ಲಿಯೇ ಉದ್ಯೋಗ ಹಿಡಿದು ಶತಾಯಗತಾಯ ಅಲ್ಲಿಯೇ ತಳವೂರುತ್ತಾರೆ. ಕೆಲವರು ಸ್ಥಳೀಯರನ್ನು ಮದುವೆಯಾಗಿ ಅಲ್ಲಿನ ಪೌರತ್ವ ಪಡೆದಿರುವುದನ್ನು ಅಲ್ಲಗಳೆಯಲಾಗದು. ಈ ರೀತಿಯ ವಲಸೆಯು ಅಮೆರಿಕಕ್ಕೆ ಭಾರವಾಗಿದೆ. ಅಮೆರಿಕವು ತನ್ನ ಉದಾರ ವಲಸೆನೀತಿಯನ್ನು ರೂಪಿಸುವಾಗ, ದುಡಿಯುವ ಸ್ಥಳೀಯ ಕೈಗಳ, ಅರ್ಹರ, ಉದ್ಯಮಿಗಳ ಮತ್ತು ವ್ಯವಹಾರಸ್ಥರ ಕೊರತೆ ಅಲ್ಲಿತ್ತು. ಕಾಲಾನಂತರದಲ್ಲಿ, ಸ್ಥಳೀಯರು ಕ್ರಮೇಣ ಮೈಕೊಡವಿಕೊಂಡು ಎದ್ದಿದ್ದರ ಪರಿಣಾಮ ಅವರ ದನಿ ಮಾರ್ದನಿಸತೊಡಗಿದೆ. ಇದರ ಶೃತಿಯನ್ನು ಸರಿಯಾಗಿ ಗ್ರಹಿಸಿದ ಡೊನಾಲ್ಡ್ ಟ್ರಂಪ್ ಅವರ Make Amerika Great Again - MAGA ಚುನಾವಣಾ ಘೋಷಣೆಯಲ್ಲಿ ವಲಸೆನೀತಿಯ ಮಾರ್ಪಾಡಿಗೆ ಒತ್ತು ನೀಡಲಾಗಿತ್ತು ಮತ್ತು ಇದು ಯುವಜನರನ್ನು ಬಹುವಾಗಿ ಆಕರ್ಷಿಸಿತ್ತು. ಟ್ರಂಪ್‌ರ ಪ್ರತಿಸ್ಪರ್ಧಿ ಕಮಲಾ ಹ್ಯಾರಿಸ್ ಅವರು ಈ ನಿಟ್ಟಿನಲ್ಲಿ ದೃಢವಾಗಿ ಮಾತನಾಡದಿದ್ದುದೇ ಅವರ ಸೋಲಿಗೆ ಕಾರಣವಾಯಿತು ಎಂಬ ವಿಶ್ಲೇಷಕರ ಅಭಿಮತದಲ್ಲಿ ತಥ್ಯವಿಲ್ಲದಿಲ್ಲ.

ಅಮೆರಿಕದಲ್ಲಿರುವ ಒಟ್ಟು ವಲಸಿಗರಲ್ಲಿ ಮೆಕ್ಸಿಕನ್ನರ ನಂತರ ಭಾರತೀಯರ ಸಂಖ್ಯೆಯೇ ಹೆಚ್ಚು ಇದ್ದು, ನಿರೀಕ್ಷೆಯಂತೆ ಭಾರತದಲ್ಲಿದ್ದುಕೊಂಡು ಅಮೆರಿಕದ ಕನಸು ಕಾಣುವವರಲ್ಲಿನ ತಳಮಳ ಕೊಂಚ ಹೆಚ್ಚಿದೆ, ಈ ಕನಸು ಭಗ್ನವಾಗಬಹುದೇ ಎಂಬ ಜಿಜ್ಞಾಸೆಯೂ ಶುರುವಾಗಿದೆ. ಸದ್ಯಕ್ಕೆ ಟ್ರಂಪ್‌ರ ವಲಸೆನೀತಿಯು ಕೇವಲ ಅಕ್ರಮ ವಲಸಿಗರನ್ನು ಟಾರ್ಗೆಟ್ ಮಾಡಿದ್ದು ಸ್ವಲ್ಪ ನಿರಾಳತೆ ಕಾಣುತ್ತಿದೆ. ಆದರೆ ಇದು ಹೀಗೇ ಇರುತ್ತದೆ ಎನ್ನಲಾಗುವುದಿಲ್ಲ. ದೇಶದಲ್ಲಿ 'ಇಂಪೋರ್ಟ್ ಟ್ಯಾಕ್ಸ್' ವಿಧಿಸುವಂಥ ಕ್ರಾಂತಿಕಾರಕ ಚಿಂತನೆಯಲ್ಲಿರುವ ಟ್ರಂಪ್, ವಲಸೆ ನೀತಿಯಲ್ಲಿ ವಲಸೆಯನ್ನೇ ನಿಯಂತ್ರಿಸಿಬಿಟ್ಟರೆ? ಹಲವು ಕಟ್ಟುಪಾಡುಗಳಿಗೆ ತಳಕುಹಾಕಿದರೆ? ಎಂಬ ಭಯವು ಭಾರತದಲ್ಲಿದ್ದುಕೊಂಡು ಅಮೆರಿಕದ ಕನಸು ಕಾಣುತ್ತಿರುವವರನ್ನೂ, ಅಮೆರಿಕದಲ್ಲಿರುವ ಭಾರತೀಯ ವಲಸಿಗರನ್ನೂ ಆವರಿಸಿದೆ. ಹೀಗಾಗಿ ಕೆಲವರು ಡೊನಾಲ್ಡ್ ಟ್ರಂಪ್‌ರನ್ನು ಖಳನಾಯಕನಂತೆ ನೋಡುತ್ತಿದ್ದಾರೆ!

ಟ್ರಂಪ್‌ರ ನಿಲುವಿನಲ್ಲಿ ಮೇಲ್ನೋಟಕ್ಕೆ ತಪ್ಪನ್ನು ಹುಡುಕಬಹುದಾದರೂ, ವಾಸ್ತವದಲ್ಲಿ ಅದು ಸರಿಯಾದ ನಿಲುವು ಎನ್ನಬಹುದು. ಯಾವ ದೇಶವೂ ವ್ಯಾಪಾರ, ಉದ್ಯಮ, ಉದ್ಯೋಗ ಮತ್ತು ಸಂಸ್ಕೃತಿಯ ದೃಷ್ಟಿಯಲ್ಲಿ ತನ್ನ ದೇಶವನ್ನು ಮತ್ತು ದೇಶಸ್ಥರನ್ನು ಕಡೆಗಣಿಸಿ, ಪ್ರಜೆಗಳ ಹಿತಾಸಕ್ತಿಯನ್ನು ಬದಿಗೊತ್ತಿ ಆಡಳಿತವನ್ನು ನಡೆಸಲಾಗದು. ಇತ್ತೀಚೆಗೆ ಅಮೆರಿಕದಲ್ಲಿ ಉದ್ಯೋಗಗಳು ವಲಸಿಗರ ಪಾಲಾಗುತ್ತಿವೆ ಮತ್ತು ವಲಸಿಗರನ್ನು ನೇಮಿಸಿಕೊಂಡರೆ ಕಂಪನಿಗಳಿಗೆ 'ಸಿಟಿಸಿ' (cost to company) ಕಡಿಮೆಯಾಗುತ್ತಿದೆ, ಈ ಕಾರಣಕ್ಕಾಗಿ ಸ್ಥಳೀಯರನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬ ದೂರೂ ಇದೆಯಂತೆ. ಬಹುಶಃ ಇದನ್ನು, ಕರ್ನಾಟಕದಲ್ಲಿನ ಕಟ್ಟಡ ಕಾಮಗಾರಿಗಳಿಗೆ ಹೊರರಾಜ್ಯಗಳಿಂದ ಬಂದ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪರಿಸ್ಥಿತಿಗೆ ಹೋಲಿಸಬಹುದೇನೋ?

ನೈತಿಕವಾಗಿ ನಾವು ಟ್ರಂಪ್‌ರ ವಲಸೆನೀತಿಯನ್ನು ವಿರೋಧಿಸುವ ಸ್ಥಿತಿಯಲ್ಲಿಲ್ಲ. ಒಂದು ಹಳ್ಳಿಯ ಅಂಗನವಾಡಿಗೆ ಪಕ್ಕದ ಹಳ್ಳಿಯ ಶಿಕ್ಷಕಿಯೊಬ್ಬರನ್ನು ನೇಮಿಸಿದಾಗ, ಮಣ್ಣಿನ ಮಕ್ಕಳ ಹೆಸರಿನಲ್ಲಿ ತಿಂಗಳುಗಟ್ಟಲೆ ಪ್ರತಿಭಟನೆ ನಡೆಸಿ ಆ ಶಿಕ್ಷಕಿಯನ್ನು ವಾಪಸ್ ಕಳಿಸಿದ ಉದಾಹರಣೆ ನಮ್ಮಲ್ಲಿರುವಾಗ, ದೇಶದಲ್ಲಿ ಪ್ರತಿ ರಾಜ್ಯವೂ ಸ್ಥಳೀಯರಿಗೆ ಶೇ.80ರಷ್ಟು ಉದ್ಯೋಗವನ್ನು ಕಡ್ಡಾಯವಾಗಿ ಕಾಯ್ದಿರಿಸಬೇಕು ಎಂಬ ಕಾನೂನನ್ನು ಮಾಡುವಾಗ, local is vocal ಎನ್ನುವಾಗ, ಆತ್ಮನಿರ್ಭರತೆಯ ಉತ್ತುಂಗದಲ್ಲಿರುವಾಗ, 'ಮೇಕ್ ಇನ್ ಇಂಡಿಯಾ' ಎಂದು ಬೊಬ್ಬಿಡುವಾಗ, ಬೆಂಗಳೂರಿನಲ್ಲಿ ವಲಸಿಗರ ಶೀತಲ ಯುದ್ಧವನ್ನು ಕಾಣುವಾಗ ಮತ್ತು ಅದಕ್ಕೆ ಸಾಕಷ್ಟು ಬೆಂಬಲ ಗೋಚರಿಸುವಾಗ, 'ಅಮೆರಿಕವು ಅಮೆರಿಕನ್ನರಿಗೆ ಮಾತ್ರ' ಎಂಬ ಟ್ರಂಪ್ ಅವರ ನಿಲುವನ್ನು ತಪ್ಪುಹೆಜ್ಜೆ ಎಂದು ವಿರೋಧಿಸಲಾದೀತೇ?

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಸಿಂಗ್ ಈಸ್ ಮಿಂಚಿಂಗ್!

ಆಡದೆಲೆ ಮಾಡುವನು ರೂಢಿಯೊಳಗುತ್ತಮನು, ಆಡಿ ಮಾಡುವನು ಮಧ್ಯಮನು, ಅಧಮ ತಾನಾಡಿಯೂ ಮಾಡದವನು'' ಎಂದಿದ್ದಾರೆ ನಮ್ಮ ಸರ್ವಜ್ಞ ಕವಿ. ಕಿಲೋಮೀಟರುಗಟ್ಟಲೆ ಉಪದೇಶವನ್ನೇನೋ ನೀಡಬಹುದು, ಆದರೆ ಆಡಿದಂತೆ ನಡೆದು ತೋರಿಸುವುದಿದೆಯಲ್ಲಾ, ಅದು ಶಾನೆ ತ್ರಾಸದ ಕೆಲಸ ಕಣ್ರೀ!

ಆದರೆ ಕೇಂದ್ರ ಸಚಿವ ಡಾ.ಜಿತೇಂದ್ರ ಪ್ರಸಾದ್ ಅವರು ಈ ಜಾಣನುಡಿಯನ್ನು ಆಗಾಗ ಉಲ್ಲೇಖಿಸುವುದು ಮಾತ್ರವಲ್ಲದೆ, ಅದರಂತೆಯೇ ನಡೆದುಕೊಳ್ಳುವುದೂ ಉಂಟಂತೆ. ಇದಕ್ಕೊಂದು ಉದಾಹರಣೆ ಬೇಕೇ? 10 ವರ್ಷಗಳ ಹಿಂದೆ ಅವರು ದೆಹಲಿಯ ಲೂಟ್ಯೆನ್ಸ್ ಪ್ರದೇಶದಲ್ಲಿನ ತಮ್ಮ ಬಂಗಲೆಯನ್ನು ಪ್ರವೇಶಿಸಿದ ನಂತರ ಮಾಡಿದ ಮೊಟ್ಟಮೊದಲ ಕೆಲಸವೇನು ಗೊತ್ತೇ- ಬಂಗಲೆಯ ಚಾವಣಿಯ ಮೇಲೆ ಸೌರವಿದ್ಯುತ್ ಉತ್ಪಾದನೆಯ ಫಲಕಗಳನ್ನು ಅಳವಡಿಸಲು ಏರ್ಪಾಡು ಮಾಡಿದ್ದು. ಎಲ್ಲರಿಗೂ ಗೊತ್ತಿರುವಂತೆ ಜಿತೇಂದ್ರ ಸಿಂಗ್ ಅವರು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭೂವಿಜ್ಞಾನದ ಖಾತೆಗಳನ್ನು ನಿರ್ವಹಿಸುತ್ತಿರುವುದರಿಂದ, ಅವರ ಅಧಿಕೃತ ಕಚೇರಿಯಲ್ಲಿನ ಲಗತ್ತಾದ ಅಥವಾ ಆಯಕಟ್ಟಿನ ಜಾಗದಲ್ಲಿ ಪ್ರತಿಷ್ಠಾಪನೆಗೊಳ್ಳುವಂಥ ಹೆಮ್ಮೆ ಮತ್ತು ಸೌಭಾಗ್ಯ ಈ ಸೌರಫಲಕಗಳಿಗೆ ಸಿಕ್ಕಿದೆ ಎನ್ನಬೇಕು. ಹೀಗಾಗಿ 'ಸಿಂಗ್ ಈಸ್ ಮಿಂಚಿಂಗ್' ಎನ್ನಲಡ್ಡಿಯಿಲ್ಲ, ಅಲ್ಲವೇ?

ಬಜೆಟ್ ಸುತ್ತಲ ಹುಯಿಲು

ಕೇಂದ್ರ ಅರ್ಥ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರದಂದು ಬಜೆಟ್ ಮಂಡಿಸಿದ್ದು ನಿಮಗೆ ಗೊತ್ತು. ಅದು ತೆರಿಗೆಯ ಸ್ತರಗಳಲ್ಲಿ ನೀಡಿದ

ವಿನಾಯಿತಿಯಿಂದಾಗಿ ಮಧ್ಯಮವರ್ಗದ ವೇತನದಾರ ನೌಕರರು ಶಾನೆ ಖುಷಿಯಾ ಗಿರುವುದೂ ಈಗಾಗಲೇ ಜಗಜ್ಜಾಹೀರು. ಹೀಗಾಗಿ ಸಮಾಜದ ಈ ವಲಯದಿಂದ ನಿರ್ಮಲಾ ಅವರೆಡೆಗೆ ಮೆಚ್ಚುಗೆಯ ಮಾತುಗಳು ಹರಿದಿವೆ. ಆದರೆ, 'ಮೊಸರಲ್ಲೂ ಕಲ್ಲು ಹುಡುಕಲು ಹೊರಡುವ ಒಲ್ಲದ ಗಂಡ'ರಂಥ ಕೆಲ ವಿಪಕ್ಷ ನಾಯಕರು ಎಂದಿನಂತೆಯೇ ಅಪಸ್ವರ ಹಾಡಿದ್ದಾರೆ. ''ರೈತರ ಕೃಷಿ ಸಾಲ ಮನ್ನಾ ಬಗ್ಗೆ ಈ ಬಜೆಟ್ ಏನೂ ಹೇಳಿಲ್ಲ'' ಎಂಬ ರಾಜ್ಯ ಕಾಂಗ್ರೆಸ್ಸಿಗರೊಬ್ಬರ ಹೇಳಿಕೆಯೇ ಈ ಮಾತಿಗೆ ಸಾಕ್ಷಿ. ಮತ್ತೆ ಕೆಲವು ಜನಸಾಮಾನ್ಯರಂತೂ, ''ವೇತನದಾರರ 12 ಲಕ್ಷಗಳವರೆಗಿನ ವಾರ್ಷಿಕ ಆದಾಯಕ್ಕೆ ತೆರಿಗೆ ಅನ್ವಯವಾಗುವುದಿಲ್ಲ ಎಂದೇನೋ ನಿರ್ಮಲಾ ಸೀತಾರಾಮನ್ ಹೇಳಿಬಿಟ್ಟರು; ಆದರೆ ಆ 12 ಲಕ್ಷ ರುಪಾಯಿಗಳನ್ನು ಸಂಪಾದಿಸೋದು ಹೇಗೆ ಅಂತ ಹೇಳಿಕೊಡಲಿಲ್ವಲ್ಲಾ ಶಿವನೇ'' ಎನ್ನುತ್ತಾ ವಾಟ್ಸಾಪುಗಳಲ್ಲಿ ಪ್ರಲಾಪಿಸುತ್ತಿದ್ದಾರಂತೆ!

ಒಟ್ಟಿನಲ್ಲಿ, 'ಎಲ್ಲ ಕಾಲಕ್ಕೂ ಎಲ್ಲ ಜನರನ್ನೂ ಎಲ್ಲ ವಿಧಗಳಲ್ಲೂ ಸಮಾಧಾನಪಡಿಸಲು ಆಗುವುದಿಲ್ಲ' ಎಂಬ ಜನಪ್ರಿಯ ಗ್ರಹಿಕೆಗೆ ಈ ಬಾರಿಯ ಬಜೆಟ್ ಮತ್ತೊಮ್ಮೆ ಪುಷ್ಟಿನೀಡಿದೆ ಎನ್ನಲಡ್ಡಿಯಿಲ್ಲ!

ನಾರಾಯಣ ನಾರಾಯಣ!

ಕುಂಭಮೇಳ ನಡೆಯುತ್ತಿರುವ ಪ್ರಯಾಗ್‌ರಾಜ್‌ಗೆ ವಿಮಾನದಲ್ಲಿ ತೆರಳಿ, ಅಲ್ಲಿನ ತ್ರಿವೇಣಿ ಸಂಗಮದಲ್ಲಿ ಒಮ್ಮೆ ಮಿಂದು, ಇದ್ದಬದ್ದ ಪಾಪಗಳನ್ನೆಲ್ಲಾ ಕಳೆದುಕೊಳ್ಳೋಣಾ ಅಂದ್ರೆ, ಹಾಳಾದ್ದು ಟಿಕೆಟ್ ದರ ವಿಪರೀತವಾಗಿದೆಯಲ್ಲಪ್ಪಾ'' ಎಂಬ ಮಧ್ಯಮ ವರ್ಗದ ಕುಟುಂಬವೊಂದರ ಮಹಿಳಾಮಣಿ ಕೈ ಕೈ ಹಿಸುಕಿಕೊಳ್ಳುತ್ತಿದ್ದಳಂತೆ. ಇದನ್ನು ಕೇಳಿಸಿಕೊಂಡ ಆಕೆಯ ಪತಿರಾಯ, ''ಕುಂಭಮೇಳದಲ್ಲಿ ಮೀಯದಿದ್ದರೆ ಏನಾಯಿತು, ಈ ಕುಂಭದಲ್ಲಿರುವ ನೀರಿನಿಂದ ಸ್ನಾನ ಮಾಡಿ, ಮಮ್ಮು ಮಾಡಿ, ಪಾಚ್ಕೋ..'' ಎಂದು ಹೇಳುತ್ತಾ, ಮಡಕೆಯಲ್ಲಿ ತಂದಿದ್ದ ನೀರನ್ನು ಆಕೆಯ ತಲೆಮೇಲೆ ಸುರಿದನಂತೆ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:20

ಸಮಾಚಾರ ಸಣ್ಣದಲ್ಲ

ಗುಜರಾತ್: ಕಂದಕಕ್ಕೆ ಬಸ್ ಉರುಳಿ 7 ಸಾವು

ಗಾಂಧೀನಗರ: ಮಹಾರಾಷ್ಟ್ರದ ನಾಸಿಕ್‌ನಿಂದ ಗುಜರಾತ್‌ಗೆ ಯಾತ್ರಾರ್ಥಿಗಳನ್ನು ಕರೆದೊಯ್ಯುತ್ತಿದ್ದ ಖಾಸಗಿ ಬಸ್ ಭಾನುವಾರ ನಸುಕಿನ 5.30ರಲ್ಲಿ ನಾಸಿಕ್ ಹೆದ್ದಾರಿಯಲ್ಲಿ ಆಳವಾದ ಕಂದಕಕ್ಕೆ ಉರುಳಿದ ಪರಿಣಾಮ 7 ಪ್ರಯಾಣಿಕರು ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ. 15 ಪ್ರಯಾಣಿಕರು, ಚಾಲಕ ಸಿಬ್ಬಂದಿ ಗಾಯಗೊಂಡಿದ್ದು, ಅವರ ದೇಹಸ್ಥಿತಿ ಗಂಭೀರವಾಗಿದೆ ಎಂದು ಗುಜರಾತ್‌ನ ಅಧಿಕಾರಿಯೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ. ನಾಸಿಕ್-ಅಹಮದಾಬಾದ್ ಹೆದ್ದಾರಿಯ ಸಪುತಾರಾ ಘಾಟ್‌ನಲ್ಲಿ 200 ಅಡಿ ಆಳದ ಕಂದಕಕ್ಕೆ ಬಸ್ ಉರುಳಿದೆ. ಬಸ್‌ನಲ್ಲಿದ್ದ ಯಾತ್ರಾರ್ಥಿಗಳು ಮಧ್ಯಪ್ರದೇಶದವರು ಎನ್ನಲಾಗಿದೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಅಪಘಾತಕ್ಕೆ ಕಾರಣ ತಿಳಿಯಲು ತನಿಖೆ ನಡೆಯುತ್ತಿದೆ.

ಕುಂಭಮೇಳ ಕಾಲ್ತುಳಿತ 16000 ಮೊಬೈಲ್ ತನಿಖೆ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿನ ಕಾಲ್ತುಳಿತ ದುರಂತದ ತನಿಖೆ ನಡೆಸುತ್ತಿರುವ ಅಧಿಕಾರಿಗಳು ಘಟನೆ ದಿನ(ಜ.29) ಸಂಗಮ್ ನೋಸ್ ಪ್ರದೇಶದಲ್ಲಿ ಸಕ್ರಿಯವಾಗಿದ್ದ 16 ಸಾವಿರಕ್ಕೂ ಅಧಿಕ ಮೊಬೈಲ್ ಫೋನ್‌ಗಳ ದತ್ತಾಂಶಗಳನ್ನು ಸಮಗ್ರವಾಗಿ ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. ಅಂದು ಚಾಲನೆಯಲ್ಲಿ ಕೆಲವು ಮೊಬೈಲ್ ಫೋನ್ ಸಂಖ್ಯೆಗಳು ಸದ್ಯ ಸ್ವಿಚ್ ಆಫ್ ಆಗಿರುವುದು ಅನುಮಾನ ಹೆಚ್ಚಿಸಿದೆ. ನಿಯಂತ್ರಣ ಕೊಠಡಿಯಲ್ಲಿ ಸಂಗ್ರಹವಾಗಿರುವ ಸಿಸಿಟಿವಿ ದೃಶ್ಯಾವಳಿಗಳಲ್ಲಿನ ಚಿತ್ರಗಳಲ್ಲಿರುವ ವ್ಯಕ್ತಿಗಳನ್ನು 'ಮುಖ ಗುರುತಿಸುವಿಕೆ ಅಪ್ಲಿಕೇಶನ್' ಮೂಲಕ ಗುರುತಿಸಿ, ಸಂಶಯಾಸ್ಪದವಾಗಿ ಕಂಡುಬಂದವರನ್ನು ಫೋಟೊ, ಮಾಹಿತಿಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ವಸಂತ ಪಂಚಮಿ ದಿನವಾದ ಸೋಮವಾರ ಬೆಳಗ್ಗೆ 3ನೇ ಅಮೃತ ಸ್ನಾನ ನಡೆಯಲಿದೆ. ತ್ರಿವೇಣಿ ಸಂಗಮ ಸ್ಥಳದಲ್ಲಿ, ನದಿ ತೀರದ ಪ್ರಮುಖ ಘಟ್ಟಗಳಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿದ್ದಾರೆ.

ಇಸ್ರೇಲ್ ಸೇನೆಗೆ ಹೊಸ ಮುಖ್ಯಸ್ಥ

ಟೆಲ್‌ಅವಿವ್: ನಿವೃತ್ತ ಮೇಜರ್ ಜನರಲ್ ಇಯಾಲ್ ಜಮೀರ್ ಅವರನ್ನು ಇಸ್ರೇಲ್ ಸೇನೆಗೆ ಹೊಸ ಮುಖ್ಯಸ್ಥರನ್ನಾಗಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇಮಿಸಿದ್ದಾರೆ. ಇಯಾಲ್ ಜಮೀರ್, ನೆತನ್ಯಾಹು ಅವರ ಮಿಲಿಟರಿ ಕಾರ್ಯದರ್ಶಿಯಾಗಿದ್ದಾರೆ. ಜಮೀರ್ 2018ರಿಂದ 2021ರವರೆಗೆ ಸೈನ್ಯದ ಉಪ ಮುಖ್ಯಸ್ಥರಾಗಿದದರು. ದಕ್ಷಿಣ ಕಮಾಂಡ್ ಮುನ್ನಡೆಸಿದ್ದರು. 2023ರ ಅ.7ರಂದು ದಕ್ಷಿಣ ಇಸ್ರೇಲ್ ಭಾಗದಲ್ಲಿನ ಸಂಗೀತ ಕಚೇರಿ ಮೇಲೆ ಹಮಾಸ್ ಉಗ್ರರು ನಡೆಸಿದ ಭಯೋತ್ಪಾದಕ ದಾಳಿ ತಡೆಯುವಲ್ಲಿ ವಿಫಲರಾಗಿದ್ದಕ್ಕೆ ಹೊಣೆಗಾರಿಕೆ ವಹಿಸಿಕೊಂಡ ನಂತರ ಮಾಜಿ ಸೇನಾ ಮುಖ್ಯಸ್ಥ ಹಜಿರ್ ಹಲೇವಿ ಜನವರಿಯಲ್ಲಿ ರಾಜೀನಾಮೆ ನೀಡಿದ್ದರು. ತೆರವಾದ ಇಸ್ರೇಲ್ ಸೇನಾ ಮುಖ್ಯಸ್ಥ ಹುದ್ದೆಗೆ ನಿವೃತ್ತ ಮೇಜರ್ ಜನರಲ್ ನೇಮಕವಾಗಿದೆ.



2022 ಪ.ಬಂ. ಸ್ಫೋಟ: ಮುಖ್ಯ ಆರೋಪಿ ಸೆರೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಪೂರ್ಬಾ ಮೇದಿನಿಪುರ ಜಿಲ್ಲೆಯ ಭೂಪತಿನಗರದಲ್ಲಿ 2022ರಲ್ಲಿ ಮೂರು ಜೀವಗಳನ್ನು ಬಲಿ ತೆಗೆದುಕೊಂಡ ಬಾಂಬ್ ಸ್ಫೋಟ ಪ್ರಕರಣದ ಮುಖ್ಯ ಆರೋಪಿ, ಭೂಪತಿ ನಗರ ನಿವಾಸಿ ಪಚಾನನ್ ಘೋರೈನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ರಾಜಕುಮಾರ್ ಮನ್ನಾ ಎಂಬವರ ಮನೆಯಲ್ಲಿ ಭಾರೀ ತೀವ್ರತೆಯ ಸ್ಫೋಟವಾಗಿದ್ದು, ಮನೆ ಮಾಲೀಕ ಸ್ಥಳದಲ್ಲೇ ಸಾವಿಗೀಡಾದರು. ಗಂಭೀರವಾಗಿ ಗಾಯಗೊಂಡಿದ್ದ ಬುದ್ಧದೇಬ್ ಮನ್ನಾ ಅಲಿಯಾಸ್ ಲಾಲು ಮತ್ತು ಬಿಸ್ವಜಿತ್ ಗಯೆನ್ ನಂತರ ಸಾವನ್ನಪ್ಪಿದರು. 2022ರ ಡಿ.20ರಂದು ರಾಜ್ಯ ಪೊಲೀಸರಿಂದ ತನಿಖೆ ವಹಿಸಿಕೊಂಡ ಎನ್‌ಐಎ, ಈ ಪ್ರದೇಶದಲ್ಲಿ ಭಯೋತ್ಪಾದನೆ ಮತ್ತು ಹಿಂಸಾಚಾರ ಹೆಚ್ಚಿಸಲು ಬಾಂಬ್ ತಯಾರಿಕೆ ನಡೆದಿತ್ತು. ಸ್ಫೋಟಕಗಳ ಪೂರೈಕೆ ವೇಳೆ ಸ್ಫೋಟ ಸಂಭವಿಸಿದೆ ಎಂದು ಹೇಳಿದೆ.

{ ನಿತೇಶ್ ರಾಣೆ } ಮಹಾರಾಷ್ಟ್ರ ಸಚಿವ

ಸಂಜಯ್ ರಾವತ್ ಅವರ ರಾಜ್ಯಸಭಾ ಸದಸ್ಯತ್ವ ಅವಧಿ ಸದ್ಯದಲ್ಲೇ ಅಂತ್ಯಗೊಳ್ಳಲಿದೆ. ಆದರೆ, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಪಕ್ಷ ಮತ್ತೊಂದು ಅವಧಿಗೆ ಅವರನ್ನು ರಾಜ್ಯಸಭೆಗೆ ಕಳುಹಿಸಿಕೊಡಲಾಗದು. ಏಕೆಂದರೆ ಆ ಪಕ್ಷದ ಬಳಿ ಅಷ್ಟು ಸಂಖ್ಯೆಯ ಶಾಸಕರಿಲ್ಲ. ಹಾಗಾಗಿ ಸಂಜಯ್ ರಾವತ್ ಈಗ ಕಾಂಗ್ರೆಸ್ ಪಕ್ಷ ಸೇರಲು ಮಾತುಕತೆ ನಡೆಸಿದ್ದಾರೆ.

ನಿರ್ಮಲಾ ಸೀತಾರಾಮನ್ ವ್ಯಾಖ್ಯಾನ | ಜನರ ದನಿ ಆಲಿಸಿ ಪ್ರತಿಕ್ರಿಯಿಸುವ ಸರಕಾರ | ತೆರಿಗೆಗಳ ಗಣನೀಯ ಕಡಿತ ಮೋದಿ ಸರಕಾರದ ದಿಟ್ಟಕ್ರಮ

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಬಜೆಟ್

ದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿನ ಕೇಂದ್ರದ ಎನ್‌ಡಿಎ ಸರಕಾರ ಈ ಬಾರಿ ಮಂಡಿಸಿರುವ ಬಜೆಟ್ 'ಜನರಿಂದ, ಜನರಿಗಾಗಿ, ಜನರಿಗೋಸ್ಕರ' ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬಣ್ಣಿಸಿದ್ದಾರೆ. ಆ ಮೂಲಕ ಅಮೆರಿಕ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರ ಮಾತುಗಳನ್ನು ನೆನಪಿಸಿದ್ದಾರೆ.

ಬಜೆಟ್‌ನಲ್ಲಿ ಪರಿಚಯಿಸಲಾದ ತೆರಿಗೆ ಕಡಿತ ಕ್ರಮಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರೇನೋ ಪೂರ್ಣ ಬೆಂಬಲ ನೀಡಿದರು. ಆದರೆ ತೆರಿಗೆ ಕಡಿತ ಕ್ರಮಕ್ಕೆ ತೆರಿಗೆ ಇಲಾಖೆ ಅಧಿಕಾರಿಗಳ ಮನವೊಲಿಸುವುದಕ್ಕೂ ಬಹಳ ಸಮಯ ತೆಗೆದುಕೊಂಡಿತು ಎಂದು ನಿರ್ಮಲಾ ಸೀತಾರಾಮನ್ ಸುದ್ದಿಸಂಸ್ಥೆಗೆ ಭಾನುವಾರ ನೀಡಿದ ವಿಶೇಷ ಸಂದರ್ಶನದಲ್ಲಿ ಹೇಳಿದ್ದಾರೆ.

ಪ್ರಾಮಾಣಿಕ ತೆರಿಗೆದಾರರ ಕಳವಳಗಳು ಸರಕಾರಕ್ಕೆ ಅರ್ಥವಾಗಿವೆ. ದೇಶದ ಮಧ್ಯಮ ವರ್ಗದವರ ಧ್ವನಿಯನ್ನು ಎನ್‌ಡಿಎ ಸರಕಾರ ಕೇಳಿಸಿಕೊಂಡಿದೆ. ದೇಶದ ವಿಶಾಲ ವ್ಯಾಪ್ತಿಯ ಆರ್ಥಿಕ ಬೆಳವಣಿಗೆ ನಡೆಯನ್ನು ಉತ್ತೇಜಿಸುವುದರ ಜತೆಗೇ ತೆರಿಗೆದಾರರ ಬೇಡಿಕೆಗಳನ್ನು ಈಡೇರಿಸುವ ಗುರಿಯನ್ನೂ 2025-26ನೇ ಹಣಕಾಸು ವರ್ಷದ ಬಜೆಟ್ ಹೊಂದಿದೆ ಎಂದು ಸಚಿವೆ ಹೇಳಿದರು.

ತೆರಿಗೆ ಪರಿಹಾರ ಕ್ರಮಗಳ ಹಿಂದಿನ ತರ್ಕವನ್ನು ವಿವರಿಸಿದ ಸಚಿವೆ, ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕಿದೆ. ಒಂದು, ನೇರ ತೆರಿಗೆ ಸರಳವಾಗಿ ಇರಬೇಕು ಮತ್ತು ಅನುಸರಣೆಗೆ ಸುಲಭ ಆಗಿರಬೇಕು ಎಂಬುದೇ ಆ ಚಿಂತನೆಯಾಗಿದೆ. ಆದಾಯ ತೆರಿಗೆ ಕಾಯ್ದೆಯ ಸಂಕೀರ್ಣ ರಚನೆಗಳನ್ನು ಸರಳೀಕರಿಸಬೇಕಾದ ಅಗತ್ಯವಿದೆ ಎಂಬುದನ್ನು ಒಪ್ಪಿಕೊಂಡರು. ಭಾರತದಲ್ಲಿ ತೆರಿಗೆದಾರರ ಮಾಹಿತಿ ಆಧರಿಸಿ, ತೆರಿಗೆ ವಿಧಿಸಲು ಅರ್ಹರಾದವರು, ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಅನೇಕರನ್ನು ತೆರಿಗೆ ಜಾಲಕ್ಕೆ ಸ್ವತಃ ಒಳಪಡುವಂತೆ ಮಾಡುವುದಕ್ಕೆ ಪ್ರೋತ್ಸಾಹಿಸಬೇಕಿದೆ. ಎಂದಿಗೂ ಆದಾಯ ತೆರಿಗೆ ಪಾವತಿಸದಿರುವ ಅಥವಾ ಈಗ ಆದಾಯ ತೆರಿಗೆ ಪಾವತಿಗೆ ಅರ್ಹರಾದವರನ್ನು ವ್ಯವಸ್ಥೆ ವ್ಯಾಪ್ತಿಗೆ ತರಬೇಕು. ತೆರಿಗೆ ಪಾವತಿಸಬೇಕಾದ ಹೊಣೆಗಾರಿಕೆ ಮತ್ತು ತೆರಿಗೆ ಪಾವತಿ ಹಿಂದಿನ ಮಹತ್ವವನ್ನು ಜನರು ಅರ್ಥಮಾಡಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ ಎಂದು ನಿರ್ಮಲಾ ಸೀತಾರಾಮನ್ ನುಡಿದರು.

ತೆರಿಗೆ ಪ್ರಮಾಣ ಕಡಿತ: ತೆರಿಗೆ ಪ್ರಮಾಣದಲ್ಲಿ ಕಡಿತ ಕ್ರಮವು ಹೊಸ ತೆರಿಗೆ ವಿಧೇಯಕದೆಡೆಗಿನ ಮೊದಲ ದೊಡ್ಡ ಹೆಜ್ಜೆಯಾಗಿದೆ. ಈ ತೆರಿಗೆ ಪ್ರಮಾಣ ಕಡಿತ ಕ್ರಮವನ್ನು ಜಾರಿಗೆ ತರಲು ಹೊಸ ಮಸೂದೆ ಜಾರಿಗಾಗಿ ಕಾಯಲಿಲ್ಲ. ಹೊಸ ಆಡಳಿತವು ತೆರಿಗೆ ಪ್ರಮಾಣ ಹೇಗೆ ಕ್ರಮಬದ್ಧವಾಗಿ ತಗ್ಗುತ್ತದೆ ಎಂದು ತೋರಿಸುತ್ತದೆ. ಈ ಬಾರಿ, ತೆರಿಗೆ ಸ್ಲ್ಯಾಬ್‌ಗಳ ನಡುವಿನ ಪರಿವರ್ತನೆ ಸುಗಮಗೊಳಿಸಿದ್ದೇವೆ ಎಂದು ಸಚಿವೆ ವಿವರಿಸಿದರು.

ಪ್ರಧಾನಿ ಮೋದಿ ಸರಕಾರ ಸದಾ ಉದ್ಯಮ ಲೋಕದ ದಿಗ್ಗಜರಿರಲಿ, ಬುಡಕಟ್ಟು ಜನಾಂಗದವರೇ ಆಗಿರಲಿ ವಿವಿಧ ವರ್ಗದ ಜನರ ಮಾತುಗಳನ್ನು ಆಲಿಸುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೇಶದ ಜನ ಸಮಸ್ಯೆಗಳನ್ನು ಪರಿಹರಿಸಲು ಉತ್ಸುಕರು. ಅಂತೆಯೇ, ಪ್ರಧಾನಿ ಮೋದಿ ಅವರೂ ಜನರ ಮಾತನ್ನು ನಿಜವಾಗಿ ಕೇಳಿಸಿಕೊಳ್ಳುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ. ಇಂಥ ಜನಪರ ಸರಕಾರದ ಭಾಗವಾಗಿರುವುದಕ್ಕೆ ನನಗೆ ಹೆಮ್ಮೆ ಇದೆ ಎಂದು ಸಚಿವೆ ನಿರ್ಮಲಾ ಹೇಳಿದರು.

2024ರ ಜುಲೈನಲ್ಲಿ ಮಂಡಿಸಿದ ಪೂರ್ಣ ಪ್ರಮಾಣದ ಬಜೆಟ್‌ನಲ್ಲಿ ಘೋಷಿಸಿದಂತೆ, ಹೊಸ ಆದಾಯ ತೆರಿಗೆ ಕಾಯಿದೆ ರಚಿಸಲು 6 ತಿಂಗಳು ತೆಗೆದುಕೊಂಡಿದ್ದೇವೆ. ಭಾಷೆಯ ಸರಳೀಕರಣ, ಅನುಸರಿಸುವುದಕ್ಕೆ ಎದುರಾಗುವ ಕಷ್ಟವನ್ನು ಕಡಿಮೆ ಮಾಡುವುದು ಮತ್ತು ಕಾಯಿದೆಯನ್ನು ಹೆಚ್ಚು ಬಳಕೆದಾರ ಸ್ನೇಹಿಯನ್ನಾಗಿಸಲು ಗಮನಹರಿಸಿದ್ದೇವೆ.

**-ನಿರ್ಮಲಾ ಸೀತಾರಾಮನ್
ಕೇಂದ್ರ ವಿತ್ತ ಸಚಿವೆ**

ಪ್ರಾಮಾಣಿಕ ತೆರಿಗೆದಾರರ ಪ್ರಶ್ನೆ!

ತೆರಿಗೆ ಕಾಯಿದೆಯಲ್ಲಿ ಸುಧಾರಣೆಗಳನ್ನು ತರುವುದರಲ್ಲಿ ತೆರಿಗೆದಾರರಿಂದ ಬಂದ ಪ್ರತಿಕ್ರಿಯೆಗಳು ಪ್ರಮುಖ ಪಾತ್ರ ವಹಿಸಿವೆ. ನಾನು ಪ್ರಯಾಣದಲ್ಲಿದ್ದಾಗ ಎದುರಾಗುವ ಜನರು, 'ನಾವು ಪ್ರಾಮಾಣಿಕ ತೆರಿಗೆದಾರರು, ಆದರೆ ನೀವು ನಮಗಾಗಿ ಏನು ಮಾಡಬಹುದು ಎಂಬ ಬಗ್ಗೆ ಯೋಚಿಸುವಿರಾ?' ಎಂದು ಪ್ರಶ್ನಿಸುತ್ತಿದ್ದರು. ತೆರಿಗೆ ಕಾಯಿದೆ ಸರಳೀಕರಣಕ್ಕೆ ಪರಿಹಾರ ಹುಡುಕುವ ಕೆಲಸವನ್ನು ನನಗೆ ವಹಿಸಿದ ಪ್ರಧಾನಿ ಮೋದಿ ಅವರ ಜತೆ ಈ ವಿಚಾರವನ್ನು ಚರ್ಚಿಸಿದೆ. ಜತೆಗೆ ಸಚಿವಾಲಯದಲ್ಲಿನ ಚರ್ಚೆ ಮತ್ತು ಪ್ರಧಾನಿ ಜತೆಗಿನ ಸಮಾಲೋಚನೆ ನಂತರ ತೆರಿಗೆ ನಿಯಮಗಳಲ್ಲಿ ಈ ಸುಧಾರಣೆಗಳನ್ನು ಪರಿಚಯಿಸಲು ಸಾಧ್ಯವಾಗಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ವಿವರಿಸಿದ್ದಾರೆ.

ರೇಟಿಂಗ್ ಬದಲಿಸದ 'ಮೂಡೀಸ್'

ಭಾರತ ವಿತ್ತೀಯ ಶಿಸ್ತನ್ನು ಬಲವಾಗಿ ಅನುಸರಿಸುತ್ತಿದೆ. ಹಣದುಬ್ಬರವನ್ನೂ ನಿಯಂತ್ರಣದಲ್ಲಿರಿಸಿದೆ. ಹಾಗಾಗಿ ಪ್ರತಿಷ್ಠಿತ ರೇಟಿಂಗ್ ಸಂಸ್ಥೆಯಾದ 'ಮೂಡೀಸ್' ಸದ್ಯ ಭಾರತದ ವಿತ್ತೀಯ ಬಲವರ್ಧನೆಯ ರೇಟಿಂಗ್ ಅನ್ನು ಬದಲಿಸುವ ಗೋಜಿಗೇ ಹೋಗಿಲ್ಲ ಎಂಬ ಅಂಶವನ್ನು ಸಚಿವೆ ನಿರ್ಮಲಾ ಸೀತಾರಾಮನ್ ಸಂದರ್ಶನದಲ್ಲಿ ಒತ್ತಿ ಹೇಳಿದ್ದಾರೆ. ಇದಕ್ಕೆ ಕೇಂದ್ರ ಸರಕಾರ ಸಾಲದ ಹೊರೆಯನ್ನು ಕಡಿಮೆ ಮಾಡಿಕೊಳ್ಳುತ್ತಲೇ ಇರುವುದು ಮತ್ತು ಇನ್ನೊಂದೆಡೆ ಆದಾಯದ ಮೂಲಗಳನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿರುವುದೇ ಮುಖ್ಯ ಕಾರಣವಾಗಿದೆ ಎಂದಿದ್ದಾರೆ.

ರೂಪಾಯಿ ಮೌಲ್ಯವೇನೂ ತಗ್ಗಿಲ್ಲ

ಭಾರತದ ಕರೆನ್ಸಿ ಈಗಲೂ ಬಲಿಷ್ಠವಾಗಿದೆ. ಅಮೆರಿಕದ ಡಾಲರ್ ಹೊರತಾಗಿ ಬೇರಾವುದೇ ದೇಶದ ಕರೆನ್ಸಿ ಎದುರು ಭಾರತದ ರೂಪಾಯಿ ಅಪಮೌಲ್ಯಗೊಳ್ಳುತ್ತಿಲ್ಲ. ಅಮೆರಿಕ ಸರಕಾರವೂ ತನ್ನ ಕರೆನ್ಸಿಯಾದ ಡಾಲರ್‌ನ ಮೌಲ್ಯವನ್ನು ಇತ್ತೀಚೆಗೆ ಹೆಚ್ಚಿಸಿದ್ದರಿಂದಷ್ಟೇ ಅದರ ಎದುರು ರೂಪಾಯಿ ಮೌಲ್ಯ ತುಸುವೇ ಇಳಿಕೆಯಾಗಿದೆ. ಉಳಿದೆಲ್ಲಾ ದೇಶಗಳ ಕರೆನ್ಸಿ ಎದುರು ರೂಪಾಯಿ ಮೌಲ್ಯ ಸ್ಥಿರವಾಗಿಯೇ ಇದೆ. ಇದಕ್ಕೆ ಭಾರತ ದಲ್ಲಿನ ಮ್ಯಾಕ್ರೊಎಕನಾಮಿಕ್ಸ್ ಫಂಡಮೆಂಟಲ್(ವ್ಯಾಪಕ ತಳಹದಿಯ ಆರ್ಥಿಕತೆಯ ಮೂಲ ಅಂಶಗಳು) ಬಲಿಷ್ಠವಾಗಿರುವುದೇ ಕಾರಣವಾಗಿದೆ ಎಂದು ಕೇಂದ್ರ ವಿತ್ತ ಸಚಿವೆ ಪ್ರತಿಪಾದಿಸಿದ್ದಾರೆ.

- ನಿರುದ್ಯೋಗ ಅಂಕಿ ಅಂಶ, ಪೂರೈಕೆ-ಬೇಡಿಕೆ ನಡುವಿನ ಅಂತರ, ಆರ್ಥಿಕ ಪ್ರಗತಿ, ಹಣದುಬ್ಬ, ವಿತ್ತೀಯ ನೀತಿ, ಆಮದು-ರಫ್ತು ಒಳಗೊಂಡ ಅಂಶಗಳನ್ನು ಮ್ಯಾಕ್ರೊ ಎಕನಾಮಿಕ್ಸ್ ಫಂಡಮೆಂಟಲ್ಸ್ ಎನ್ನಲಾಗುತ್ತದೆ.

ಕೆನಡಾ, ಮೆಕ್ಸಿಕೊಗೆ ಶೇ.25, ಚೀನಾಗೆ ಶೇ.10 ಸುಂಕ: ಟ್ರಂಪ್

ಟ್ರಂಪ್, ಟ್ರುಡೊ, ಪಾರ್ದೊ ಸುಂಕ ಜಗಳ

ವಾಷಿಂಗ್ಟನ್: ಅಮೆರಿಕ, ಮೆಕ್ಸಿಕೊ, ಕೆನಡಾ ದೇಶಗಳ ನಡುವೆ ಈಗ ಆಮದು ಸುಂಕ ಸಂಘರ್ಷ ಶುರುವಾಗಿದೆ. ಮೂರೂ ದೇಶಗಳು ಪೈಪೋಟಿಗೆ ಬಿದ್ದಂತೆ ಪರಸ್ಪರರ ಮೇಲೆ ಶೇ.25ರಷ್ಟು ಆಮದು ಸುಂಕವನ್ನು ವಿಧಿಸುವ ಮೂಲಕ ವಿಶ್ವದ ಗಮನ ಸೆಳೆದಿವೆ.

- **ಪ್ರತಿಯಾಗಿ ಅಮೆರಿಕ ಸರಕಿಗೆ ಕೆನಡಾ, ಮೆಕ್ಸಿಕೊ ಶೇ.25 ಸುಂಕ**
- **ಅಂತಾರಾಷ್ಟ್ರೀಯ ವ್ಯಾಪಾರ ಸಂಘರ್ಷ, ಹಣದುಬ್ಬರ ಭೀತಿ**

ಮೆಕ್ಸಿಕೊ, ಕೆನಡಾ ಮತ್ತು ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಅಧಿಕ ಪ್ರಮಾಣದಲ್ಲಿ ಆಮದು ಸುಂಕ ವಿಧಿಸುವ ಆದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಆ ಮೂಲಕ ಚುನಾವಣಾ ಪೂರ್ವ ಅಮೆರಿಕದ ಮತದಾರರಿಗೆ ನೀಡಿದ್ದ ಭರವಸೆಗಳಲ್ಲಿ ಒಂದನ್ನು ಟ್ರಂಪ್ ಪೂರೈಸಿದಂತಾಗಿದೆ.

ಅಮೆರಿಕ ಜನರು, ಉದ್ಯಮಗಳನ್ನು ಸುರಕ್ಷತೆಗಾಗಿ ಆಮದು ಸುಂಕ ಏರಿಕೆ ಕ್ರಮ ಅಗತ್ಯವಾಗಿತ್ತು ಎಂದು ಟ್ರಂಪ್ 'ಎಕ್ಸ್' ಸಂದೇಶದಲ್ಲಿ ಸಮರ್ಥಿಸಿಕೊಂಡಿದ್ದಾರೆ. ಹೊಸ ಸುಂಕ ಕ್ರಮಗಳು ಮಂಗಳವಾರದಿಂದ ಜಾರಿಗೆ ಬರಲಿವೆ. ಆದರೆ, ಭಾರತದ ಮೇಲೆಯೂ ಆಮದು ಸುಂಕ ವಿಧಿಸುವುದಾಗಿ ಹೇಳುತ್ತಿದ್ದ ಟ್ರಂಪ್, ಈಗ ಆ ಮಾತು ಆಡುತ್ತಿಲ್ಲ ಎಂಬುದು ಗಮನಾರ್ಹ.

ಪ್ರತೀಕಾರ ಕ್ರಮವೆಂಬಂತೆ ಮೆಕ್ಸಿಕೊ ಅಧ್ಯಕ್ಷೆ ಕ್ಲಾಡಿಯಾ ಶೈನ್‌ಬಾಮ್ ಪಾರ್ದೊ, ಅಮೆರಿಕದ ಸರಕುಗಳ ಮೇಲೆ ಶೇ.25ರಷ್ಟು ಆಮದು ಸುಂಕ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಕೂಡಾ, ಅಮೆರಿಕದ ಸರಕುಗಳ ಮೇಲೆ ಕೆನಡಾ ಸರಕಾರವೂ ಶೇ.25ರಷ್ಟು ಆಮದು ಸುಂಕ ವಿಧಿಸಲಾಗಿದೆ ಎಂದು ಭಾನುವಾರ ಘೋಷಿಸಿದ್ದಾರೆ. ಈ ಮೂರೂ ದೇಶಗಳು ಪೈಪೋಟಿಗೆ ಬಿದ್ದಂತೆ ಕೈಗೊಂಡಿರುವ ತೆರಿಗೆ ಏರಿಕೆ ನಿರ್ಧಾರದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಣದುಬ್ಬರ ಹೆಚ್ಚಿಸುವ ಸಾಧ್ಯತೆ ಇದೆ. ಅಲ್ಲದೇ ಮೂರೂ ದೇಶಗಳ ನಡುವಿನ ದಶಕಗಳಷ್ಟು ಹಳೆಯ ವ್ಯಾಪಾರ ವಹಿವಾಟು ಸಂಬಂಧ ಹದಗೆಡಲಿದೆ ಎಂಬ ವಿಶ್ಲೇಷಣೆಗಳು ಹೊರಬಿದ್ದಿವೆ.

ಮೆಕ್ಸಿಕೊ ಮತ್ತು ಕೆನಡಾದಿಂದ ಆಮದಾಗುವ ಸರಕುಗಳಿಗೆ ಶೇ.25, ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಶೇ.10ರಷ್ಟು ಆಮದು ಸುಂಕ ವಿಧಿಸಿ ಟ್ರಂಪ್ ಆಡಳಿತ ಕ್ರಮ ಕೈಗೊಂಡಿದೆ. ಆದರೆ ಕೆನಡಾದಿಂದ ಆಮದು ಮಾಡಿಕೊಳ್ಳುವ ತೈಲ, ನೈಸರ್ಗಿಕ ಅನಿಲ ಮತ್ತು ವಿದ್ಯುತ್ ಮೇಲಿನ ಆಮದು ಸುಂಕವನ್ನು ಶೇ.10ರಲ್ಲಿಯೇ ಉಳಿಸಲಾಗಿದೆ.

ದೆಹಲಿ ಚುನಾವಣೆ ಪ್ರಚಾರ ವೇಳೆ ಕೇಜ್ರಿವಾಲ್ ಅಣಕ

ಎಎಪಿ ಗೆಲುವು ಸುಳಿವು-ಶಾಗೆ ನೋವು

ದೆಹಲಿ: ಈ ಬಾರಿಯ ದೆಹಲಿ ಚುನಾವಣೆಯಲ್ಲಿಯೂ ಆಮ್ ಆದ್ಮಿ ಪಕ್ಷವೇ ಹ್ಯಾಟ್ರಿಕ್ ಗೆಲುವು ಸಾಧಿಸಲಿದೆ ಎಂಬ ಸುಳಿವು ಸಿಕ್ಕಿರುವುದರಿಂದ ಬಿಜೆಪಿ ನಾಯಕರು ಹತಾಶರಾಗಿದ್ದಾರೆ. ವಿಶೇಷವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಂಗೆಟ್ಟಿದ್ದಾರೆ ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅಣಕವಾಡಿದ್ದಾರೆ.

ದೆಹಲಿಯಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಕೇಜ್ರಿವಾಲ್, ಎಎಪಿಯಿಂದ ಗೆಲುವು ಕಸಿಯಲು ಬಿಜೆಪಿ ಗೂಂಡಾಗಿರಿ ಶುರುವಿಟ್ಟಿದೆ. ಎಎಪಿ ಸ್ವಯಂಸೇವಕರು, ಬೆಂಬಲಿಗರ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸುತ್ತಿದ್ದಾರೆ. ಎಎಪಿ ನಾಯಕರಿಗೆ ಬಿಜೆಪಿ ಸೇರುವಂತೆ ಒತ್ತಾಯಿಸಲಾಗುತ್ತಿದೆ. ಇಲ್ಲವಾದರೆ ಬಂಧನಕ್ಕೊಳಗಾಗಬೇಕಾಗುತ್ತದೆ, ದಾಳಿಗೆ ತುತ್ತಾಗಬೇಕಾಗುತ್ತದೆ ಎಂದು ಬಿಜೆಪಿ ಹೆದರಿಸುತ್ತಿದೆ. ಇಂಥ ಬೆದರಿಕೆ ತಂತ್ರಗಳನ್ನು ದೆಹಲಿ ಜನತೆ ಸಹಿಸುವುದಿಲ್ಲ ಎಂದಿದ್ದಾರೆ. ಬಿಜೆಪಿಗೆ ಸಿಎಂ ಅಭ್ಯರ್ಥಿಯನ್ನೇ ಘೋಷಿಸಲಾಗಿಲ್ಲ, ಅಭಿವೃದ್ಧಿ ಅಜೆಂಡಾ ಕೂಡಾ ಇಲ್ಲ. ದೆಹಲಿ ಬಗ್ಗೆ ದೂರದೃಷ್ಟಿಯೂ ಇಲ್ಲ. ಅವರಲ್ಲಿರುವುದು ಕೇವಲ ಗೂಂಡಾಗಿರಿ ಎಂದು ಟೀಕಿಸಿದ ಕೇಜ್ರಿವಾಲ್, 'ಅಮಿತ್ ಶಾಕಿಗೂಂಡಾಗರ್ದಿ' ಹ್ಯಾಶ್‌ಟ್ಯಾಗ್ ಮೂಲಕ ಸಾಮಾಜಿಕ ಮಾಧ್ಯಮ ಅಭಿಯಾನ ಆರಂಭಿಸುವುದಾಗಿ ಹೇಳಿದರು. ಹ್ಯಾಶ್‌ಟ್ಯಾಗ್ ಬಳಸಿ ಬಿಜೆಪಿಯ ದಾಳಿ, ಬೆದರಿಕೆ ಕೃತ್ಯವನ್ನು ಹಂಚಿಕೊಳ್ಳಿ ಎಂದು ಜನತೆಗೆ ಕರೆ ನೀಡಿದರು.

ಸ್ವತಂತ್ರ ವೀಕ್ಷಕರಿಗಾಗಿ ಎಎಪಿ ಮನವಿ

ಚುನಾವಣಾ ಆಯೋಗದ ಕಾರ್ಯ ವೈಖರಿ ಬಗ್ಗೆ 'ಎಎಪಿ' ಸರಕಾರ ಭಾನುವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವ ಅರವಿಂದ ಕೇಜ್ರಿವಾಲ್, ಚುನಾವಣೆ ಉಸ್ತುವಾರಿಗೆ ಸ್ವತಂತ್ರ ವೀಕ್ಷಕರ ನಿಯೋಜನೆ ಮಾಡಬೇಕು. ಎಎಪಿ ಕಾರ್ಯಕರ್ತರ ಮೇಲಿನ ದಾಳಿ ತಡೆಯದ ಪೊಲೀಸರನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಅಲ್ಲದೇ, 'ನವದೆಹಲಿ ವಿಧಾನಸಭಾ ಕ್ಷೇತ್ರ'ದಿಂದ ಸ್ಪರ್ಧೆ ಮಾಡಿರುವ ಅರವಿಂದ ಕೇಜ್ರಿವಾಲ್, ಕ್ಷೇತ್ರದಲ್ಲಿನ ಮತದಾರರ ಪಟ್ಟಿಯನ್ನು ಬಿಜೆಪಿ ದುರ್ಬಳಕೆ ಮಾಡಿಕೊಂಡಿದೆ ಎಂದು ದೂರಿದ್ದಾರೆ.

ದೆಹಲಿ ಚುನಾವಣೆ ಇನ್ನು ಎರಡೇ ದಿನ

ದೆಹಲಿ ವಿಧಾನಸಭಾ ಚುನಾವಣೆಗೆ ಇನ್ನೆರಡು ದಿನವಷ್ಟೇ ಬಾಕಿ ಇದೆ. ಫೆ.5ರಂದು ಬೆಳಗ್ಗೆ 7ಕ್ಕೆ ಮತದಾನ ಆರಂಭಗೊಳ್ಳಲಿದೆ. ಫೆ.8ರಂದು ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ. ಈ ಮಧ್ಯೆ, ಬಿಜೆಪಿ, ಎಎಪಿ, ಕಾಂಗ್ರೆಸ್ ಚುನಾವಣಾ ಪ್ರಚಾರ, ಪರಸ್ಪರ ವಾಗ್ದಾಳಿ, ಆರೋಪ-ಪ್ರತ್ಯಾರೋಪ ಜೋರಾಗಿ ನಡೆದಿದೆ. ಎಎಪಿ ಹ್ಯಾಟ್ರಿಕ್ ಗೆಲುವಿಗೆ ಯತ್ನಿಸುತ್ತಿದ್ದರೆ, 25 ವರ್ಷಗಳ ನಂತರವಾದರೂ ದೆಹಲಿ ವಿಧಾನಸಭೆಯಲ್ಲಿ ಅಧಿಕಾರ ಚಲಾಯಿಸಬೇಕು ಎಂದು ಬಿಜೆಪಿ ಇನ್ನಿಲ್ಲದ ಕಸರತ್ತ ನಡೆಸಿದೆ.

ರಾಷ್ಟ್ರಪತಿ ಟೀಕೆ: ಸೋನಿಯಾ ವಿರುದ್ಧ ಕೋರ್ಟ್‌ಗೆ ಅರ್ಜಿ

ಪಟನಾ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ವಿರುದ್ಧ ಆಕ್ಷೇಪಾರ್ಹ (ಬಡಪಾಯಿ ಮಹಿಳೆ) ಪದ ಬಳಸಿದ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ ವಿರುದ್ಧ ಬಿಹಾರದ ಮುಜಾಫರ್‌ಪುರ ನ್ಯಾಯಾಲಯದಲ್ಲಿ ದೂರು ಸಲ್ಲಿಸಲಾಗಿದೆ. ಅರ್ಜಿ ಸ್ವೀಕರಿಸಿರುವ ಮುಜಾಫರ್‌ಪುರ ಸ್ಥಳೀಯ ನ್ಯಾಯಾಲಯ, ಫೆ.10ರಂದು ಅರ್ಜಿ ವಿಚಾರಣೆ ನಡೆಸುವುದಾಗಿ ಹೇಳಿದೆ.

ಗೌರವಾನ್ವಿತ ರಾಷ್ಟ್ರಪತಿ ವಿರುದ್ಧ ಅಪಮಾನಕರ ಹೇಳಿಕೆ ನೀಡಿರುವ ಸೋನಿಯಾ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ನಿರ್ದೇಶನ ನೀಡಬೇಕು ಎಂದು ವಕೀಲ ಸುಧೀರ್ ಓಜಾ ಎಂಬವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ವಯನಾಡು ಕ್ಷೇತ್ರದ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರಾ ಅವರನ್ನೂ ಸಹ ಆರೋಪಿಗಳಾಗಿಸಬೇಕೆಂದು ಅರ್ಜಿದಾರರು ಕೋರಿದ್ದಾರೆ. ಮೂವರ ವಿರುದ್ಧವೂ ಕಾನೂನು ಕ್ರಮಕ್ಕೆ ಒತ್ತಾಯಿಸಿದ್ದಾರೆ. ದೇಶದ ಅತ್ಯಂತ ಗೌರವಾನ್ವಿತ ಹುದ್ದೆಯಲ್ಲಿ ಇರುವ ಮಹಿಳೆಗೆ ಅವಮಾನಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ಸಂಬಂಧಿತ ಸೆಕ್ಷನ್‌ಗಳಡಿ ಅಪರಾಧ ಪ್ರಕರಣ ದಾಖಲಿಸಲು ಪೊಲೀಸರಿಗೆ ಆದೇಶಿಸಬೇಕು ಎಂದು ಓಜಾ ಸುದ್ದಿಗಾರರ ಬಳಿ ಪ್ರತಿಕ್ರಿಯಿಸಿದ್ದಾರೆ.

ನಡೆದಿದ್ದೇನು?: ಜ.31ರಂದು ಸಂಸತ್ತಿನ ಬಜೆಟ್ ಅಧಿವೇಶನ ಆರಂಭಗೊಂಡಾಗ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಂಟಿ ಸದನ ಉದ್ದೇಶಿಸಿ ದೀರ್ಘ ಭಾಷಣ ಮಾಡಿದ್ದರು. ಬಳಿಕ ಸೋನಿಯಾ ಗಾಂಧಿ, 'ಬಡಪಾಯಿ ಮಹಿಳೆ. ಭಾಷಣ ಮುಗಿಸುವ ಹೊತ್ತಿಗೆ ಸುಸ್ತಾಗಿ ಹೋಗಿದ್ದರು. ಅವರಿಗೆ ಮಾತನಾಡಲು ಕಷ್ಟ ಆಗುತ್ತಿತ್ತು. ಅಲ್ಲದೇ, ಅವರ ಭಾಷಣ ಬೇಸರ ತರಿಸಿತು' ಎಂದು ಮಾಧ್ಯಮದವರ ಬಳಿ ಪ್ರತಿಕ್ರಿಯಿಸಿದ್ದರು.

ದಲಿತ ಯುವತಿ ಹತ್ಯಾಚಾರ

ಫೈಜಾಬಾದ್: ಉತ್ತರ ಪ್ರದೇಶದ ಅಯೋಧ್ಯೆಯ ಕಾಲುವೆಯೊಂದರಲ್ಲಿ 22 ವರ್ಷದ ದಲಿತ ಯುವತಿಯ ನಗ್ನ ದೇಹ, ಕಣ್ಣುಗುಡ್ಡೆಗಳನ್ನು ಕಿತ್ತಿರುವ, ಕೈಕಾಲು ಕಟ್ಟಿದ, ಕೆಲ ಮೂಳೆಗಳು ಮುರಿದಿರುವ ಸ್ಥಿತಿಯಲ್ಲಿ ಭಾನುವಾರ ಪತ್ತೆಯಾಗಿದೆ. ಘಟನೆ ಇಡೀ ರಾಜ್ಯವನ್ನು ಬೆಚ್ಚಿ ಬೀಳಿಸಿದೆ.

ದುಷ್ಕರ್ಮಿಗಳ ತಂಡ ಯುವತಿಯ ಕೈಕಾಲು ಕಟ್ಟಿ ಸಾಮೂಹಿಕ ಅತ್ಯಾಚಾರ ನಡೆಸಿ ಬಳಿಕ ವಿಪರೀತವಾಗಿ ಥಳಿಸಿ ಬರ್ಬರವಾಗಿ ಕೊಲೆ ಮಾಡಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಯುವತಿ ಗುರುವಾರ ರಾತ್ರಿ ಭಗವದ್ ಕಥಾ ಧಾರ್ಮಿಕ ಕಾರ್ಯಕ್ರಮಕ್ಕೆ ಹೋಗಿದ್ದಳು. ಶುಕ್ರವಾರ ಬೆಳಕಾದರೂ ಮನೆಗೆ ಬಂದಿರಲಿಲ್ಲ. ಆತಂಕಗೊಂಡ ಪೋಷಕರು ಪೊಲೀಸರಿಗೆ ದೂರು ನೀಡಲೆತ್ನಿಸಿದರು. ದೂರು ಸ್ವೀಕರಿದ ಪೊಲೀಸರು, ನಿಮ್ಮ ಮಗಳನ್ನು ನೀವೇ ಹುಡುಕಿಕೊಳ್ಳಿ ಎಂದು ಹೇಳಿದ್ದಾಗಿ ಕುಟುಂಬ ಸದಸ್ಯರು ಕಿಡಿಕಾರಿದ್ದಾರೆ. ಯುವತಿಯ ಮೃತದೇಹ ಅಯೋಧ್ಯೆ ಸಮೀಪದ ಕಾಲುವೆಯಲ್ಲಿ ಅತ್ಯಂತ ಘೋರ ಸ್ಥಿತಿಯಲ್ಲಿ ಪತ್ತೆಯಾಗಿದೆ. ಬಳಿಕ ಪ್ರಕರಣ ದಾಖಲಿಸಿದ ಪೊಲೀಸರು, ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಮುಂದಿನ ಕ್ರಮ ನಿರ್ಧರಿಸಲಾಗುವುದು ಎಂದು ಹೇಳಿದ್ದಾರೆ.

ರಾಜೀನಾಮೆ ಬೆದರಿಕೆ

ಫೈಜಾಬಾದ್ ಸಂಸದ ಅವಧೇಶ್ ಪ್ರಸಾದ್ ಭಾನುವಾರ ಸುದ್ದಿಗೋಷ್ಠಿ ನಡೆಸಿ, ಅಯೋಧ್ಯೆ ಬಳಿ ಹತ್ಯಾಚಾರಕ್ಕೆ ಒಳಗಾದ ದಲಿತ ಯುವತಿಯ ಕುಟುಂಬಕ್ಕೆ ನ್ಯಾಯ ಸಿಗದೇ ಇದ್ದರೆ ಲೋಕಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡುವೆ. ಲೋಕಸಭೆಯಲ್ಲಿ ಪ್ರಧಾನಿ ಮೋದಿ ಮುಂದೆಯೇ ವಿಷಯ ಪ್ರಸ್ತಾಪಿಸುವೆ. ಹೆಣ್ಣುಮಕ್ಕಳನ್ನು ಉಳಿಸುವಲ್ಲಿ ವಿಫಲರಾಗಿದ್ದೇವೆ ಎಂದಿದ್ದಾರೆ. ರಾಮ, ಸೀತಾ ಎಲ್ಲಿದ್ದೀರಿ ನೀವು? ಎಂದೂ ಸಂಸದ ಪ್ರಶ್ನಿಸಿದ್ದಾರೆ.

ಮಾಲ್ಡೀವ್ಸ್‌ಗೆ ಅನುದಾನ ಹೆಚ್ಚಳ, ಬಾಂಗ್ಲಾದೇಶಕ್ಕೂ ಆರ್ಥಿಕ ನೆರವು

ದೆಹಲಿ: 'ವಸುಧೈವ ಕುಟುಂಬಕಂ' ಮಂತ್ರ ಜಪಿಸುತ್ತಲೇ ವಿಶ್ವಗುರುವಾಗುವ ಕನಸು ಕಾಣುತ್ತಿರುವ ಭಾರತ, ನೆರೆಹೊರೆಯವರು ಶತ್ರುಗಳೇ ಆಗಿದ್ದರೂ, ಜಗಳಗಂಟರೇ ಆಗಿದ್ದರೂ ಅವರೊಂದಿಗೆ ಸ್ನೇಹಸಂಬಂಧ ಮುಂದುವರಿಸುವ ಇರಾದೆ ಹೊಂದಿದೆ. 'ನೆರೆಹೊರೆಯವರಿಗೆ ಆದ್ಯತೆ' ಎಂಬ ನೀತಿ ಪಾಲಿಸುವ ಭಾರತ, ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ನೆರೆದೇಶಗಳು ಮತ್ತು ದೂರದ ಮಿತ್ರ ದೇಶಗಳಿಗೆ ಪ್ರತಿ ವರ್ಷದಂತೆ ಈವರ್ಷವೂ ಅನುದಾನ ನೀಡುತ್ತಿದೆ.

ಹಿಂದೂಗಳ ಮೇಲೆ ದಾಳಿ ನಡೆಸುತ್ತಲೇ, ಭಾರತಕ್ಕೆ ತಲೆಬೇನೆ ತಂದಿರುವ ಬಾಂಗ್ಲಾದೇಶಕ್ಕೂ ಅನುದಾನ ನೀಡುವುದನ್ನು ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರ ಮುಂದುವರಿಸುವ ಮೂಲಕ ಜನರಲ್ಲಿ ಅಚ್ಚರಿ ಆಘಾತಕ್ಕೆ ಕಾರಣವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಲಕ್ಷದ್ವೀಪ ಪ್ರವಾಸವನ್ನು ಅಣಕಿಸುವ ಮೂಲಕ ಭಾರತದೊಂದಿಗಿನ ಸಂಬಂಧ ಹಾಳು ಮಾಡಿಕೊಂಡಿದ್ದ ದ್ವೀಪರಾಷ್ಟ್ರ ಮಾಲ್ಡೀವ್ಸ್‌ಗೆ ಭಾರತ ಮತ್ತೂ ಹೆಚ್ಚಿನ ಪ್ರಮಾಣದ ನೆರವು ಘೋಷಿಸಿದೆ.

ಭಾರತದಿಂದ ನೆರವು ಪಡೆಯುವ ನೆರೆದೇಶಗಳ ಪಟ್ಟಿಯಲ್ಲಿ ಭೂತಾನ್ ಮೊದಲ ಸ್ಥಾನದಲ್ಲಿದೆ. ಈ ಬಾರಿಯ ಬಜೆಟ್‌ನಲ್ಲಿ ಭೂತಾನ್‌ಗೆ 2,150 ಕೋಟಿ ರು.ಅನುದಾನ ಮೀಸಲಿಡಲಾಗಿದೆ. ಕಳೆದ ವರ್ಷಕ್ಕೆ(2543 ಕೋಟಿ ರು.) ಹೋಲಿಸಿದರೆ ಈ ಬಾರಿ ನೆರವಿನ ಮೊತ್ತ ಕಡಿಮೆಯಾಗಿದೆ.

ಅಚ್ಚರಿ ಎಂದರೆ ಚೀನಾ ಪರ ವಾಲಿರುವ ಮಾಲ್ಡೀವ್ಸ್‌ಗೆ ಆರ್ಥಿಕ ನೆರವು 470 ಕೋಟಿ ರು.ಗಳಿಂದ 600 ಕೋಟಿ ರು.ಗೆ ಹೆಚ್ಚಳವಾಗಿದೆ. ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ನಿರಂತರ ದಾಳಿ, ದೌರ್ಜನ್ಯ ನಡೆಸುತ್ತಿರುವ ಬಾಂಗ್ಲಾದೇಶಕ್ಕೆ 120 ಕೋಟಿ ರು. ಘೋಷಣೆಯಾಗಿದೆ.

ಅಫ್ಘಾನಿಸ್ತಾನ್‌ಗೆ ನೀಡುತ್ತಿದ್ದ ಅನುದಾನವಂತೂ ದುಪ್ಪಟ್ಟಾಗಿದೆ. 50 ಕೋಟಿ ರು. ಇದ್ದುದು, ಈ ಬಾರಿ 100 ಕೋಟಿ ರು.ಗೆ ಏರಿಕೆಯಾಗಿದೆ. ಮ್ಯಾನ್ಮಾರ್‌ಗೆ ನೀಡುವ ನೆರವು 400 ಕೋಟಿ ರು.ಗಳಿಂದ 350 ಕೋಟಿ ರು.ಗೆ ತಗ್ಗಿದೆ. ನೇಪಾಳಕ್ಕೆ 700 ಕೋಟಿ ರು., ಶ್ರೀಲಂಕಾಗೆ 300 ಕೋಟಿ ರು.,ಇರಾನ್‌ನಲ್ಲಿ ಚಬಹಾರ್ ಬಂದರಿಗೆ ಈ ವರ್ಷವೂ 100 ಕೋಟಿ ರು. ಅನುದಾನ ಮೀಸಲಿಡಲಾಗಿದೆ.

ಬ್ರಿಟನ್ ಮಾಜಿ ಪ್ರಧಾನಿ ರಿಷಿ ಮುಂಬೈನಲ್ಲಿ ಕ್ರಿಕೆಟ್

ಮುಂಬೈ: ಯುನೈಟೆಡ್ ಕಿಂಗ್ಡಂ(ಯುಕೆ) ಮಾಜಿ ಪ್ರಧಾನಿ ರಿಷಿ ಸುನಕ್ ಭಾನುವಾರ ಮುಂಬೈ ಪ್ರವಾಸ ವೇಳೆ, ದಕ್ಷಿಣ ಮುಂಬೈನ ಪಾರ್ಸಿ ಜಿಮ್ಖಾನಾಗೆ ಭೇಟಿ ನೀಡಿ, ಟೆನಿಸ್ ಬಾಲ್ ಕ್ರಿಕೆಟ್ ಆಡಿ ಆನಂದಿಸಿದ್ದಾರೆ. ಈ ವಿಚಾರವನ್ನು ಫೋಟೊ ಸಮೇತ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಸುನಕ್, ಟೆನಿಸ್ ಬಾಲ್ ಕ್ರಿಕೆಟ್ ಆಟವಿಲ್ಲದೆ ಮುಂಬೈನ ಯಾವುದೇ ಪ್ರವಾಸ ಪೂರ್ಣ ಆಗುವುದಿಲ್ಲ ಎಂದಿದ್ದಾರೆ. ಪಾರ್ಸಿ ಜಿಮ್ಖಾನಾ ಕ್ಲಬ್ ವಾರ್ಷಿಕೋತ್ಸವದಲ್ಲಿ ನಿಮ್ಮೆಲ್ಲರ ಜತೆಗಿರಲು ಸಂತಸವಾಗುತ್ತಿದೆ. ಮತ್ತೊಮ್ಮೆ ಭೇಟಿ ನೀಡಲು ಇಚ್ಛಿಸುವೆ ಎಂದು ಪ್ರತಿಕ್ರಿಯಿಸಿದ್ದಾರೆ. ಐಕಾನಿಕ್ ಪಾರ್ಸಿ ಜಿಮ್ಖಾನಾ 1885ರ ಫೆಬ್ರವರಿ 25ರಂದು ಸರ್ ಜಮ್‌ಷೆಡ್‌ಜಿ ಜೆಜೀಭೋಯ್ ಸ್ಥಾಪಿತವಾಗಿದ್ದು, ಅವರೇ ಮೊದಲ ಅಧ್ಯಕ್ಷರಾಗಿದ್ದರು. 1887ರಲ್ಲಿ ಜಿಮ್ಖಾನಾವನ್ನು ಜನಪ್ರಿಯ ಮರೈನ್ ಡ್ರೈವ್ ಪ್ರದೇಶಕ್ಕೆ ಸ್ಥಳಾಂತರಿಸಲಾಯಿತು.

5ರಿಂದ ದೆಹಲಿಯಲ್ಲಿ ಹೊಸ ವಸಂತ: ಮೋದಿ

ದೆಹಲಿ: ದೆಹಲಿ ವಿಧಾನಸಭಾ ಚುನಾವಣೆ ಪ್ರಚಾರ ಮುಂದುವರಿಸಿರುವ ಪ್ರಧಾನಿ ನರೇಂದ್ರ ಮೋದಿ ಭಾನುವಾರ ದೆಹಲಿಯ ಆರ್‌ಕೆ ಪುರಂನಲ್ಲಿ ರ‍್ಯಾಲಿ ನಡೆಸಿ, ಫೆ.5ರಂದು ದೆಹಲಿಯಲ್ಲಿ ಅಭಿವೃದ್ಧಿಯ ಹೊಸ ವಸಂತ ಬರಲಿದೆ. ಈ ಬಾರಿ ದೆಹಲಿಯಲ್ಲಿ ಬಿಜೆಪಿ ಸರ್ಕಾರ ರಚನೆಯಾಗಲಿದೆ. ವಸಂತ ಪಂಚಮಿಯಿಂದ ದೆಹಲಿಯಲ್ಲಿ ಹವಾಮಾನ ಬದಲಾಗಲಿದೆ ಎಂದು ಮೋದಿ ಭವಿಷ್ಯ ನುಡಿದರು.

ದೇಶದ ಆರ್ಥಿಕ ಶಕ್ತಿ ಹೆಚ್ಚುತ್ತಿದೆ. ದೆಹಲಿ ಜನರ ಸಮಸ್ಯೆಗಳನ್ನು ಪರಿಹರಿಸುವ ವಿಚಾರದಲ್ಲಿ ನಾನೇ ಗ್ಯಾರಂಟಿ ಕೊಡುವೆ. ಮತದಾರರು ಡಬಲ್ ಎಂಜಿನ್ ಸರಕಾರ ರಚನೆಗೆ ಮುಂದಾಗಬೇಕಿದೆ ಎಂದರು. ದೆಹಲಿಯ ಅಭಿವೃದ್ಧಿಗೆ ನಿಮ್ಮ ಮತಶಕ್ತಿಯನ್ನು ಹೂಡಿಕೆ ಮಾಡಬೇಕಿದೆ ಎಂದು ಕರೆ ನೀಡಿದರು. ಈ ಬಾರಿಯ ಬಜೆಟ್‌ನಿಂದ ದೆಹಲಿ ಕೇಂದ್ರಾಡಳಿತ ಪ್ರದೇಶದ ಹಿರಿಯ ನಾಗರಿಕರಿಗೂ ಅನುಕೂಲವಾಗಲಿದೆ. ನಿವೃತ್ತ ನೌಕರರ ತೆರಿಗೆ ಕಡಿತವಾಗಿದೆ. ಜತೆಗೆ ಪಿಂಚಣಿ ಹೆಚ್ಚಲಿದೆ. ಬಿಜೆಪಿ ಆಡಳಿತ ಹಿರಿಯ ನಾಗರಿಕರಿಗೆ ವರದಾನವಾಗಲಿದೆ ಎಂದು ಭರವಸೆ ನೀಡಿದರು. ಮಧ್ಯಮ ವರ್ಗದವರನ್ನು ಗೌರವಿಸುವ, ಪ್ರಾಮಾಣಿಕ ತೆರಿಗೆದಾರರಿಗೆ ಬಹುಮಾನ ನೀಡುವುದಿದ್ದರೆ ಅದು ಬಿಜೆಪಿ ಮಾತ್ರ, ಎಂದರು.

ಅನುದಾನ ಬೇಕೆಂದರೆ ಹಿಂದುಳಿದ ರಾಜ್ಯವೆನ್ನಿ

ತಿರುವನಂತಪುರಂ: ಕೇಂದ್ರ ಬಜೆಟ್‌ನಲ್ಲಿ ಕೇರಳ ರಾಜ್ಯವನ್ನು ಕಡೆಗಣಿಸಲಾಗಿದೆ ಎಂಬ ಪ್ರತಿಪಕ್ಷಗಳ ಆರೋಪ ಮಾಡುತ್ತಿದ್ದರೆ, ಕೇರಳದವರೇ ಆದ ಕೇಂದ್ರ ಸಚಿವ ಜಾರ್ಜ್ ಕುರಿಯನ್, ಕೇಂದ್ರದಿಂದ ಹೆಚ್ಚಿನ ಅನುದಾನ ಬೇಕಿದ್ದರೆ ಹಿಂದುಳಿದ ರಾಜ್ಯ ಎಂದು ಘೋಷಿಸಿಕೊಳ್ಳಿ ಎಂದು ಸಲಹೆ ನೀಡಿದ್ದಾರೆ. ಸಚಿವರ ಈ ಹೇಳಿಕೆ ಪರ ವಿರೋಧ ಚರ್ಚೆಗೆ ಕಾರಣವಾಗಿದೆ. ಅಭಿವೃದ್ಧಿ ಸೂಚ್ಯಂಕಗಳಲ್ಲಿ ಹಿಂದೆಬಿದ್ದಿರುವ ರಾಜ್ಯಗಳಿಗೆ ಕೇಂದ್ರ ಆರ್ಥಿಕ ಪ್ಯಾಕೇಜ್ ಘೋಷಿಸುತ್ತದೆ. ಶಿಕ್ಷಣ, ಮೂಲಸೌಕರ್ಯ ಮತ್ತು ಸಾಮಾಜಿಕ ವಿಷಯದಲ್ಲಿ ಇತರ ರಾಜ್ಯಗಳಿಗಿಂತ ಕೇರಳ ಹಿಂದಿದೆ. ರಾಜ್ಯ ಹಿಂದುಳಿದಿದೆ ಎಂದು ಘೋಷಿಸುವಿರಾ? ಆಗ ಹಣಕಾಸು ಆಯೋಗ ಪರಿಶೀಲಿಸಿ ಕೇಂದ್ರಕ್ಕೆ ವರದಿ ನೀಡುತ್ತದೆ ಎಂದು ಕುರಿಯನ್ ರಾಜ್ಯ ಸರಕಾರದ ಗಮನ ಸೆಳೆದಿದ್ದಾರೆ.

ಸಚಿವ ಕುರಿಯನ್ ಹೇಳಿಕೆ ಕೇರಳ ವಿರೋಧಿ ನಿಲುವು ಬಿಂಬಿಸುತ್ತದೆ ಎಂದು ಟೀಕಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಭೂಕುಸಿತದಿಂದ 400ಕ್ಕೂ ಹೆಚ್ಚು ಜನರು ಬಲಿಯಾದ ವಯನಾಡ್ ಜಿಲ್ಲೆ ಗ್ರಾಮಗಳನ್ನು ಪುನರ್ ನಿರ್ಮಿಸಲು ಬೇಕಾದ ಹಣಕ್ಕಾಗಿ ರಾಜ್ಯ ಸರಕಾರ ಸಲ್ಲಿಸಿದ ಮನವಿಯನ್ನು ಕೇಂದ್ರ ಪರಿಗಣಿಸಲೇ ಇಲ್ಲ ಎಂದು ಟೀಕಿಸಿದರು.

ಪತಿಯ ಕಿಡ್ನಿ ಮಾರಿಸಿ ಲವರ್ ಜತೆ ಪರಾರಿ!

ಕೋಲ್ಕತ್ತ: ಮಗಳ ವಿದ್ಯಾಭ್ಯಾಸಕ್ಕೆ ಹಣ ಸಾಲುತ್ತಿಲ್ಲ ಎಂದು ನಂಬಿಸಿ ಪತಿಯ ಕಿಡ್ನಿ ಮಾರಿಸಿ 10 ಲಕ್ಷ ರು. ಪಡೆದುಕೊಂಡ ಪಶ್ಚಿಮ ಬಂಗಾಳದ ಚಾಲಾಕಿ ಪತ್ನಿಯೊಬ್ಬಳು, ಹಣ ಕೈ ಸೇರುತ್ತಲೇ ಫೇಸ್‌ಬುಕ್ ಗೆಳೆಯನ ಜತೆ ಪರಾರಿಯಾಗಿದ್ದಾಳೆ. ಹೌರಾ ಜಿಲ್ಲೆಯ ಚಾನ್‌ಕ್ರಿಲ್‌ನಲ್ಲಿ ಘಟನೆ ನಡೆದಿದೆ. ಕಿಡ್ನಿಯೂ ಇಲ್ಲ, ಅದನ್ನು ಮಾರಿದ್ದಕ್ಕೆ ಸಿಕ್ಕ ಹಣವೂ ಇಲ್ಲ, ಕಡೆಗೆ ಪತ್ನಿಯೂ ಜತೆಗಿಲ್ಲ ಎಂದು ನೊಂದ ಪತಿರಾಯ ಆಘಾತಕ್ಕೆ ಒಳಗಾಗಿದ್ದಾನೆ. ಪೇಂಟರ್ ಕೆಲಸ ಮಾಡಿಕೊಂಡಿದ್ದ ಆತ, ಶಸ್ತ್ರಚಿಕಿತ್ಸೆ ಬಳಿಕ ಕೆಲಸಕ್ಕೂ ಹೋಗಲಾಗದೇ ಪರಿತಪಿಸುತ್ತಿದ್ದಾನೆ. ರವಿದಾಸ್ ಎಂಬವನ ಜತೆ ಪತ್ನಿ ಬಾರೇಕ್‌ಪುರದಲ್ಲಿ ವಾಸಿಸುತ್ತಿದ್ದುದನ್ನು ಇತ್ತೀಚೆಗೆ ತಿಳಿದ ಪತಿ, ಕುಟುಂಬದವರ ಜತೆ ಹೋಗಿ ಹಣವನ್ನಾದರೂ ವಾಪಸ್ ಕೊಡು ಎಂದು ಕೇಳಿದ್ದಾನೆ. ಆದರೆ ಆಕೆ, ನಿನಗೆ ವಿಚ್ಛೇದನ ಕೊಡುವೆ ಎಂದು ಗಂಡನನ್ನೇ ಥಳಿಸಿ ಕಳುಹಿಸಿದ್ದಾಳೆ. ಪತ್ನಿಯ ವರ್ತನೆ ಕಂಡು ಆಘಾತಗೊಂಡ ಪತಿರಾಯ ನ್ಯಾಯ ಕೋರಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾನೆ.

ಸಮಾಚಾರ ಸಣ್ಣದಲ್ಲ

ವಿಷ ಸೇವಿಸಿ ವ್ಯಕ್ತಿ ಆತ್ಮಹತ್ಯೆ

ಸುಳ್ಯ: ವಿಷ ಸೇವಿಸಿ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಸುಳ್ಯದಲ್ಲಿ ನಡೆದಿದೆ. ಮಂಡೆಕೋಲು ಗ್ರಾಮದ ಪೇರಾಲು ಅಂಬ್ರೋಟಿ ನಿವಾಸಿ ಹರೀಶ್ (39) ಮೃತರು. ಹರೀಶ್ ವಿಪರೀತ ಮದ್ಯ ಸೇವನೆ ಚಟವುಳ್ಳವರಾಗಿದ್ದು, ಕಾಯರ್ತೋಡಿಯ ವ್ಯಕ್ತಿಯೊಬ್ಬರ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಜ.30ರಂದು ಕೆಲಸ ಮಾಡುತ್ತಿದ್ದ ಕಾಯರ್ತೋಡಿಯ ಮನೆಯಲ್ಲಿ ವಿಷ ಸೇವನೆ ಮಾಡಿ ಅಸೌಖ್ಯಗೊಂಡಿದ್ದು, ಅವರನ್ನು ಸುಳ್ಯದ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಅಲ್ಲಿ ಅವರು ಫೆ.31ರಂದು ಚಿಕಿತ್ಸೆ ಫಲಿಸದೇ ಮೃತರಾಗಿದ್ದಾರೆ. ಈ ಬಗ್ಗೆ ಸುಳ್ಯ ಠಾಣೆಯಲ್ಲಿ ಅಸ್ವಾಭಾವಿಕ ಮರಣ ಪ್ರಕರಣ ದಾಖಲಾಗಿದೆ.

ಡಾ.ಸಚ್ಚಿದಾನಂದ ರೈ ಅಧ್ಯಕ್ಷರಾಗಿ ಆಯ್ಕೆ

ಮಂಗಳೂರು: ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್‌ನ 2025-26ನೇ ಸಾಲಿನ ನಿಯೋಜಿತ ಅಧ್ಯಕ್ಷರಾಗಿ ಮಂಗಳೂರಿನ ಡಾ.ಬಿ.ಸಚ್ಚಿದಾನಂದ ರೈ

ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ಫೆ.2 ರಂದು ನಡೆದ ಅಸೋಸಿಯೇಷನ್‌ನ 49ನೇ ವಾರ್ಷಿಕ ಸಮಾವೇಶದಲ್ಲಿ ಈ ಆಯ್ಕೆ ನಡೆಯಿತು. ಡಾ.ಸಚ್ಚಿದಾನಂದ ರೈ ಅವರು ಕೆನರಾ ಆರ್ಥೋಪೆಡಿಕ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿ, ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ಮಂಗಳೂರು ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದಾರೆ.

ಕೊಳವೆಬಾವಿ ಕಲಹ ಕೊಲೆಯಲ್ಲಿ ಅಂತ್ಯ

ಚಿಕ್ಕಮಗಳೂರು: ಬೋರ್‌ವೆಲ್‌ಗೆ ವಿದ್ಯುತ್ ಲೈನ್ ಅಳವಡಿಕೆ ವಿಚಾರಕ್ಕೆ ಗಲಾಟೆ ನಡೆದ ಪ್ರಕರಣ ಕೊಲೆಯಲ್ಲಿ ಅಂತ್ಯವಾಗಿದೆ. ಕಡೂರು ತಾಲೂಕಿನ

ವಡೇರಹಳ್ಳಿ ಗ್ರಾಮದಲ್ಲಿ ಘಟನೆ ನಡೆದಿದ್ದು ಕಲ್ಲೇಶಪ್ಪ (55) ಮೃತ ದುರ್ದೈವಿ. ವಡೇರಹಳ್ಳಿ ಪಕ್ಕದ ಆನಂದಪುರ ಗ್ರಾಮದ ಮೂವರ ಮೇಲೆ ದೂರು ನೀಡಲಾಗಿದೆ. ಟಿಸಿಯಿಂದ ವಿದ್ಯುತ್‌ಲೈನ್ ಎಳೆದುಕೊಂಡು ಬೋರ್ ಮೂಲಕ ತೋಟಕ್ಕೆ ನೀರ ಹಾಯಿಸ್ತಿದ್ದು ಅದೇ ಟಿಸಿಯಿಂದ ಮತ್ತೊಂದು ಬೋರ್‌ಗೆ ಕರೆಂಟ್ ಎಳೆದುಕೊಳ್ಳಲು ಯತ್ನ ಮಾಡಿದ್ದ ಎನ್ನಲಾಗಿದೆ. ಕಲ್ಲೇಶಪ್ಪ ಒಂದೇ ತೋಟದಲ್ಲಿ 2 ಬೋರ್ ತೆಗೆಸಿದ್ದ, ವಿದ್ಯುತ್ ಸಂಪರ್ಕ ಕಲ್ಪಿಸುವುದು ಬೇಡ ಅಂದಾಗ ಮಾತಿಗೆ ಮಾತು ಬೆಳೆದು ಗಲಾಟೆ ನಡೆದು ಕೊಲೆಯಲ್ಲಿ ಅಂತ್ಯ ಕಂಡಿದೆ. ಜ.31ರಂದು ಗಲಾಟೆ ಆಗಿದ್ದು ಕಲ್ಲೇಶಪ್ಪ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆ ದಾಖಲಾಗಿ,ಚಿಕಿತ್ಸೆ ಫಲಕಾರಿಯಾಗದೆ ಸಾವಪ್ಪಿದ್ದಾನೆ. ಅನಂತಪುರ ಗ್ರಾಮದ ನಾಗರಾಜಪ್ಪ, ಲೋಹಿತ್, ಗಂಗಾಧರಪ್ಪ ಮೇಲೆ ಕೊಲೆ ಆರೋಪ ಮಾಡಿದ್ದು, ಕಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಮಾರಕ, ಶಾಸನ, ಪರಿಸರ ಕಲಿಕಾ ಶಿಬಿರ

ಚಿಕ್ಕಮಗಳೂರು: ಮಕ್ಕಳಿಗೆ ಶಾಲಾ ಹಂತದಲ್ಲಿ ಐತಿಹಾಸಿಕ ಸ್ಮಾರಕ, ಶಾಸನ, ಪರಿಸರದ ಬಗ್ಗೆ ಆಸಕ್ತಿ ಮೂಡಿಸಲು ತೆಂಗಿನಮನೆ ಸಹಿಪ್ರಾ ಶಾಲೆ ಶಿಕ್ಷಕ ಪ್ರಸನ್ನ ಕುಮಾರ್ ಹೇಳಿದರು. ತಾಲೂಕಿನ ಕಲ್ಲುಬಸ್ತಿ ಸ.ಹಿ.ಪ್ರಾ.ಶಾಲೆಯಲ್ಲಿ ಇಕೊ ಕ್ಲಬ್‌ನಿಂದ ನಡೆದ ಸ್ಮಾರಕ, ಶಾಸನ, ಪರಿಸರ ಕಲಿಕೆ ಶಿಬಿರದಲ್ಲಿ ಮಾತಾಡಿ, ಇತಿಹಾಸ ಒಂದು ಕಾಲದಲ್ಲಿ ಘಟಿಸಿದ ಘಟನೆಗಳನ್ನು ತಿಳಿಸುತ್ತದೆ. ಕಾಲ ಬದಲಾದಂತೆ ಜನಜೀವನ, ಯೋಚನಾ ಲಹರಿ, ಬದುಕು ಹೇಗೆ ಬದಲಾಯಿತೆಂಬುದು ಮಕ್ಕಳಿಗೆ ತಿಳಿಸಲು ಶಿಬಿರಬೇಕೆಂದರು.

ವಿವೇಕ ಜಾಗೃತಿ ಕಾರ್ಯಕ್ರಮ

ಚಿಕ್ಕಮಗಳೂರು: ಭಾರತದ ಧರ್ಮ, ಸಂಸ್ಕೃತಿಗಳ ಹಿರಿಮೆಯನ್ನು ಇಡೀ ಜಗತ್ತಿಗೆ ಸಾರಿದ ದೇಶಪ್ರೇಮಿ ಸ್ವಾಮಿ ವಿವೇಕಾನಂದರೆಂದು ಶಿವಮೊಗ್ಗ ಸರಕಾರಿ ಪ್ರಥಮ ದರ್ಜೆ ಕಾಲೇಜು ಯೋಗ ಶಿಕ್ಷಕ ಪ್ರಸಾದ್ ಕುಮಾರ್ ಹೇಳಿದರು. ತಾಲೂಕಿನ ಶ್ಯಾನು ಭೋಗನಹಳ್ಳಿ ಚಿನ್ನರಡಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಚಿನ್ನರಡಿ ವಿದ್ಯಾಸಂಸ್ಥೆಯಿಂದ ನಡೆದ ವಿವೇಕ ಜಾಗೃತಿ ಕಾರ್ಯಕ್ರಮದಲ್ಲಿ ಮಾತಾಡಿ ಚಿಕಾಗೋದಲ್ಲಿ ಭಾರತದ ಸಂಸ್ಕೃತಿಯನ್ನು ವಿಶ್ವಕ್ಕೆ ಸಾರಿ ಅಂದು ಇಂದು ಯುವಕರಿಗೆ ಐಕಾನ್ ಆಗಿದ್ದಾರೆಂದರು.

{ಕೆ. ಎಸ್. ಈಶ್ವರಪ್ಪ } ಮಾಜಿ ಡಿಸಿಎಂ

ರೈತರು, ಗೋವುಗಳಿಗೆ ಅನ್ಯಾಯವಾಗುತ್ತಿದೆ. ಶ್ರದ್ಧಾ ಕೇಂದ್ರಗಳಿಗೆ ಆಘಾತವಾಗುತ್ತಿದೆ. ಬ್ರಿಗೇಡ್ ಮೂಲಕ ಮಠ-ಮಂದಿರಗಳು, ಮಹಿಳೆಯರು, ರೈತರಿಗೆ ನ್ಯಾಯ ಕೊಡಿಸಲು ಶ್ರಮಿಸಲಾಗುವುದು. ಈ ಬ್ರಿಗೇಡ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ. ಆದರೆ,ಯಾವುದೇ ರಾಜಕೀಯ ಪಕ್ಷದ ನಾಯಕರು ಬಂದರೂ ಸ್ವಾಗತ ಮಾಡುತ್ತೇವೆ.

ಡೇ ಎಟ್ ಸೀ ಕಸರತ್ತಿಗೆ ರಾಜ್ಯಪಾಲರ ಉಪಸ್ಥಿತಿ | 6 ನೌಕೆಗಳು, ಹೆಲಿಕಾಪ್ಟರ್, 400 ಸಿಬ್ಬಂದಿ ಭಾಗಿ

ಕೋಸ್ಟ್‌ಗಾರ್ಡ್‌ನ ಸ್ಥಾಪನಾ ದಿನ

ಮಂಗಳೂರು: ಸಮುದ್ರ ಮಧ್ಯೆ ಹಡಗುಗಳಲ್ಲಿ ಸಂಭವಿಸುವ ಅನಾಹುತ, ಕಡಲ್ಗಳ್ಳರ ಪತ್ತೆ, ಅಪಾಯಕ್ಕೆ ಸಿಲುಕುವ ಮೀನುಗಾರಿಕಾ ಬೋಟು ಹಾಗೂ ಮೀನುಗಾರರ ರಕ್ಷಣೆಯ ನಿಟ್ಟಿನಲ್ಲಿ ಕರಾವಳಿ ರಕ್ಷಣಾ ಪಡೆ (ಕೋಸ್ಟ್ ಗಾರ್ಡ್)ಯಿಂದ ನಡೆಸಲಾಗುವ ಕ್ಷಿಪ್ರ ಕಾರ್ಯಾಚರಣೆಯ ಅಣುಕು ಪ್ರದರ್ಶನ ನವಮಂಗಳೂರು ಬಂದರು ಬಳಿಯ ಅರಬಿ ಸಮುದ್ರದಲ್ಲಿ ನಡೆಯಿತು.

ಭಾರತೀಯ ಕೋಸ್ಟ್‌ಗಾರ್ಡ್‌ನ 49ನೇ ಸ್ಥಾಪನಾ ದಿನ ಅಂಗವಾಗಿ ನಡೆದ 'ಡೇಎಟ್‌ಸೀ' ಎಂಬ ಕೋಸ್ಟ್ ಗಾರ್ಡ್‌ನ ಕಸರತ್ತಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಉಪಸ್ಥಿತರಿದ್ದರೆ, ಕೋಸ್ಟ್ ಗಾರ್ಡ್‌ನ 400 ಸಿಬ್ಬಂದಿ ಈ ಅಣುಕು ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಪೊಲೀಸ್ ಆಯುಕ್ತ ಅನುಪಮ್ ಅಗ್ರವಾಲ್ ಸೇರಿದಂತೆ ಇತರ ಗಣ್ಯರು, ಮಾಧ್ಯಮ ಪ್ರತಿನಿಧಿಗಳು ಹಾಗೂ ಇತರರನ್ನು ಹೊತ್ತ ಭಾರತೀಯ ಕೋಸ್ಟ್ ಗಾರ್ಡ್‌ನ ಮಂಗಳೂರು ಮೂಲದ ಹಡಗಾದ ವರಾಹ ನವ ಮಂಗಳೂರು ಬಂದರಿನಿಂದ ಹೊರಟು 20 ನಾಟಿಕಲ್ ಮೈಲ್ (1 ನಾಟಿಕಲ್ ಅಂದರೆ 1.8 ಕಿ.ಮೀ. ದೂರ) ದೂರದಲ್ಲಿ ಸಮುದ್ರ ನಡುವೆ ನಡೆದ ಕೋಸ್ಟ್‌ಗಾರ್ಡ್‌ನ ವೈವಿಧ್ಯಮಯ ಕಸರತ್ತಿನ ಅಣುಕು ಪ್ರದರ್ಶನ ವೀಕ್ಷಣೆಗೆ ವೇದಿಕೆ ಕಲ್ಪಿಸಿತು.

ಕಡಲ ಗಸ್ತು ಹಡಗು (ಆಫ್‌ಶೋರ್ ಪ್ಯಾಟ್ರೋಲ್ ವೆಸೆಲ್- ಒಪಿವಿ) ವರಾಹ ಸುತ್ತ ಇನ್ನೊಂದು ಕೊಚ್ಚಿ ಮೂಲದ ಇನ್ನೊಂದು ಕೋಸ್ಟ್ ಗಾರ್ಡ್ ಒಪಿವಿ ಹಡಗು ಕ್ಷಕ್ಷಮ್, ಮೂರು ವೇಗದ ಗಸ್ತು ಹಡಗು (ಎಫ್‌ಪಿವಿ- ಫಾಸ್ಟ್ ಪ್ಯಾಟ್ರೋಲ್ ವೆಸೆಲ್)ಗಳಾದ ಅಮಾರ್ತ್ಯ, ರಾಜ್‌ದೂತ್ ಹಾಗೂ ಸಾವಿತ್ರಿಭಾಯಿ ಫುಲೆ, ಎರಡು ಇಂಟರ್‌ಸೆಪ್ಟರ್ ಬೋಟುಗಳು ಹಾಗೂ ಚೇತಕ್ ಹೆಸರಿನ ಹೆಲಿಕಾಪ್ಟರ್ ಈ ಕಾರ್ಯಾರಣೆಯಲ್ಲಿ ಭಾಗವಹಿಸಿದ್ದವು.

ಭಾರತೀಯ ನೌಕಾ ಪಡೆಯು ನೌಕಾ ದಿನಾಚರಣೆಯ ಅಂಗವಾಗಿ ಈ ರೀತಿಯ ಅಣುಕು ಪ್ರದರ್ಶನ ನಡೆಸುವಂತೆಯೇ, ಕೋಸ್ಟ್ ಗಾರ್ಡ್ ಕೂಡಾ ತನ್ನ ನೆಲೆಗಳನ್ನು ಹೊಂದಿರುವಲ್ಲಿ ಕೋಸ್ಟ್‌ಗಾರ್ಡ್ ಸ್ಥಾಪನಾ ದಿನದಂಗವಾಗಿ ಈ ಅಣುಕು ಪ್ರದರ್ಶವನ್ನು ನಡೆಸುತ್ತದೆ. ಆಳ ಸಮುದ್ರದಲ್ಲಿ ಗಸ್ತು ಕಾರ್ಯಾಚರಣೆಯ ಜತೆಗೆ ಪತ್ತೆ ಮತ್ತು ರಕ್ಷಣಾ ಕಾರ್ಯ, ಸಮುದ್ರ ಮಧ್ಯೆ 200 ನಾಟಿಕಲ್ ಮೈಲು (ಅಪಾಯಕ್ಕೀಡಾಗುವ ಹಡಗು ಅಥವಾ ಮೀನುಗಾರಿಕಾ ದೋಣಿಯಲ್ಲಿರುವವರ ರಕ್ಷಣೆ, ಅಕ್ರಮ ಚಟುವಟಿಕೆಗಳ ನಿಗಾ ಹಾಗೂ ತುರ್ತು ವೈದ್ಯಕೀಯ ನೆರವು ನೀಡುವ ಕಾರ್ಯವನ್ನು ಕೋಸ್ಟ್ ಗಾರ್ಡ್ ನಿರ್ವಹಿಸುತ್ತದೆ. ಆ ಕಾರ್ಯಾಚರಣೆಯ ಕುರಿತಾದ ಅಣುಕು ಪ್ರದರ್ಶನ ಇಂದು ನೀಡಲಾಗಿದ್ದು, ಇದಕ್ಕೆ ಪೂರ್ವಭಾವಿಯಾಗಿ ಜ.28 ಮತ್ತು 29ರಂದು ಪೂರ್ವಾಭ್ಯಾಸವನ್ನೂ ಮಾಡಲಾಗಿದೆ ಎಂದು ವರಾಹ ಎಸ್‌ಪಿವಿ ಹಡಗಿನ ಕಮಾಂಡರ್ ಕೆ.ವಿ.ಬೋನಿಮನ್ ಮಾಹಿತಿ ನೀಡಿದರು.

ಇದೇ ವೇಳ ಹಡಗು ಅಥವಾ ಮೀನುಗಾರಿಕಾ ಬೋಟ್‌ಗಳಿಗೆ ಬೆಂಕಿ ಹತ್ತಿದಾಗ ಕೋಸ್ಟ್‌ಗಾರ್ಡ್‌ನ ಒಪಿವಿ ಹಾಗೂ ಎಫ್‌ಪಿವಿ ಹಡಗಿನ ಮೂಲಕ ಕೋಸ್ಟ್ ಗಾರ್ಡ್ ಸಿಬ್ಬಂದಿ ಸಣ್ಣ ತೇಲುವ ಟ್ಯೂಬ್ ಬೋಟ್ (ಲೈಫ್ ರಾಫ್ಟ್)ಗಳ ಮೂಲಕ ನಡೆಸುವ ರಕ್ಷಣಾ ಕಾರ್ಯಾಚರಣೆಯ ಅಣುಕು ಪ್ರದರ್ಶನ ನಡೆಯಿತು. ಗಸ್ತು ಹಡಗುಗಳು ಇಂತಹ ಲೈಫ್ ರಾಫ್ಟ್‌ಗಳನ್ನು ಹೊಂದಿದ್ದು, ಇದು ತಲಾ 20 ಮಂದಿಯನ್ನು ಏಕಕಾಲದಲ್ಲಿ ರಕ್ಷಿಸಿ ಸಾಗಿಸುವ ಸಾಮರ್ಥ್ಯದ ಜತೆಗೆ ಅಗತ್ಯ ಆಹಾರ, ವೈದ್ಯಕೀಯ ಕಿಟ್‌ಗಳನ್ನು ಹೊಂದಿರುತ್ತವೆ. ಹೆಲಿಕಾಪ್ಟರ್ ಮೂಲಕ ಹಗ್ಗ, ರಕ್ಷಣಾ ತೊಟ್ಟಿಲನ್ನಿಸಿ ನಡೆಸುವ ರಕ್ಷಣಾ ಕಾರ್ಯ, ನೌಕಾ ಫಿರಂಗಿಗಳಿಂದ ಫೈರಿಂಗ್ ಕಾರ್ಯಾಚರಣೆಯ ವೇಳೆ ಅಣುಕು ಪ್ರದರ್ಶಿಸಲಾಯಿತು. ವರಾಹ ಹಡಗನ್ನು ಕ್ಯಾಪ್ಟನ್ ಶಹನವಾರ್ಝ್ ಮುನ್ನಡೆಸಿದರು. ಕೋಸ್ಟ್ ಗಾರ್ಡ್ ಜಿಲ್ಲಾ ಹೆಡ್‌ಕ್ವಾಟರ್‌ನ ಡಿಐಜಿ ಪ್ರವೀಣ್ ಕುಮಾರ್ ಮಿಶ್ರಾ ಉಪಸ್ಥಿತರಿದ್ದರು.

ರಾಜ್ಯಪಾಲರು ಕೋಸ್ಟ್ ಗಾರ್ಡ್ ಧ್ವಜವಂದನೆ ಸ್ವೀಕರಿಸುತ್ತಿರುವುದು.

ರಾಜ್ಯಪಾಲ, ಸ್ಪೀಕರ್‌ಗೆ ಗೌರವ

ಡೇ ಎಟ್ ಸೀ ಅಣುಕು ಕಾರ್ಯಾಚರಣೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಜತೆ ವಿಧಾನ ಸಭಾ ಸ್ಪೀಕರ್ ಯು.ಟಿ.ಖಾದರ್ ಕೂಡಾ ನವಮಂಗಳೂರು ಬಂದರು ತೀರಕ್ಕೆ ಆಗಮಿಸಿ ಕೋಸ್ಟ್‌ಗಾರ್ಡ್‌ನ ಎಸ್‌ಪಿವಿ ಹಡಗು ವರಾಹ ಮೇಲೇರಿದರು. ಕೋಸ್ಟ್‌ಗಾರ್ಡ್ ಅಧಿಕಾರಿ, ಸಿಬ್ಬಂದಿಯಿಂದ ಗೌರವ ರಕ್ಷೆ ಸ್ವೀಕಾರದ ಬಳಿಕ ಸ್ಪೀಕರ್ ಅವರು ಕೆಲ ನಿಮಿಷಗಳಲ್ಲೇ ವರಾಹದಿಂದ ತೆರಳಿದರು.

ಕಡಲ ಮಧ್ಯೆ ಫೈರಿಂಗ್

ಸಮುದ್ರದಲ್ಲಿ ಕಡ್ಗಳ್ಳರು ಅಥವಾ ಅಕ್ರಮ ನುಸುಳುಕೋರರ ಹಡಗು ಪ್ರವೇಶ ಮಾಡಿದಾಗ ಅವುಗಳ ವಿರುದ್ಧ ಎಚ್ಚರಿಕೆಯ ಗುಂಡು ಹಾರಿಸುವ ಮೂಲಕ ತಡೆಯುವ ಅಣುಕು ಕಾರ್ಯಾಚರಣೆಯನ್ನು ಅಮಾರ್ತ್ಯ, ರಾಜ್‌ದೂತ್ ಹಾಗೂ ಸಾವಿತ್ರಿಭಾಯಿ ಫುಲೆ ಎಂಬ ಎಫ್‌ಪಿವಿಗಳು, ಎರಡು ಇಂಟರ್‌ಸೆಪ್ಟರ್ ಬೋಟುಗಳು ಹಾಗೂ ಹೆಲಿಕಾಪ್ಟರ್ ಮೂಲಕ ಪ್ರದರ್ಶಿಸಲಾಯಿತು.

ವಿಶೇಷಚೇತನರು ಸ್ವಾವಲಂಬಿ ಜೀವನ ನಡೆಸಿ

ಉಜಿರೆ: ವಿಕಲಾಂಗರಲ್ಲಿ ವಿಶೇಷಚೇತನ ಮತ್ತು ಪ್ರತಿಭೆ ಇದ್ದು, ತಮಗೆ ಸಿಗುವ ಅವಕಾಶಗಳು ಮತ್ತು ಸೌಲಭ್ಯಗಳ ಸದುಪಯೋಗ ಪಡೆದು ಉನ್ನತ ಸಾಧನೆ ಮಾಡಬೇಕು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್‌ಕುಮಾರ್ ಎಸ್.ಎಸ್ ಹೇಳಿದರು.

ನಗರದಲ್ಲಿ ಟಿ.ಬಿ.ಆಸ್ಪತ್ರೆ ಆವರಣದಲ್ಲಿರುವ ಜಾಗೃತಿಸೌಧದಲ್ಲಿ ಮದ್ದಡ್ಕದಲ್ಲಿರುವ ಬ್ರೈಟ್‌ಇಂಡಿಯಾ ಸಂಸ್ಥೆಯ ಆಶ್ರಯದಲ್ಲಿ ವಿಕಲಚೇತನರಿಗೆ ಸಾಧನಾ ಸಲಕರಣೆಗಳನ್ನು ವಿತರಿಸಿ ಶುಭ ಹಾರೈಸಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ಹೆಗ್ಗಡೆಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ 'ವಾತ್ಸಲ್ಯ' ಕಾರ್ಯಕ್ರಮದಡಿಯಲ್ಲಿ ವಾತ್ಸಲ್ಯ ಕಿಟ್‌ಗಳ ಮೂಲಕ ಬಟ್ಟೆ, ಪೌಷ್ಠಿಕಆಹಾರ ಮೊದಲಾದ ಮೂಲಭೂತ ಸೌಲಭ್ಯಗನ್ನು ಒದಗಿಸಲಾಗಿದೆ. ಇಪ್ಪತ್ತು ಸಾವಿರ ನಿರ್ಗತಿಕರಿಗೆ ಮಾಸಾಶನ ನೀಡಲಾಗುತ್ತಿದೆ ಎಂದರು.

ಸಾಧನಾ ಸಲಕರಣೆಗಳ ವಿತರಣೆ: ಗಾಲಿಕುರ್ಚಿ: 8, ಊರುಗೋಲು: 6, ವಾಕರ್:6, ಎಲ್ಬೊ ಕ್ಲಚ್: 9, ವಾಟರ್‌ಬೆಡ್: 4, ಒಟ್ಟು 33 ಮಂದಿ ವಿಕಲಚೇತನರಿಗೆ ಸಾಧನಾಸಲಕರಣೆಗಳನ್ನು ವಿತರಿಸಲಾಯಿತು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಕಾರ್ಯದರ್ಶಿ ವಿವೇಕ್‌ಪ್ಯಾಸ್, ಬ್ರೈಟ್‌ಇಂಡಿಯಾದ ಸದಸ್ಯ ಜಯಶಂಕರ ಶರ್ಮಾ ಉಪಸ್ಥಿತರಿದ್ದರು.

ಬ್ರೈಟ್‌ಇಂಡಿಯಾದ ಕೋಶಾಧಿಕಾರಿ ಶಿಶುಪಾಲ ಪೂವಣಿ ಸ್ವಾಗತಿಸಿದರು. ವಜ್ರನಾಭಯ್ಯ ವಂದಿಸಿದರು.

> **ವಿಶೇಷಚೇತನರು ಒಲಿಂಪಿಕ್ಸ್ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ಕೀಳರಿಮೆ ತೊರೆದು ಬದುಕಿನಲ್ಲಿ ನವಚೈತನ್ಯದಿಂದ ಧೈರ್ಯ ಮತ್ತು ಆತ್ಮವಿಶ್ವಾಸದೊಂದಿಗೆ ಮನೆಯಲ್ಲಿ ಹಾಗೂ ಸಮಾಜದಲ್ಲಿ ಸ್ವಾವಲಂಬಿ ಜೀವನ ನಡೆಸಬೇಕು.**
> -ಅನಿಲ್‌ಕುಮಾರ್ ಎಸ್.ಎಸ್, ನಿರ್ದೇಶಕ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್, ಎಸ್.ಎಸ್. ವಿಶೇಷಚೇತನರಿಗೆ ಸಾಧನಾ ಸಲಕರಣೆಗಳನ್ನು ವಿತರಿಸಿದರು.

ಪರೀಕ್ಷೆ ವೇಳೆ ಆತ್ಮವಿಶ್ವಾಸ ಮುಖ್ಯ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಮತ್ತು ಪರೀಕ್ಷಾ ಸಿದ್ಧತೆ ಕಾರ್ಯಾಗಾರ ವನ್ನು ಪ್ರಾಂಶುಪಾಲ ಡಾ.ಸಿ.ಟಿ. ಜಯದೇವ್ ಉದ್ಘಾಟಿಸಿದರು.

ಚಿಕ್ಕಮಗಳೂರು: ಪರೀಕ್ಷಾ ಸಮಯದಲ್ಲಿ ದ್ಯಾರ್ಥಿಗಳು ಏಕಾಗ್ರತೆ, ಜ್ಞಾಪಕಶಕ್ತಿ ಹಾಗೂ ಆತ್ಮವಿಶ್ವಾಸದಿಂದ ಕೂಡಿದ್ದರೆ ಮಾತ್ರ ನಿಗದಿತ ಅಂಕಗಳಿಸುವ ಮೂಲಕ ತೇರ್ಗಡೆ ಹೊಂದಬಹುದು ಎಂದು ಎಐಟಿ ಕಾಲೇಜು ಪ್ರಾಂಶುಪಾಲ ಡಾ.ಸಿ.ಟಿ.ಜಯದೇವ್ ಹೇಳಿದರು.

ನಗರದ ಎಐಟಿ ಕಾಲೇಜಿನ ಪಾಲಿಟೆಕ್ನಿಕ್ ಸಭಾಂಗಣದಲ್ಲಿ ಜಯಂಗಮ ಕಾರ್ಯಕ್ರಮ ಪ್ರಯುಕ್ತ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಮತ್ತು ಪರೀಕ್ಷಾ ಸಿದ್ಧತೆ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂತಿಮ ಪರೀಕ್ಷೆಗಳಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಆತಂಕ, ಭಯ ಎನ್ನುವುದು ಸಹಜ. ಕಲಿತಂಥ ವಿದ್ಯೆ ಹಾಗೂ ತುಂಬು ಮನಸ್ಸಿನಿಂದ ಪರೀಕ್ಷೆ ಎದುರಿಸಿದರೆ ಪ್ರಶ್ನೆಗಳಿಗೆ ಸಲೀಸಾಗಿ ಉತ್ತರ ಬರೆಯಬಹುದು. ಪರೀಕ್ಷಾ ಕೊಠಡಿಗಳಲ್ಲಿ ಎಲ್ಲಾ ಭಯವನ್ನು ಬಿಟ್ಟು ಮುಕ್ತವಾಗಿರಬೇಕು ಎಂದು ತಿಳಿಸಿದರು.

ಪರೀಕ್ಷಾ ಸಮಯದಲ್ಲಿ ಓದಿನ ಜತೆಗೆ ಆರೋಗ್ಯ ಕಡೆ ಹೆಚ್ಚು ಗಮನಹರಿಸಬೇಕು. ಸಮಯಕ್ಕೆ ಸರಿಯಾಗಿ ನಿದ್ರೆ, ಊಟ ಸೇವಿಸಬೇಕು. ಮಲಗುವ ಮುನ್ನ ಅಭ್ಯಾಸಿದಂಥ ಪಠ್ಯವನ್ನು ನೆನಪಿಸಿಕೊಳ್ಳಬೇಕು. ಪ್ರಶ್ನೆಗಳು ಪುಸ್ತಕ ಹೊರತಾಗಿ ಇರುವ ಕಾರಣ ಅರ್ಥೈಸಿಕೊಂಡು ಸಕರಾತ್ಮಕ ಮನೋಭಾವದಿಂದ ಎದುರಿಸಿದರೆ ಉನ್ನತ ಸ್ಥಾನದಲ್ಲಿ ಹೊರಹೊಮ್ಮಲು ಸಾಧ್ಯ ಎಂದರು.

ಇಟಾಲಿಕ್ ಕೈಬರಹ ತಜ್ಞ ದುಗ್ಗಪ್ಪಗೌಡ ಮಾತನಾಡಿ, ಅಂತಿಮ ಪರೀಕ್ಷೆಗಳಲ್ಲಿ ಮಕ್ಕಳು ಶಕ್ತಿವಂತರಾ ಗಬೇಕು. ಪರೀಕ್ಷೆ ಎರಡ್ಮೂರು ತಿಂಗಳ ಮುನ್ನವೇ ಕಲಿಕೆಗೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು. ಶರೀರಿದ ನರ, ನಾಡಿ ಹಾಗೂ ಮಸ್ತಕದಲ್ಲಿ ಪರೀಕ್ಷೆ ಎದುರಿಸುವ ಸಾಮರ್ಥ್ಯ ಬೆಳೆಸಿಕೊಂಡರೆ ಸುಲಭವಾಗಿ ಮುಂದಿನ ತರ ಗತಿಗೆ ತೇರ್ಗಡೆಯಾಗಲು ಸಾಧ್ಯ ಎಂದು ಹೇಳಿದರು.

ಸಹಯೋಗ ಮತ್ತು ಪ್ರಚಾರ ವ್ಯವಸ್ಥಾಪಕಿ ಎಸ್.ಡಿ.ಚಂದ್ರಕ ಮಾರಿ ಮಾತನಾಡಿ, ಪರೀಕ್ಷಾ ಕೊಠಡಿಗಳಲ್ಲಿ ಪ್ರಶ್ನೆಪತ್ರಿಕೆ ಕೈಗೆ ದೊರೆತಾಗ ಶಾಂತಿಯಿಂದ ಆಲಿಸಬೇಕು. ಗಾಬರಿಗೊಳ್ಳದೇ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಮುನ್ನಡೆದರೆ ಉತ್ತರಗಳು ಲಭಿಸಲು ಸಾಧ್ಯ. ಆಗಾಗಿ ದ್ಯಾರ್ಥಿಗಳು ಹೆಚ್ಚು ಗಾಬರಿಯಾಗದೇ ಸೂಕ್ಷ್ಮವಾಗಿ ಎದುರಿಸಬೇಕು ಎಂದು ತಿಳಿಸಿದರು.

ಆದಿಚುಂಚನಗಿರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಜಿ.ಆರ್.ಚಂದ್ರಶೇಖರ್ ಮಾತನಾಡಿ, ಕಡೂರು, ಚಿಕ್ಕಮಗಳೂರು ಹಾಗೂ ಜಾವಳಿ ಭಾಗದ ಸಂಸ್ಥೆಯ ವಿದ್ಯಾರ್ಥಿಗಳನ್ನು ಇಂದು ಒಂದೆಡೆ ಸೇರಿಸಿ ಮಾನಸಿಕ ಆರೋಗ್ಯ ಮತ್ತು ಪರೀಕ್ಷಾ ಸಿದ್ಧತೆ ಕಾರ್ಯಾಗಾರ ಹಮ್ಮಿಕೊಂಡು ಆತ್ಮಶ್ವಾಸ ಮೂಡಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಬಿಜಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಜೆ.ಜಿ.ಸುರೇಂದ್ರ, ಪಾಲಿಟೆಕ್ನಿಕ್ ಪ್ರಾಂಶುಪಾಲ ಕೆ.ಎಂ.ಸಚ್ಚಿನ್, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> **ಅಧಿಕ ಅಂಕಗಳಿಸಲು ಕೆಲವರು ದಿನವಿಡಿ ಓದುವ ಹವ್ಯಾಸ ರೂಢಿಸಿಕೊಳ್ಳುತ್ತಾರೆ. ಆದರೆ ಪರೀಕ್ಷೆ ವೇಳೆಯಲ್ಲಿ ಜ್ಞಾಪಕಶಕ್ತಿ ಕುಂದಲಿವೆ. ಆಗಾಗಿ ಕನಿಷ್ಠ ಐದಾರು ಗಂಟೆಗಳ ಪಠ್ಯವನ್ನು ಅಭ್ಯಾಸಿಸುವ ಮೂಲಕ ಮನದಟ್ಟು ಮಾಡಿಕೊಳ್ಳಬೇಕು. ಇದರಿಂದಾಗಿ ಪರೀಕ್ಷೆ ಎದುರಿಸುವ ಆತ್ಮಶ್ವಾಸ ತಾನಾಗಿಯೇ ಮುನ್ನೆಲೆಗೆ ಬರಲಿದೆ.**
> -ಡಾ.ಸಿ.ಟಿ.ಜಯದೇವ್, ಎಐಟಿ ಕಾಲೇಜು ಪ್ರಾಂಶುಪಾಲ

ಧರ್ಮಸ್ಥಳ: ಬಾಹುಬಲಿಸ್ವಾಮಿ ಮೂರ್ತಿಗೆ ಪಾದಾಭಿಷೇಕ

ಧರ್ಮಸ್ಥಳ: ದಯೆಯೇ ಧರ್ಮದ ಮೂಲವಾಗಿದ್ದು ದಯೆ ಇದ್ದಲ್ಲಿ ಧರ್ಮ ಇರುತ್ತದೆ ಎಂದು ಕ್ಷುಲ್ಲಕ ನಿರ್ವಾಣ ಸಾಗರ ಮುನಿಮಹಾರಾಜರು ಹೇಳಿದರು.

ಧರ್ಮಸ್ಥಳದಲ್ಲಿ ರತ್ನಗಿರಿಯಲ್ಲಿ ಭಗವಾನ್ ಬಾಹುಬಲಿಸ್ವಾಮಿ ಮೂರ್ತಿಗೆ ನಡೆದ ಪಾದಾಭಿಷೇಕ ಸಂದರ್ಭದಲ್ಲಿ ಅವರು ಮಂಗಲ ಪ್ರವಚನ ನೀಡಿದರು.

ಕ್ಷುಲ್ಲಕ ದರ್ಶನಕೀರ್ತಿ ಮುನಿಮಹಾರಾಜರು ಮಾತನಾಡಿ, ಚತುರ್ವಿಧ ದಾನಗಳಲ್ಲಿ ಆಹಾರದಾನ ಅತ್ಯಂತ ಶ್ರೇಷ್ಠವಾಗಿದೆ. ಸತ್ಕಾರ್ಯಗಳಿಂದ ಪುಣ್ಯ ಸಂಚಯವಾಗುತ್ತದೆ ಎಂದರು.

ಕಾರ್ಕಳ ಜೈನಮಠದ ಲಲಿತಕೀರ್ತಿ ಭಟ್ಟಾರಕ ಸ್ವಾಮೀಜಿ ಮಂಗಲ ಪ್ರವಚನ ನೀಡಿ ಧರ್ಮದ ಪರಂಪರೆ ಉಳಿದರೆ ಧರ್ಮದ ರಕ್ಷಣೆಯಾಗುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ಮನ, ವಚನ, ಕಾಯಗಳಿಂದ ಧರ್ಮದ ಪರಿಪಾಲನೆ ಮಾಡಬೇಕು. ಭಗವಾನ್ ಬಾಹುಬಲಿಯು ಸಾಧಿಸಿ ತೋರಿಸಿದ ತ್ಯಾಗ ಮತ್ತು ಅಹಿಂಸೆ ವಿಶ್ವಕ್ಕೆ ಮಾದರಿಯಾಗಿದ್ದು ಸಾರ್ವಕಾಲಿಕ ಮೌಲ್ಯ ಹೊಂದಿದೆ ಎಂದರು.

ಧರ್ಮಸ್ಥಳದ ರತ್ನಗಿರಿಯಲ್ಲಿ ಭಗವಾನ್ ಬಾಹುಬಲಿಸ್ವಾಮಿ ಮೂರ್ತಿಗೆ ಪಾದಾಭಿಷೇಕ ನಡೆಯಿತು.

ಕೋಲಾರದ ಎನ್.ಆರ್.ಜ್ಞಾನಮೂರ್ತಿ ಹರಿಕಥಾ ಕಾಲಕ್ಷೇಪದ ಮೂಲಕ ಭಗವಾನ್ ಬಾಹುಬಲಿಯ ಜೀವನ-ಸಾಧನೆಯನ್ನು ವಿವರಿಸಿದರು.

ಬೀಡಿನಿಂದ ರತ್ನಗಿರಿಗೆ ಭವ್ಯ ಅಗ್ರೋದಕ ಮೆರವಣಿಗೆ ಬಳಿಕ ಭಗವಾನ್ ಬಾಹುಬಲಿಸ್ವಾಮಿ ಮೂರ್ತಿಯ ಪಾದಗಳಿಗೆ 216 ಕಲಶಗಳಿಂದ ಜಲಾಭಿಷೇಕ, ಎಳನೀರು, ಇಕ್ಷುರಸ, ಕಲ್ಕಚೂರ್ಣ, ಶ್ರೀಗಂಧ, ಚಂದನ ಮೊದಲಾದ ಮಂಗಲದ್ರವ್ಯಗಳಿಂದ ಪಾದಾಭಿಷೇಕ ನಡೆಯಿತು.

ಮಹಾಮಂಗಳಾರತಿ, ಮಾಲಾರ್ಪಣೆ ಮತ್ತು ಶಾಂತಿಮಂತ್ರ ಪಠಣದೊಂದಿಗೆ ಪಾದಾಭಿಷೇಕ ಸಮಾಪನಗೊಂಡಿತು.

ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರು, ಹೇಮಾವತಿ ಹೆಗ್ಗಡೆಯವರು, ಡಿ.ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರಾವಕರು ಮತ್ತು ಶ್ರಾವಕಿಯರು ಪಾದಾಭಿಷೇಕದಲ್ಲಿ ಭಾಗವಹಿಸಿ ಪುಣ್ಯಭಾಗಿಗಳಾದರು.

ಡಾ. ಶಶಿಕಾಂತ ಜೈನ್ ಮತ್ತು ಉಪನ್ಯಾಸಕ ಮಹಾವೀರ ಜೈನ್ ಕಾರ್ಯಕ್ರಮ ನಿರ್ವಹಿಸಿದರು.

> **ಉತ್ತಮ ಸಂಸ್ಕಾರ ಮತ್ತು ಧರ್ಮದ ಮರ್ಮವನ್ನರಿತು ಅನುಷ್ಠಾನದಿಂದ ಆತ್ಮಕಲ್ಯಾಣವಾಗುತ್ತದೆ. ನಾವು ಧರ್ಮವನ್ನು ಕಾಪಾಡಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ.**
> -ಮುನಿಮಹಾರಾಜರು

ಶಾಸಕರಿಂದ ಡಾ.ಅಂಬೇಡ್ಕರ್ ಭವನ ಉದ್ಘಾಟನೆ

ಮಂಗಳೂರು: ಮಹಾನಗರ ಪಾಲಿಕೆಯ ಮೇಯರ್ ಮನೋಜ್ ಕುಮಾರ್ ಅವರು ಪ್ರತಿನಿಧಿಸುತ್ತಿರುವ ವಾರ್ಡ್ 17ರ ಕೋಡಿಕಲ್ ಶಾಲೆಯ ಬಳಿ ಸುಸಜ್ಜಿತ ಡಾ.ಬಿ.ಆರ್.ಅಂಬೇಡ್ಕರ್ ಭವನದ ಉದ್ಘಾಟನೆ ನಡೆಯಿತು.

ಶಾಸಕ ಡಾ.ಭರತ್ ಶೆಟ್ಟಿ.ವೈ ಅವರು ಉದ್ಘಾಟಿಸಿ ಮಾತನಾಡಿದ ಅವರು, ಬಾಬಾ ಸಾಹೇಬ್ ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದಾಗ ಸಮಾಜದಲ್ಲಿ ಶಿಕ್ಷಣದೊಂದಿಗೆ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಅವರ ಹೆಸರಿನಲ್ಲಿ ನಿರ್ಮಾಣವಾದ ಈ ಸಮಾಜ ಭವನದಲ್ಲಿ ಶಿಕ್ಷಣ ತರಬೇತಿ,ಉದ್ಯೋಗ, ತರಬೇತಿಗಳು, ಆರ್ಥಿಕವಾಗಿ ಹಿಂದುಳಿದ ಸಮಾಜಕ್ಕೆ ಪ್ರಯೋಜನವಾಗಲಿ ಎಂದರು.

ಮನೋಜ್ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಸಮಾಜ ಭವನ ನಿರ್ಮಾಣಕ್ಕೆ ಹಲವು ಅಡ್ಡಿ ಆತಂಕ ಎದುರಾಗಿತ್ತು.ತಾನು ಪಾಲಿಕೆ ಸದಸ್ಯನಾದ ಬಳಿಕ ಪೂರ್ಣಗೊಳಿಸಲು ಕೊರೊನಾ ಅಡಚಣೆ ಹಾಗೂ ಆರ್ಥಿಕ ಸಮಸ್ಯೆ ಮತ್ತೆ ಎದುರಾಗಿತ್ತು. ಇದರಿಂದ ಪಾಲಿಕೆಗೂ ಆದಾಯ ಬರುವಂತಾಗುತ್ತದೆ.ಸಮಾಜ ಮುಖೀ ಚಟುವಟಿಕೆಗೂ ಈ ಭವನ ಸದುಪಯೋಗವಾಗಲಿ ಎಂದು ಹಾರೈಸಿದರು.

ಇದೇ ಸಂದರ್ಭ ಭವನವನ್ನು ಪೂರ್ಣಗೊಳಿಸಲು ಬೇಕಾದ ಕ್ರಮಕೈಗೊಂಡ ಮೇಯರ್ ಮನೋಜ್ ಕುಮಾರ್ ಅವರನ್ನು ಅಭಿನಂದಿಸಿದರು.

17ನೇ ಮೇಯರ್ ವಾರ್ಡ್‌ನಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಸಮಾಜಭವನವನ್ನು ಮೇಯರ್ ಮನೋಜ್ ಕುಮಾರ್ ಉದ್ಘಾಟಿಸಿದರು.

> **ಸಮಾಜ ಕಲ್ಯಾಣ ಇಲಾಖೆಯಿಂದಲೂ ಅನುದಾನ ತಾಂತ್ರಿಕ ಕಾರಣದಿಂದ ಸಿಗಲಿಲ್ಲ. ಕೊನೆಗೆ ಪಾಲಿಕೆ ಸಾಮಾನ್ಯ ನಿಧಿ ಹಾಗೂ ಮೀಸಲು 24.10 ನಿಧಿಯಿಂದ ಹಣ ಒದಗಿಸಿ ಇದೀಗ ಪೂರ್ಣಗೊಳಿಸಲಾಗಿದೆ. ಪ.ಜಾ, ಪಂಗಡ , ಇತರ ಪಂಗಡ ಹಾಗೂ ಇತರರಿಗೂ ಈ ಸಮಾಜ ಭವನದಲ್ಲಿ ಕಡಿಮೆ ಶುಲ್ಕದಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ನೀಡಲಾಗುವುದು.**
> -ಮನೋಜ್ ಕುಮಾರ್, ಮೇಯರ್

ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಜಯಲಕ್ಷ್ಮೀ, ಕಿರಣ್ ಕುಮಾರ್ ಕೋಡಿಕಲ್, ಎಸ್.ಎನ್.ಡಿ.ಪಿ ಮಂದಿರದ ಸಂಚಾಲಕರಾದ ಪುರುಷೋತ್ತಮ್ ಪೂಜಾರಿ, ಮುಂಡಾಲ ಯುವ ವೇದಿಕೆಯ ಪ್ರದೀಪ್ ಕಾಪಿಕಾಡ್, ಪರಿಶಿಷ್ಟ ಜಾತಿ ಹಿತರಕ್ಷಣಾ ಸಮಿತಿಯ ಚಂದ್ರಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿಯ ಚಂದ್ರಹಾಸ್ ಸ್ಥಳೀಯರು ಉಪಸ್ಥಿತರಿದ್ದರು.

ಮರಾಠಿ ಬಾಂಧವರ ವಾರ್ಷಿಕ ಕ್ರೀಡಾಕೂಟ

ಸುಳ್ಯ: ತಾಲೂಕು ಮರಾಠಿ ಸಮಾಜ ಸೇವಾ ಸಂಘ ಮತ್ತು ಮರಾಠಿ ಮಹಿಳಾ ವೇದಿಕೆ ಹಾಗೂ ಮರಾಠಿ ಯುವ ವೇದಿಕೆ ಸಂಯುಕ್ತ ಆಶ್ರಯದಲ್ಲಿ ಸಮುದಾಯವನ್ನು ಒಗ್ಗೂಡಿಸುವ ಉದ್ದೇಶದಿಂದ ಮರಾಠಿ ಬಾಂಧವರ ವಾರ್ಷಿಕ ಕ್ರೀಡಾಕೂಟ ಫೆ.9ರಂದು ಸುಳ್ಯದ ಅಂಬಟೆಡ್ಕ ಗಿರಿದರ್ಶಿನಿ ವಠಾರದಲ್ಲಿ ನಡೆಯಲಿದೆ ಎಂದು ಸುಳ್ಯ ಮರಾಟಿ ಸಮಾಜ ಸೇವಾ ಸಂಘದ ಅಧ್ಯಕ್ಷ ಅಧ್ಯಕ್ಷ ಬಾಲಕೃಷ್ಣ ನಾಯ್ಕ ಅಜ್ಜಾವರ ತಿಳಿಸಿದರು. ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಬೆಳಗ್ಗೆ 9ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಸುಳ್ಯ ಪೊಲೀಸ್ ವೃತ್ತ ನಿರೀಕ್ಷಕ ತಿಮ್ಮಪ್ಪ ನಾಯ್ಕ ಉದ್ಘಾಟಿಸುವರು. ಸುಳ್ಯ ತಾಲೂಕು ಮರಾಠಿ ಸಮಾಜ ಸೇವಾ ಸಂಘದ ಅಧ್ಯಕ್ಷ ಬಾಲಕೃಷ್ಣ ನಾಯ್ಕ ಅಜ್ಜಾವರ ಅಧ್ಯಕ್ಷತೆ ವಹಿಸುವರು. ನಪಂ ಉಪಾಧ್ಯಕ್ಷ ಬುದ್ಧ ನಾಯ್ಕ ಜಿ., ಸಂಘದ ಸ್ಥಾಪಕಾಧ್ಯಕ್ಷ ದೇವಪ್ಪ ನಾಯ್ಕ ಹೊನ್ನೇಡಿ, ಗೌರವಾಧ್ಯಕ್ಷ ಜನಾರ್ಧನ ಬಿ.ಕುರುಂಜಿಭಾಗ್, ಮಹಿಳಾ ವೇದಿಕೆ ಅಧ್ಯಕ್ಷೆ ರೇವತಿ ದೊಡ್ಡೇರಿ, ಯುವ ವೇದಿಕೆ ಅಧ್ಯಕ್ಷ ಉದಯಕುಮಾರ್ ಮಾಣಿಬೆಟ್ಟು ಉಪಸ್ಥಿತರಿರುವರು ಎಂದರು. ಶಾಲಾ ಮಕ್ಕಳಿಗೆ, ಪಿಯುಸಿ ಮೇಲ್ಪಟ್ಟ 40 ರಿಂದ 61 ವರ್ಷ ಮೇಲ್ಪಟ್ಟವರಿಗೆ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಲಿದೆ ಎಂದವರು ತಿಳಿಸಿದರು. ರಮೇಶ್ ನೀರಬಿದಿರೆ, ಕೋಶಾಕಾರಿ ಐತಪ್ಪ ನಾಯ್ಕ, ಉಪಾಧ್ಯಕ್ಷೆ ಸುಲೋಚನಾ ಕುರುಂಜಿಗುಡ್ಡೆ, ಜನಾರ್ದನ ನಾಯ್ಕ ಕೇರ್ಪಳ, ಈಶ್ವರ ವಾರಣಾಶಿ, ಜಗದೀಶ್ ಅರಂಬೂರು, ಭವಾನಿಶಂಕರ ಕಲ್ಮಡ್ಕ ಉಪಸ್ಥಿತರಿದ್ದರು.

ಚಿಕ್ಕಮಗಳೂರು ನಗರದ ಎಂಜಿ ರಸ್ತೆಯ ಆಂಜನೇಯ ಜ್ಯುವೆಲರ್ಸ್ ಮಾಲಿಕರಾದ ವಿಜಯ ಕುಮಾರ್ ಅವರು ಅತ್ತಿಗುಂಡಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲಾಮಕ್ಕಳಿಗೆ ಉಚಿತ ಶಾಲಾ ಬ್ಯಾಗ್‌ಗಳನ್ನು ವಿತರಿಸಿದರು. ಈ ಸಮಯದಲ್ಲಿ ಶಾಲಾ ಶಿಕ್ಷಕರಾದ ದೇವರಾಜ್. ಶಾಲಾ ಅಧ್ಯಕ್ಷರದ ಮೋಹನ್ ಕುಮಾರ್. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶಿವಕುಮಾರ್ ಹಾಗೂ ಗ್ರಾಮಸ್ಥರಾದ ಜೈಪಾಲ್. ಸತೀಶ್ ಎಂ. ಸತೀಶ್ ಕೆ.ಪ್ರವೀಣ್ ಸಾಕೇತ್, ಜೈಪಾಲ್, ಸತೀಶ್.ಡಿ, ವಿಶ್ವ, ಚಂದ್ರು, ಪ್ರಸನ್ನ ಎ.ಕೆ ಇದ್ದರು.

ಹೆದ್ದಾರಿ ನಿರ್ವಹಣೆ: ಇಲಾಖೆ ವಿಫಲ

ಮೂಡಿಗೆರೆ: ತಾಲೂಕಿನ ದಾರದಹಳ್ಳಿ ಗ್ರಾಮದ ಬಿಳ್ಳೂರಿನ ಮೂಲಕ ಹಾದುಹೋಗಿರುವ ರಾಜ್ಯ ಹೆದ್ದಾರಿ 252 ರಸ್ತೆಯನ್ನು ನಿರ್ವಹಣೆ ಮಾಡುವುದರಲ್ಲಿ ಲೋಕೋಪಯೋಗಿ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎಂ.ಮಂಜುನಾಥ್ ದೂರಿದರು. ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ರಸ್ತೆಯ ಎರಡು ಭಾಗಗಳಲ್ಲಿ ದಾಖಲಿತ ರಸ್ತೆಯ ಭೂಗಡಿ, ಕಟ್ಟಡ ರೇಖೆ, ವಾಹನ ನಿಯಂತ್ರಣ ರೇಖೆ ಹಾಗೂ ರಸ್ತೆ ಘಟಕಗಳನ್ನು ಸ್ಪಷ್ಟವಾಗಿ ವಿವರಿಸಿದ್ದರೂ ಅಕ್ರಮವಾಗಿ ಕಟ್ಟಡಗಳು ತಲೆ ಎತ್ತಿವೆ. ಇದರಿಂದ ವಾಹನಗಳು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆಯುತ್ತಿದ್ದು, ವಾಹನ ಸವಾರರು ಹಾಗೂ ಪಾದಾಚಾರಿಗಳು ನಿತ್ಯ ತೊಂದರೆ ಅನುಭವಿಸುವಂತಾಗಿದೆ. ಈ ರಸ್ತೆಯ ವಿಸ್ತಾರ ಹಾಗೂ ಗಡಿ ಗುರುತು ಮಾಡಿ, ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಲೋಕೋಪಯೋಗಿ ಇಲಾಖೆಗೆ ಅನೇಕ ಬಾರಿ ದೂರು ನೀಡಿದರೂ ಕ್ರಮ ವಹಿಸುತ್ತಿಲ್ಲ ಎಂದು ಹೇಳಿದರು. ಈ ಲೋಕೋಪಯೋಗಿ ಇಲಾಖೆಯಲ್ಲಿ ಯಾವುದು ಗುಣಾತ್ಮಕ ಕೆಲಸ ಆಗುತ್ತಿಲ್ಲ. ಈಗ ರಾಜ್ಯ ಹೆದ್ದಾರಿ 252 ರ ದಾಖಲಿತ ರಸ್ತೆಯ ಭೂಗಡಿ ರೇಖೆ, ಕಟ್ಟಡ ನಿಯಂತ್ರಣ ರೇಖೆಗಳನ್ನು ಗುರುತಿಸುವಲ್ಲಿ ಕ್ರಮವಹಿಸದೇ ಇರುವುದರಿಂದ ವಾಹನ ಸವಾರರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಶೀಘ್ರವಾಗಿ ಬಗೆಹರಿಸದಿದ್ದರೆ ಪಿಡಬ್ಲೂಡಿ ಕಚೇರಿ ಮುಂದೆ ಧರಣಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಮಾಚಾರ ಸಣ್ಣದಲ್ಲ

ಬೆಂಕಿ ನಂದಿಸುವ ಕಾರ್ಯಕ್ಕೆ ಆದ್ಯತೆ ನೀಡಿ

ಭದ್ರಾವತಿ: ಅರಣ್ಯದಲ್ಲಿ ಬೆಂಕಿ ಅವಘಡಗಳು ಸಂಭವಿಸಿದ ತುರ್ತು ಸಂದರ್ಭದಲ್ಲಿ ಅರಣ್ಯ ಸಿಬ್ಬಂದಿಗೆ ಮೊದಲು ಬೆಂಕಿ ನಂದಿಸಲು ಆದ್ಯತೆ ನೀಡಬೇಕು ಎಂದು ಚನ್ನಗಿರಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಟಿ.ಎ.ರತ್ನಪ್ರಭಾ ಹೇಳಿದರು. ನಗರದ ನ್ಯೂಟೌನ್ ಜೆ.ಟಿ.ಎಸ್ ಶಾಲೆ ಸಮೀಪದ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ, ಅರಣ್ಯ ಇಲಾಖೆಯ ಸಿಬ್ಬಂದಿಗೆ ಅಗ್ನಿಶಾಮಕ ಮತ್ತು ತುರ್ತು ಸೇವೆ ಘಟಕದಿಂದ ಹಮ್ಮಿಕೊಂಡಿದ್ದ ಬೆಂಕಿಯಿಂದ ಅರಣ್ಯ ರಕ್ಷಿಸುವ ಕುರಿತು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.ಅಗ್ನಿಶಾಮಕ ಠಾಣಾಧಿಕಾರಿ ವಸಂತಕುಮಾರ್ ಮಾತನಾಡಿ, ಬೆಂಕಿ ನಂದಿಸಲು ಹಲವಾರು ಕ್ರಮಗಳಿವೆ ಆಯಾ ಸಂದರ್ಭಗಳಿಗೆ ತಕ್ಕಂತೆ ಅವುಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸಿದಲ್ಲಿ ಹೆಚ್ಚಿನ ಅವಘಡ ಸಂಭವಿಸುವುದನ್ನು ತಡೆಯಬಹುದು ಎಂದರು. ತರಿಕೆರೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎನ್.ಉಮರ್ ಬಾದ್‌ಶಹಾ, ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಿ. ಸಿದ್ದಬಸಪ್ಪ, ಅಗ್ನಿಶಾಮಕ ದಳದ ಅಧಿಕಾರಿ ಅಶೋಕ್ ಕುಮಾರ್, ಉಪವಲಯ ಅರಣ್ಯಾಧಿಕಾರಿ ಬಿ.ಎಚ್ .ದುಗ್ಗಪ್ಪ, ನಿರಂಜನ ಮೂರ್ತಿ, ಮಹೇಂದ್ರ ಉಪಸ್ಥಿತರಿದ್ದರು.

ನೀರಿನ ಕಂದಾಯ ಕಟ್ಟಲು ವಿಶೇಷ ಕೌಂಟರ್

ಶಿವಮೊಗ್ಗ: ನೀರಿನ ಕಂದಾಯ ಮತ್ತು ಬಾಕಿ ಕರವ ಸೂಲಾತಿ ಮಾಡಲು ನಗರದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಣಾ ವಿಭಾಗ ಮತ್ತು ಉಪವಿಭಾಗದ ವತಿಯಿಂದ ವಿಶೇಷ ವಸೂಲಾತಿ ಕೌಂಟರ್‌ಗಳನ್ನು ತರೆಯಲಾಗಿದೆ. ನೀರಿನ ಕಂದಾಯ ಮತ್ತು ಬಾಕಿ ಕರ ವಸೂಲಾತಿಗಾಗಿ ನಗರದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಗುರುಪುರ ಸರಕಾರಿ ಪ್ರಾಥಮಿಕ ಶಾಲೆ ಆವರಣ, ಮಂಡ್ಲಿ ಸರ್ಕಲ್ ಆಟೋ ನಿಲ್ದಾಣದ ಹತ್ತಿರ, ದ್ರೌಪದಮ್ಮ ಸರ್ಕಲ್ ಸಿಟಿಬಸ್ ನಿಲ್ದಾಣದ ಹತ್ತಿರ, ಶಾಂತಿನಗರ ಯಲ್ಲಮ್ಮನ ದೇವಸ್ಥಾನದ ಹತ್ತಿರ ಮತ್ತು ಸೂಳೇಬೈಲ್ ಗಣಪತಿ ದೇವಸ್ಥಾನದ ಹತ್ತಿರ ವಿಶೇಷ ವಸೂಲಾತಿ ಕೌಂಟರ್ ತೆರೆದಿದ್ದು, ನೀರಿನ ಖಾತೆದಾರರು ಬಾಕಿ ಉಳಿಸಿಕೊಂಡಿರುವ ನೀರಿನ ಕಂದಾಯವನ್ನು ಪಾವತಿಸದಿದ್ದಲ್ಲಿ ನೀರಿನ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರು ತಿಳಿಸಿದ್ದಾರೆ.

ಯೋಗ ಕೇಂದ್ರದಲ್ಲಿ ರಥಸಪ್ತಮಿ ಆಚರಣೆ

ಶಿವಮೊಗ್ಗ: ನಗರದ ವಿನೋಬನಗರ ಕಲ್ಲಹಳ್ಳಿಯಲ್ಲಿರುವ ಶಿವಗಂಗಾ ಯೋಗ ಕೇಂದ್ರದಲ್ಲಿ ರಥಸಪ್ತಮಿ ಹಬ್ಬ ಸೂರ್ಯನ ಜನ್ಮದಿನದಂದು ಯೋಗಾಸಕ್ತರಿಂದ ಅಖಂಡ ಸೂರ್ಯ ನಮಸ್ಕಾರದ ಮೂಲಕ ಸೂರ್ಯ ದೇವನಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಂಗಳವಾರ ಬೆಳಗ್ಗೆ 5:30ಕ್ಕೆ ಸೂರ್ಯದೇವನಿಗೆ ಪೂಜೆ ಮಂಗಳಾರತಿ ಸಾಮೂಹಿಕ ಪ್ರಾರ್ಥನೆ ರಥಸಪ್ತಮಿ ಆಚರಣೆ ವಿಶೇಷತೆ ಕುರಿತು ಮಾತು ಶ್ರೀ ಡಾ. ಪದ್ಮನಾಭ ಅಡಿಗರಿಂದ, ಯೋಗ ಶಿಕ್ಷಣಾರ್ಥಿಗಳಿಂದ ಬೀಜಾಕ್ಷರ ಮಂತ್ರಗಳೊಂದಿಗೆ ಅಖಂಡ ಸೂರ್ಯ ನಮಸ್ಕಾರದ ಮೂಲಕ ಸೂರ್ಯದೇವನಿಗೆ ಧನ್ಯತಾ ಪೂರ್ವಕವಾಗಿ ಭಕ್ತಿ ಸಮರ್ಪಣೆ ಮತ್ತು ಮಹಾಪ್ರಸಾದ ವಿತರಣೆ. ಕಾರ್ಯಕ್ರಮದಲ್ಲಿ ಯೋಗಾಸಕ್ತ ಸಾರ್ವಜನಿಕರು ಭಾಗವಹಿಸಿ ಸೂರ್ಯನ ದೇವನ ಕೃಪೆಗೆ ಪಾತ್ರರಾಗುವಂತೆ ಶ್ರೀ ಶಿವಗಂಗಾ ಯೋಗ ಕೇಂದ್ರದ ಕಾರ್ಯಾಧ್ಯಕ್ಷರಾದ ಯೋಗಾಚಾರ್ಯ ಡಾ. ಸಿ.ವಿ. ರುದ್ರಾರಾಧ್ಯ ಕೋರಿದ್ದಾರೆ.

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಶಿವಮೊಗ್ಗ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಹೊಸ ಪ್ರಾಜೆಕ್ಟ್‌ಗಳಿಗಾಗಿ ಕೇಂದ್ರ ಸರಕಾರದಿಂದ ಸಹಾಯಧನ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಿದೆ. ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ಕೇಂದ್ರ ಸರಕಾರ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯನ್ವಯ ngo.tribal.gov.in ವೆಬ್‌ಸೈಟ್ ಮೂಲಕ ಫೆ. 15 ರೊಳಗಾಗಿ ನೋಂದಾಯಿಸಿಕೊಳ್ಳುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ವಿರಾಮ
ಪ್ರತಿ ಭಾನುವಾರ

{ ಡಾ.ಜಿ.ಪರಮೇಶ್ವರ್ } ಗೃಹ ಸಚಿವ

ಆರ್.ಅಶೋಕ್ ಅವರು ಯಾವಾಗ ಭವಿಷ್ಯ ಹೇಳೋದನ್ನು ಕಲಿತರು ಎಂದು ನಮಗೆ ಗೊತ್ತಿಲ್ಲ. ನಾವೆಲ್ಲ 5 ವರ್ಷ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ ಎಂದು ಅಂದುಕೊಂಡಿದ್ದೇವೆ. ಈ ಮಧ್ಯೆ ಹೈಕಮಾಂಡ್ ಏನು ತೀರ್ಮಾನ ಮಾಡುತ್ತೋ ಗೊತ್ತಿಲ್ಲ.

ಪಕ್ಷಕ್ಕೆ ಹಾನಿಪಡಿಸಿದರೆ ಸೂಕ್ತ ಕ್ರಮ: ಶಾಸಕ ಅರಗಜ್ಞಾನೇಂದ್ರ ಎಚ್ಚರಿಕೆ

ವರಿಷ್ಠರ, ಪಕ್ಷದ ಬಗ್ಗೆ ಟೀಕೆ ಸಲ್ಲದು

ಶಿವಮೊಗ್ಗ: ಪಕ್ಷವನ್ನು ತಳಮಟ್ಟದಲ್ಲಿ ಕಟ್ಟಿ ಬೆಳೆಸಲಾಗಿದೆ. ಹಾಗಾಗಿ ಅದನ್ನು ಹಾಳು ಮಾಡಬಾರದು. ಅವರ ವಿರುದ್ಧ ಪಕ್ಷ ಕ್ರಮ ಕೈಗೊಳ್ಳುತ್ತದೆ ಎಂದು ಮಾಜಿ ಸಚಿವ ಹಾಗೂ ಶಾಸಕ ಅರಗಜ್ಞಾನೇಂದ್ರ ಎಚ್ಚರಿಕೆ ನೀಡಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ವರಿಷ್ಠರ ಬಗ್ಗೆ ಟೀಕೆ ಮಾಡುವುದನ್ನು ನಿಲ್ಲಿಸಬೇಕು ಎಂದು ತಾಕೀತು ಮಾಡಿದ ಅವರು, ಎಲ್ಲೋ ಕುಳಿತುಕೊಂಡು ಪಕ್ಷಕ್ಕೆ ಹಾನಿ ಮಾಡುವುದು ಒಳ್ಳೆಯ ಸಂಗತಿಯಲ್ಲ ಎಂದು ಹೇಳಿದರು.

ಸಂಘಟನೆಯಲ್ಲಿ ಕಷ್ಟಪಟ್ಟಿದ ಕಾರ್ಯಕರ್ತರು ಇದ್ದಾರೆ. ಅವರನ್ನು ಮರೆತು ಅಧ್ಯಕ್ಷರ ಬಗ್ಗೆ ಕೆಟ್ಟದಾಗಿ ಮಾತನಾಡುವುದು ಒಳ್ಳೆಯದಲ್ಲ. ಹೀಗಾಗಿ ನಾವು ಎಲ್ಲವನ್ನು ಪಕ್ಷದ ವಿಚಾರಗಳನ್ನು ಒಳಗೆ ಬಗೆಹರಿಸಿಕೊಳ್ಳಬೇಕು. ಮಾಧ್ಯಮದಲ್ಲಿ ಮುಖ ತೋರಿಸುವ ಸಲುವಾಗಿ ಸಂಘಟನೆಯನ್ನು ಸಣ್ಣದಾಗಿ ಮಾಡಬೇಡಿ. ಇದನ್ನು ತಕ್ಷಣ ಸರಿಮಾಡಿಕೊಳ್ಳಿ ಇಲ್ಲವಾದರೆ ದೊಡ್ಡ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಇದಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,ಅಡಿಕೆ ಆರೋಗ್ಯ ಹಾನಿಕಾರಕ ಎಂಬ ಅಂಶ ಕುರಿತು ಕೋರ್ಟ್‌ಗೆ ಅಫಿಡೆವಿಟ್ ಸಲ್ಲಿಸಿದವರು ಯಾರು ಎಂಬುದನ್ನು ಉಸ್ತುವಾರಿ ಸಚಿವ ಮಧುಬಂಗಾರಪ್ಪನವರ ಅರ್ಥ ಮಾಡಿಕೊಳ್ಳಬೇಕು ಎಂದು ಶಾಸಕ ಅರಗಜ್ಞಾನೇಂದ್ರ ಹೇಳಿದ್ದಾರೆ.

ಅಡಿಕೆ ಆರೋಗ್ಯಕ್ಕೆ ಹಾನಿಕರ ಹಾಗೂ ಕ್ಯಾನ್ಸರ್‌ಕಾರಕ ಎಂದು ಎಫ್‌ಎಸ್‌ಎಸ್‌ಎಐ ನೀಡಿರುವ ವರದಿಯ ವಿರುದ್ಧ ಸಹಕಾರ ಭಾರತಿ ಆಡಳಿತದಲ್ಲಿದ್ದ ಮ್ಯಾಮಕೋಸ್ ಹೈಕೋರ್ಟ್ ಮೊರೆ ಹೋಗಿತ್ತು. ಪರಿಣಾಮ ನ್ಯಾಯಾಲಯ ಅಡಿಕೆ ಕ್ಯಾನ್ಸರ್ ಕಾರಕವಲ್ಲ ಎಂದು ತೀರ್ಪು ನೀಡಿದೆ ಇದನ್ನು ಅರ್ಥ ಮಾಡಿಕೊಳ್ಳದೆ ಸಚಿವರು ಮಾತನಾಡಬಾರದು ಎಂದರು.

ಅಡಿಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣಗಳಲ್ಲಿ ಸಂಘ ಅಡಿಕೆ ಬೆಳೆಗಾರರ ಪರವಾಗಿ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದೆ. ಹೀಗಾಗಿ ಸಹಕಾರಿ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸುವ ಸಲುವಾಗಿ ಬೆಂಬಲ ನೀಡುವಂತೆ ಮನವಿ ಮಾಡಿದರು. ಮೂರು ಜಿಲ್ಲೆಗಳನ್ನೊಳಗೊಂಡು ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘ (ಮಾಮ್‌ಕೋಸ್) ಸಹಕಾರ ಭಾರತಿಯ ಹಿಡಿತಕ್ಕೆ ಬಂದಾಗಿನಿಂದ ಸಾಕಷ್ಟು ಬದಲಾವಣೆಯಾಗಿರುವುದರಿಂದ ಫೆ.4 ರಂದು ಆಡಳಿತ ಮಂಡಳಿಗೆ ನಡೆಯುವ ಚುನಾವಣೆಯಲ್ಲಿಯೂ ಮತದಾರರು ಸಹಕಾರ ಭಾರತಿಯ 19 ಉಮೇದುವಾರರನ್ನು ಬೆಂಬಲಿಸುವಂತೆ ಶಾಸಕ ಆರಗ ಜ್ಞಾನೇಂದ್ರ ಮನವಿ ಮಾಡಿದರು.

ಶಾಸಕ ಅರಗಜ್ಞಾನೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿದರು.

2005-06 ರಿಂದ ಮಾಮ್‌ಕೋಸ್ ಆಡಳಿತ ಸಹಕಾರ ಭಾರತಿಯ ಹಿಡಿತದಲ್ಲಿದೆ. ಅಂದು 1,28,350 ಚೀಲ ಅಡಿಕೆ ಆವಕವಿತ್ತು. ಇಂದು 3,03910 ಚೀಲ ಅಡಿಕೆ ಆವಕವಿದೆ. ಆಡಿಟ್ ವರದಿಯಲ್ಲಿ ಬಿ ಶ್ರೇಣಿಯಲ್ಲಿದ್ದ ಸಂಸ್ಥೆ ಈಗ ಎ ಶ್ರೇಣಿಯಲ್ಲಿದೆ. ಅಂದು 154.17 ಲಕ್ಷ ನಿವ್ವಳ ಲಾಭವಿತ್ತು. ಈಗ 525.35 ಲಕ್ಷ ಲಾಭಕ್ಕೆ ಹೋಗಿದೆ. ಕೊರೋನಾದಂತಹ ಸಂದರ್ಭದಲ್ಲಿ ಅಡಿಕೆ ಮಾರುಕಟ್ಟೆ ಹಾಗೂ ಬೆಲೆಯನ್ನು ಸ್ಥಿರವಾಗಿ ಇಡಲಾಗಿತ್ತು ಎಂದರು. ಷೇರುದಾರರಿಗೆ ಶೇ.10. 5 ರ ಬಡ್ಡಿ ದರದಲ್ಲಿ ವಾರ್ಷಿಕ 250 ಕೋಟಿ ರು. ಸಾಲ ನೀಡಲಾಗುತ್ತಿದೆ.

ಷೇರುದಾರರ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕ ಗಾಯಗೊಂಡರೆ 2 ಲಕ್ಷ ವಿಮಾ ಪರಿಹಾರ, ಮೃತಪಟ್ಟರೆ 6 ಲಕ್ಷ ರು. ಪರಿಹಾರ ನೀಡಲಾಗುತ್ತಿದೆ. ಅಡಿಕೆ ಕಳ್ಳಸಾಗಣೆಯಾದ ಸಂದರ್ಭದಲ್ಲಿ ಬೆಲೆ ಕುಸಿತವಾದಾಗ ಕೇಂದ್ರಕ್ಕೆ ನಿಯೋಗ ಹೋಗಿ ಮನವಿ ಸಲ್ಲಿಸಲಾಗಿದೆ. ಆಮದು ಅಡಿಕೆ ಮೇಲೆ ಸುಂಕ ಹೆಚ್ಚಿಸುವಂತೆ ಮಾಡಿದ ಮನವಿಯಿಂದಾಗಿ ಇಂದು ಕೆಜಿ ಅಡಿಕೆಗೆ ಕನಿಷ್ಠ 500 ರು. ಆಮದು ಸುಂಕ ವಿಧಿಸಲಾಗುತ್ತಿದೆ ಎಂದರು.

> ಮಹಾರಾಷ್ಟ್ರದಲ್ಲಿ ಸುಗಂಧಿತ ಅಡಿಕೆ ಮೇಲೆ ಹೇರಲಾಗಿದ್ದ ನಿಷೇಧ ಕುರಿತಂತೆ ಅಲ್ಲಿನ ಸಚಿವರೊಂದಿಗೆ ಸಮಾಲೋಚನೆ ನಡೆಸಿ ಇದರಿಂದ ಆರೋಗ್ಯಕ್ಕೆ ಹಾನಿ ಇಲ್ಲ ಎಂಬುದನ್ನುಮನವರಿಕೆ ಮಾಡಲಾಗಿದೆ. ಅಡಿಕೆ ಕಾರ್ಯಪಡೆಯನ್ನು ಮುಂದುವರಿಸುವಂತೆ ಹಾಗೂ ಅಡಿಕೆ ಸಂಶೋಧನೆಗಾಗಿ ಅನುದಾನ ನೀಡುವಂತೆ ಸಿಎಂ ಸಿದ್ದರಾಮಯ್ಯನವರಿಗೆ ಮನವಿ ಮಾಡಲಾಗಿದೆ.
>
> ಅರಗಜ್ಞಾನೇಂದ್ರ, ಶಾಸಕ

ಅಡಿಕೆ ಬೆಲೆ ಸ್ಥಿರವಾಗಿರುವಂತೆ ಸಹಕಾರ ಸಂಸ್ಥೆಗಳು ನೋಡಿಕೊಳ್ಳುತ್ತಿವೆ. ಹೀಗಾಗಿ ರೈತರಿಂದ ಅಡಿಕೆಯನ್ನು ನೇರ ಖರೀದಿ ಮಾಡಲಾಗುತ್ತಿದೆ. ಅಡಿಕೆ ಮಹಾಮಂಡಳ ರಚಿಸಿ ಬೆಳೆಗಾರರ ಸಮಸ್ಯೆ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ. ತೇವಾಂಶವನ್ನು ಶೇ.7 ರಿಂದ 11 ಕ್ಕೆ ಹೆಚ್ಚಿಸಲು ಸಚಿವರೊಂದಿಗೆ ಚರ್ಚಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಮ್‌ಕೋಸ್ ಮಾಜಿ ಉಪಾಧ್ಯಕ್ಷ ಮಹೇಶ್ ಹುಲ್ಕುಳಿ, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಅಣ್ಣಪ್ಪ, ಪ್ರಭಾಕರ್ ಇದ್ದರು.

ಎಟಿಎಮ್ ಸೇವೆ ಸ್ಥಗಿತ ಗ್ರಾಹಕರ ಪರದಾಟ

ಭದ್ರಾವತಿ: ಸಮೀಪದ ಕೈಮರದ ಎನ್.ಡಿ.ಸುಂದರೇಶ್ ವೃತ್ತದಲ್ಲಿನ ಕೆನರಾ ಬ್ಯಾಂಕ್‌ನ ಎಟಿಎಮ್ ಸೇವೆ ಸ್ಥಗಿತಗೊಂಡು ಮೂರು ತಿಂಗಳು ಕಳೆದಿವೆ. ಆದರೂ ಇನ್ನೂ ಸೇವೆ ಆರಂಭಿಸಿಲ್ಲ. ಎಟಿಎಮ್ ಸೌಲಭ್ಯ ದೊರೆಯದ ಕಾರಣ ಬ್ಯಾಂಕ್‌ನಲ್ಲಿ ಗ್ರಾಹಕರು ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಯೋವೃದ್ಧರು, ಅಂಗವಿಕಲರು, ಸಣ್ಣ ಮಕ್ಕಳ ತಂದೆ-ತಾಯಿಯರು ಬ್ಯಾಂಕ್‌ಗೆ ಬಂದು ಹಣ ಪಡೆಯಲು ಅಥವಾ ಕಟ್ಟಲು ಹರಸಾಹಸ ಪಡಬೇಕಾಗಿದೆ.

1 ಅಥವಾ 2 ಸಾವಿರ ಹಣವನ್ನು ತೆಗೆದುಕೊಳ್ಳುವವರೂ ಬ್ಯಾಂಕ್‌ನಲ್ಲಿ ಕಾಯಬೇಕಾಗಿದೆ. ಹಿರಿಯ ನಾಗರಿಕರು ತಡವಾದಾಗ ಬ್ಯಾಂಕ್ ಸಿಬ್ಬಂದಿಗಳೊಂದಿಗೆ ವಾಗ್ವಾದಕ್ಕೂ ಇಳಿದಿರುವುದುಂಟು. ಇದರಿಂದ ಬ್ಯಾಂಕ್ ಸಿಬ್ಬಂದಿಗಳಿಗೂ ಕೂಡ ಕಿರಿಕಿರಿ ಉಂಟಾಗುತ್ತಿದೆ.

ಈ ಬಗ್ಗೆ ಬ್ಯಾಂಕ್ ಮ್ಯಾನೇಜರ್ ಅವರನ್ನು ವಿಚಾರಿಸಿದಾಗ, ನಮ್ಮ ಶಾಖೆಯಲ್ಲಿ ಸುಮಾರು15 ಸಾವಿರಕ್ಕಿಂತ ಹೆಚ್ಚು ಖಾತೆಗಳಿವೆ. ಮೂರು ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದೇವೆ. ಹೀಗಾಗಿ ಜನರನ್ನು ನಿಯಂತ್ರಿಸುವುದು ಕಷ್ಟ.

> ಈಗಾಗಲೇ ಬ್ಯಾಂಕ್‌ನ ಮುಖ್ಯ ಕಚೇರಿಗೆ ಎಟಿಮ್ ಮಿಷನ್ ಕೆಟ್ಟು ತುಂಬಾ ದಿನಗಳಾಗಿವೆ. ಆದಷ್ಟು ಬೇಗ ರಿಪೇರಿ ಮಾಡಿಸಿ ಎಂದು ತಿಳಿಸಿದ್ದೇವೆ ಆದರೆ ಆ ಕಡೆಯಿಂದ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ಆ ಹಳೆಯ ಮಷಿನ್ ಕಂಪನಿಯು ಸೇವೆ ನೀಡುತ್ತಿಲ್ಲ. ಹೊಸ ಮಿಷನ್ ಕಳಿಸಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಆದರೆ ಇದುವರೆಗೂ ಬಂದಿಲ್ಲ.
>
> -ದೀಪಕ್, ವ್ಯವಸ್ಥಾಪಕ

ಬ್ಯಾಂಕ್‌ನಲ್ಲಿ ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಂತ ಗ್ರಾಹಕರು.

ಆದಾಯದ ಸ್ವಲ್ಪ ಭಾಗ ಸಮಾಜಕ್ಕೆ ಬಳಸಿ

ಸೊರಬ: ಸಮಾಜ ಸೇವಕ ಹಾಗೂ ಹೈಕೋರ್ಟ್ ವಕೀಲ ಎಚ್.ವಿ. ಕುಮಾರಸ್ವಾಮಿ ಅವರು ತಮ್ಮ ಜನ್ಮ ದಿನ ವಿಶೇಷವಾಗಿ ಪಟ್ಟಣದ ಹೊರವಲಯದ ಹೊಸಪೇಟೆ ಬಡಾವಣೆಯಲ್ಲಿರುವ ನವಚೇತನ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯಲ್ಲಿ ಭಾನುವಾರ ಆಚರಿಸಿದರು.

ಈ ವೇಳೆ ಮಾತನಾಡಿದ ಎಚ್.ವಿ. ಕುಮಾರ ಸ್ವಾಮಿ ಅವರು, ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರು ಅಧಿಕಾರದಲ್ಲಿ ಇರಲೀ, ಇಲ್ಲದೇ ಇರಲೀ ಸದಾ ಬಡವರ ಪರ ಕಾಳಜಿ ಹೊಂದಿದ್ದರು. ಎಸ್. ಮಧು ಬಂಗಾರಪ್ಪ ಅವರು ತಂದೆಯವರ ಹಾದಿಯಲ್ಲಿ ನಡೆಯುತ್ತಿದ್ದಾರೆ. ದುಡಿಮೆಯ ಕೊಂಚ ಆದಾಯವನ್ನು ಸಮಾಜಕ್ಕಾಗಿ ವಿನಿಯೋಗ ಮಾಡಿದರೆ ದೈವ ಮೆಚ್ಚುತ್ತಾನೆ ಎಂದರು.

ಸಂಸ್ಥೆಯ ಮುಖ್ಯ ಶಿಕ್ಷಕ ರವೀಂದ್ರ ಮಾತನಾಡಿ, ಎಚ್.ವಿ. ಕುಮಾರಸ್ವಾಮಿ ಅವರು ಹೈಕೋರ್ಟ್‌ನಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಡತನದ ಹಾದಿಯಲ್ಲಿ ಬೆಳೆದರು. ಆದರೂ ನೆಡೆದು ಬಂದ ಹಾದಿಯನ್ನು ಮರೆಯದೇ ಮುನ್ನೆಡೆಯುತ್ತಿದ್ದಾರೆ ಎಂದರು.

ಪ್ರಮುಖರಾದ ಕುಶಾಲ್ ಆರೇಕೊಪ್ಪ, ಬಿ. ಪ್ರಕಾಶ, ಬಿ. ನಾಗೇಶ್, ಡಿ. ಪ್ರಶಾಂತ್, ಎಚ್.ಪಿ. ರಾಜೇಶ್, ಎಂ.ಸಿ. ಜೀವೇಶ, ಅರುಣ, ರಾಜು, ಆನಂದ, ನವೀನ ಶಿಗ್ಗಾ, ಗಾಗಣ್ಣ, ಸೇರಿದಂತೆ ಸಂಸ್ಥೆಯ ಅಧ್ಯಾಪಕ ವೃಂದದವರು ಹಾಗೂ ಎಚ್.ವಿ. ಕುಮಾರಸ್ವಾಮಿ ಅಭಿಮಾನಿ ಬಳಗದವರು ಉಪಸ್ಥಿತರರಿದ್ದರು.

ಸೊರಬ ಪಟ್ಟಣದ ಹೊರವಲಯದ ಹೊಸಪೇಟೆ ಬಡಾವಣೆಯಲ್ಲಿರುವ ನವಚೇತನ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯಲ್ಲಿ ವಿಶೇಷಚೇತನ ಮಕ್ಕಳೊಂದಿಗೆ ಹೈಕೋರ್ಟ್ ವಕೀಲ ಎಚ್.ವಿ. ಕುಮಾರಸ್ವಾಮಿ ಅವರು ತಮ್ಮ ಜನ್ಮ ದಿನ ಆಚರಿಸಿಕೊಂಡರು.

> ಜನ್ಮದಿನದ ಹೆಸರಿನಲ್ಲಿ ದುಂದು ವೆಚ್ಚ ಮಾಡುವ ಬದಲು ಸಮಾಜದಲ್ಲಿ ಹಿಂದುಳಿದವರು, ನಿರ್ಗತಿಕರು ಹಾಗೂ ವಿಶೇಷಚೇತನ ಮಕ್ಕಳಿಗೆ ಸಹಾಯ ಮಾಡುವ ಮೂಲಕ ಆಚರಿಸಿಕೊಂಡರೆ ಆತ್ಮ ತೃಪ್ತಿ ದೊರೆಯುತ್ತದೆ. ಈಗಾಗಲೇ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಗೆ ತಮ್ಮ ಕೈಲಾದ ಸಹಾಯವನ್ನು ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸಹಾಯ ಮಾಡುವ ಅಭಿಲಾಷೆ ಇದೆ.
>
> -ಎಚ್.ವಿ. ಕುಮಾರ ಸ್ವಾಮಿ, ಹೈಕೋರ್ಟ್ ವಕೀಲ

ಪ್ರತಿಭೆ ಅನಾವರಣಕ್ಕೆ ಪಠ್ಯೇತರ ಚಟುವಟಿಕೆ ಸಹಕಾರಿ

ಶಿಕಾರಿಪುರ: ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣಕ್ಕೆ ಪಠ್ಯೇತರ ಚಟುವಟಿಕೆಗಳು ಸಹಕಾರಿಯಾಗಿವೆ. ಪ್ರತಿಯೊಂದು ಮಗುವಿನಲ್ಲಿ ಒಂದೊಂದು ಪ್ರತಿಭೆ ಹುಟ್ಟಿನಿಂದಲೇ ಬಂದಿರುತ್ತದೆ ಅದನ್ನು ಗುರುತಿಸಿ ಅನಾವರಣಗೊಳಿಸುವ ಜವಾಬ್ದಾರಿ ಪೋಷಕರು ಮತ್ತು ಶಿಕ್ಷಕರು ಆಗಿರುತ್ತದೆ ಎಂದು ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಮತ್ತು ಸಂಸ್ಥೆಯ ಆಡಳಿತ ಮಂಡಳಿ ಪ್ರತಿನಿಧಿ ಡಾ. ಶಿವಕುಮಾರ್.ಜಿ.ಎಸ್ ರವರು ತಿಳಿಸಿದರು .

ಪಟ್ಟಣದ ಭವಾನಿರಾವ್ ಕೇರಿಯಲ್ಲಿನ ಮೈತ್ರಿ ಪ್ರಾಥಮಿಕ ಮತ್ತು ಕುಮದ್ವತಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಮತ್ತು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಮತ್ತು ಕರ್ನಾಟಕ ಸರಕಾರದ ನಿಕಟಪೂರ್ವ ಮುಖ್ಯ ಮಂತ್ರಿ ಬಿ.ಎಸ್ . ಯಡಿಯೂರಪ್ಪರವರ ಜನ್ಮದಿನದ ಅಂಗವಾಗಿ ತಾಲೂಕು ಮಟ್ಟದ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಬರಿ ಪುಸ್ತಕಗಳ ವಾಚನ ಮಾಡಿದರೆ ಸಾಲದು ಅದರ ಜತೆಗೆ ಆಟ , ಪ್ರದರ್ಶನ, ಮನರಂಜನೆ ಕೂಡಾ ಮುಖ್ಯವಾದದು. ಪ್ರತಿಯೊಂದು ಮಗುವಿನಲ್ಲೂ ವಿಜ್ಞಾನದ ಅರಿವು ಇದ್ದೆ ಇರುತ್ತದೆ. ಅದನ್ನು ಹೊರಹಾಕುವಂತ ಕೆಲಸವನ್ನು ನಾವೆಲ್ಲರು ಮಾಡಬೇಕೆಂದರು.

ಮೈತ್ರಿ ಪ್ರಾಥಮಿಕ ಶಾಲೆ ಮತ್ತು ಕುಮದ್ವತಿ ಪ್ರೌಢಶಾಲೆ ಪ್ರಾಚಾರ್ಯ ವಿಶ್ವನಾಥ ಪಿ ಮಾತನಾಡಿ, ವಿಜ್ಞಾನದ ಹೊಸ ಆವಿಷ್ಕಾರವನ್ನು ನಮ್ಮ ತರಗತಿಯಲ್ಲಿ ಎಷ್ಟು ಮಾಡುತ್ತೇವೂ ಅಷ್ಟು ವಿದ್ಯಾರ್ಥಿಗಳು ವಿಜ್ಞಾನಿಯಾಗಲು ಒಂದೊಂದೆ ಹೆಜ್ಜೆಯನ್ನು ಇಡಲು ಪ್ರಾರಂಭಿಸುತ್ತಾರೆ. ಹೀಗೆ ಒಂದೊಂದೆ ಮೆಟ್ಟಿಲನ್ನು ಏರುತ್ತಾ ಮುಂದೆ ವಿಜ್ಞಾನಿಯಾಗಿ ಇಲ್ಲವೆ ವಿಜ್ಞಾನದ ವಿಚಾರದಲ್ಲಿ ಉತ್ತಮ ಸಾಧನೆಯನ್ನು ಮಾಡಲು ಸಾಧ್ಯ ಎಂದರು.ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ರಸಪ್ರಶ್ನೆಯ ಸಂಪನ್ಮೂಲ ವ್ಯಕ್ತಿಗಳಾದ ಕುಮದ್ವತಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಕುಮಾರಸ್ವಾಮಿ.ಬಿ.ಎಂ, ಕಸಬಾ 2 ಕ್ಲಸ್ಟರ್ ನ ಸಂಪನ್ಮೂಲ ವ್ಯಕ್ತಿ ಗಣೇಶ್.ಎಸ್ ಮೈತ್ರಿ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಪ್ರಶಾಂತ ಕುಬಸದ ಹಾಗೂ ಶಾಲಾ ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕಾರಿಪುರದ ಮೈತ್ರಿ ಶಾಲೆಯಲ್ಲಿ ನಡೆದ ತಾ. ಮಟ್ಟದ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ ವನ್ನು ಶಿವಕುಮಾರ್ ಉದ್ಘಾಟಿಸಿದರು.

ವಿದ್ಯುತ್ ಸ್ಥಾವರ ನೀಲನಕ್ಷೆ ರೈತರಿಗೆ ಮರಣಶಾಸನ

ಶಿಕಾರಿಪುರ: ತಾಲೂಕಿನ ಕೊರಲಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ವಿದ್ಯುತ್ ಗ್ರೀಡ್‌ಗೆ ವಿದ್ಯುತ್ ಸಂಪರ್ಕಕ್ಕಾಗಿ, ಈಸೂರು ವಿದ್ಯುತ್ ಸ್ಥಾವರದಿಂದ ಸಂಪರ್ಕ ಕಲ್ಪಿಸಲು ರೂಪಿಸಿರುವ ನೀಲ ನಕ್ಷೆ ಸಂಪೂರ್ಣ ಅವೈಜ್ಞಾನಿಕವಾಗಿದ್ದು, ರೈತರಿಗೆ ಮರಣ ಶಾಸನವಾಗಿದೆ ಎಂದು ರಾಜ್ಯ ರೈತ ಸಂಘದ ತಾಲೂಕು ಘಟಕ ಅಧ್ಯಕ್ಷ ಪಿ.ವೈ.ರವಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈಸೂರು ವಿದ್ಯುತ್ ಗ್ರೀಡ್‌ನಿಂದ ನೂತನವಾಗಿ ನಿರ್ಮಿಸಿರುವ ಕೊರಲಹಳ್ಳಿ ವಿದ್ಯುತ್ ಗ್ರೀಡ್‌ಗೆ ಸಂಪರ್ಕ ಕಲ್ಪಿಸಲು ಕೇವಲ 4.5 ಕಿ ಮೀ ದೂರವಿದ್ದು ಈ ಪ್ರದೇಶದಲ್ಲಿ ಯಾವುದೇ ತೋಟ,ರೈತರ ಜಮೀನು, ಜನವಸತಿ ಗ್ರಾಮಗಳಾಗಲಿ ಬರುವುದಿಲ್ಲ. ಇದನ್ನು ಕೈ ಬಿಟ್ಟು 20 ಕಿಲೋ ಮೀಟರ್ ಈಗ ತಯಾರು ಮಾಡಿರುವ ನೀಲ ನಕ್ಷೆಯಿಂದಾಗಿ ರೈತರು ತಮ್ಮ ಫಸಲು ಬಿಡುವ ಅಡಿಕೆ ತೋಟಗಳನ್ನು ಕಳೆದುಕೊಂಡು ಬೀದಿಗೆ ಬಂದು ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದಕ್ಕೆ ತಾಲೂಕಿನ ಶಾಸಕರು, ಸಂಸದರು ಹಾಗೂ ಜಿಲ್ಲೆಯ ಸಚಿವರು ಅವಕಾಶ ಕೊಡದೆ ಕೂಡಲೇ ಮಧ್ಯಪ್ರವೇಶಿಸಿ ಬೀದಿ ಪಾಲಾಗುತ್ತಿರುವ ರೈತ ಕುಟುಂಬಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಸಂತೋಷ್ ಈಸೂರು ಮಾತನಾಡಿ, ಈ ಭಾಗದಲ್ಲಿ ಕೃಷಿ ಜಮೀನನ್ನು ಅಡಿಕೆ ತೋಟ,ತೆಂಗಿನ ತೋಟ, ಹೊಂದಿರುವ ಸಣ್ಣ ರೈತರಾಗಿದ್ದು ಈ ಭೂಮಿ ಬಿಟ್ಟು ನಮಗೆ ಬೇರೆ ಯಾವುದೇ ಭೂಮಿ ಇರುವುದಿಲ್ಲ , ಈ ಯೋಜನೆಯಿಂದಾಗಿ ತಲಾತಲಾಂತರದಿಂದ ಉಳಿಸಿಕೊಂಡು ಬಂದ ಭೂಮಿಯನ್ನು ಕಳೆದುಕೊಂಡು ಬೀದಿಗೆ ಬೀಳುತ್ತೇವೆ, ಉದ್ಯೋಗವಿಲ್ಲದೆ ನಾವು ಕಂಡವರ ಮನೆ ಬಾಗಿಲಿಗೆ ಹೋಗಿ ನಿಲ್ಲುವ ಪರಿಸ್ಥಿತಿ ಬರುತ್ತದೆ. ಪ್ರತಿಭಟನಾ ಕಾರ್ಯಕ್ರಮದಲ್ಲಿ ತಾಲೂಕಿನ ,ಜಿಲ್ಲೆಯ ರಾಜ್ಯದ ರೈತ ಮುಖಂಡರುಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ರೈತ ಸಂಘದ ಉಪಾಧ್ಯಕ್ಷರಾದ ಬೇಗೂರು ಶಿವಪ್ಪ, ರಾಜಶೇಖರ್, ಧನಂಜಯ್ , ಸುಭಾಷ್ ಚಂದ್ರ , ಸಂಡದ ವೀರಪ್ಪ , ಮಂಜುನಾಥ , ಪ್ರೇಮಾನಂದ , ಕಾರ್ತಿಕ್, ಅ ಬ್ದುಲ್, ಅಂಗಡಿ ಸಂಗಪ್ಪ , ಅವಿನಾಶ್, ಅಶೋಕ್, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯ ರೈತ ಸಂಘದ ತಾಲೂಕು ಘಟಕ ಅಧ್ಯಕ್ಷ ಪಿ.ವೈ.ರವಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

> **ಇಂದು ಪ್ರತಿಭಟನಾ ಮೆರವಣಿಗೆ**
>
> ಅವೈಜ್ಞಾನಿಕ ನೀಲ ನಕ್ಷೆಯನ್ನುರದ್ದುಗೊಳಿಸುವಂತೆ ಆಗ್ರಹಿಸಿ, ಫೆ.3 ರ ಬೆಳಗ್ಗೆ 11 ಕೆ ಪಟ್ಟಣದ ಟಿಎ ಪಿ ಸಿ ಎಂ ಎಸ್ ಆವರಣದಿಂದ ತಾಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡಿದ್ದು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ರೈತ ಮುಖಂಡ ಸಂತೋಷ್ ಈಸೂರು ಮನವಿ ಮಾಡಿದರು.

ಸ್ವಸಹಾಯ ಸಂಘದ ಸದಸ್ಯತ್ವಕ್ಕೆ ಕರೆ

ಭದ್ರಾವತಿ: ಸ್ವಸಹಾಯ ಸಂಘಗಳ ಮಹಿಳೆಯರು ಸಬಲೀಕರಣಗೊಳ್ಳುವ ಮೂಲಕ ಕುಟುಂಬದ ಆಸರೆಯಾಗಬೇಕು ಹೊರತು ದುರಾಸೆಗಳಿಂದ ಸಂಕಷ್ಟಗಳಿಗೆ ಒಳಗಾಗ ಬಾರದು ಎಂದು ನಗರದ ಕರುಣಾ ಸೇವಾ ಕೇಂದ್ರದ ಮುಖ್ಯಸ್ಥೆ ಸಿಸ್ಟರ್ ಹೆಲೆನ್ ಮೋರಸ್ ಹೇಳಿದರು.

ನಗರದ ನ್ಯೂಟೌನ್ ಸೆಂಟ್ ಚಾರ್ಲ್ಸ್ ಆವರಣದಲ್ಲಿ ಹಮ್ಮಿಕೊಂಡ ಕರುಣಾ ಸೇವಾ ಕೇಂದ್ರದ ವತಿಯಿಂದ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸ್ವಸಹಾಯ ಸಂಘಗಳ ಸದಸ್ಯರಿಗೆ ಸಂಘದ ಪರಿಕಲ್ಪನೆಯ ಬಗ್ಗೆ ಮಾಹಿತಿ ಕಾರ್ಯಗಾರದಲ್ಲಿ ಅವರು ಪಾಲ್ಗೊಂಡು ಮಾತನಾಡಿದರು.

ಮಹಿಳೆಯರು ದುರಾಸೆ ಹಾಗು ಅಮಿಷ ಗಳಿಂದ ಸ್ವಸಹಾಯ ಸಂಘಗಳ ಸದಸ್ಯರಾಗಬಾರದು. ದುರಾಸೆ ಹಾಗು ಅಮಿಷಗಳು ಮಹಿಳೆಯರ ವಿನಾಶಕ್ಕೆ ಕಾರಣವಾಗಲಿವೆ. ಇತ್ತೀಚಿನ ದಿನಗಳಲ್ಲಿ ಹಲವು ಮಹಿಳೆಯರು ಹಣವನ್ನು ಸಕಾರಾತ್ಮಕವಾಗಿ ಉಪಯೋಗಿಸಿಕೊಂಡು ಜೀವನದ ಮೌಲ್ಯಗಳನ್ನು ತನ್ನದಾಗಿಸಿಕೊಂಡು ಯಶಸ್ವಿನ ದಾರಿಯಲ್ಲಿ ಮುಂದುವರೆದಿದ್ದಾರೆ ಎಂದರು.

ಮಹಿಳೆಯರು ಹಲವು ಸ್ವಸಹಾಯ ಸಂಘಗಳಲ್ಲಿ ಸದಸ್ಯತ್ವ ಹೊಂದುವ ಬದಲು ಒಂದೇ ಸ್ವಸಹಾಯ ಸಂಘದಲ್ಲಿ ತೊಡಗಿಸಿ ಕೊಂಡು ಉತ್ತಮ ಸಾಧನೆಯಲ್ಲಿ ತೊಡಗಬೇಕು. ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ 13 ಸ್ವಸಹಾಯ ಸಂಘಗಳಲ್ಲಿ ಒಟ್ಟು 120 ಮಹಿಳೆಯರು ಸದಸ್ಯತ್ವ ಪಡೆದುಕೊಂಡಿದ್ದಾರೆ ಎಂದರು.

ಕರುಣಾ ಸೇವಾ ಕೇಂದ್ರದ ಸಿಸ್ಟರ್ ಪ್ರಭ, ಒಕ್ಕೂಟದ ಸದಸ್ಯರಾದ ರೇಷ್ಮೆ, ಕಾರ್ಯಕರ್ತ ರಾದ ಸಾವಿತ್ರಿ. ಧನಲಕ್ಷ್ಮಿ ಹಾಗೂ ಕಾವ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಿವೃತ್ತ ನೌಕರರಿಗೆ 7ನೇ ವೇತನ ಆಯೋಗ ನೀಡಿ

ಭದ್ರಾವತಿ: ಕರ್ನಾಟಕ ನಿವೃತ್ತ ನೌಕರರ 25 ತಿಂಗಳು ಸೇವೆ ಸಲ್ಲಿಸಿ ನಿವೃತ್ತರಾದ ನೌಕರರಿಗೆ 7ನೇ ವೇತನ ಆಯೋಗದ ಅನುಷ್ಠಾನದಲ್ಲಿ ನಿವೃತ್ತಿ ಉಪಲಬ್ಧಗಳನ್ನು ಪಾವತಿಸುವಂತೆ ತಾಲೂಕು ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ಗ್ರೇಡ್-2 ತಹಸೀಲ್ದಾರ್ ಮಂಜನಾಯ್ಕ ಹಾಗೂ ಉಪ ತಹಸೀಲ್ದಾರ್ ಅರಸ್ ರವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಮನವಿ ಪತ್ರ ಸಲ್ಲಿಸಿ ಮಾತನಾಡಿದ ಪ್ರಮುಖರು ಪ್ರಸ್ತುತ ಸೇವೆಯಲ್ಲಿರುವ ಅಧಿಕಾರಿ ನೌಕರರಂತೆ ನಾವು 2022ರ ಜು.1 ರಿಂದಲೇ ಪಡೆಯಬೇಕಿದ್ದ ನಿವೃತ್ತಿ ವೇತನದ 7ನೇ ವೇತನ ಆಯೋಗದ ವರದಿಯಂತೆ ಪರಿಷ್ಕೃತ ವೇತನದ ಮೇಲೆ ನಿವೃತ್ತಿ ಆರ್ಥಿಕ ಸೌಲಭ್ಯಗಳಾದ ಡಿ.ಸಿ .ಆರ್.ಜಿ . ಕಮ್ಯುಟೇಶನ್ ಹಾಗೂ ಗಳಿಕೆ ರಜೆ ನಗದೀಕರಣಗಳ ಸೌಲಭ್ಯಗಳ ಲೆಕ್ಕಾಚಾರದ ವ್ಯತ್ಯಾಸದ ಮೊತ್ತ ನೀಡಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಿವೃತ್ತ ಸರಕಾರಿ ನೌಕರರಾದ ಪುಟ್ಟರಾಜು, ಮಠದ್ ಜ್ಞಾನೇಶ್ವರ್, ಕರಿಯಪ್ಪ, ಬಸವರಾಜ್, ಚಕ್ರಸಾಲಿ, ಯಶೋಧ,ಮಂಗಳ ಗೌರಮ್ಮ, ಭಾಗವಹಿಸಿದ್ದರು.

ಹುಣಸೆಕಟ್ಟೆ ಕೆರೆ ಕಾಮಗಾರಿ ಪುನರ್ ನಿರ್ಮಾಣ

ಶಿಕಾರಿಪುರ: ತಾಲೂಕಿನ ಅರಳಿಹಳ್ಳಿ ಗ್ರಾಮದ ಹುಣಸೆ ಕಟ್ಟೆ ಕೆರೆ ಕಾಮಗಾರಿಯನ್ನು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅನುದಾನದಿಂದ ಪುನರ್ ನಿರ್ಮಾಣ ಮಾಡುವ ಕುರಿತು ಸ್ಥಳೀಯ ರೈತರ ಸಭೆ ನಡೆಸಿ ಅಭಿಪ್ರಾಯ ಪಡೆದು ಕೆರೆ ಅಭಿವೃದ್ಧಿ ಸಮಿತಿ ರಚನೆ ಮಾಡಲಾಯಿತು. ಸಭೆಗೆ ಯೋಜನಾಧಿಕಾರಿ ನಂಜುಂಡಿ ಆರ್. ದೀಪ ಬೆಳಗಿಸಿ ಚಾಲನೆ ನೀಡಿದರು.

> ಹಿರಿಯರು ಅನೇಕ ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ, ನಾವು ಹೊಸದಾಗಿ ನಿರ್ಮಾಣ ಮಾಡುವ ಅವಶ್ಯಕತೆ ಇಲ್ಲ. ಕೆರೆಯಲ್ಲಿರುವ ಹೂಳನ್ನು ತೆಗೆದು ಸಂರಕ್ಷಣೆ ಮಾಡಿದರೆ ಸಾಕು. ಕೆರೆಗೆ ಬರುವ ನೀರಿನ ಕಾಲುವೆಯನ್ನು ಮುಚ್ಚಬೇಡಿ ಕೆರೆಗೆ ನೀರು ಬರುವ ಹಾಗೆ ವ್ಯವಸ್ಥೆ ಮಾಡಿ.
>
> -ಗಣೇಶ್, ಜಕ್ಕಿನಕೊಪ್ಪ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

ತಾಲೂಕಿನ ಅರಳಿಹಳ್ಳಿ ಗ್ರಾಮದ ಹುಣಸೆ ಕಟ್ಟೆ ಕೆರೆ ಕಾಮಗಾರಿಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅನುದಾನದಿಂದ ಪುನರ್ ನಿರ್ಮಾಣ ಮಾಡುವ ಬಗ್ಗೆ ನಡೆದ ಸಭೆಯನ್ನು ನಂಜುಂಡಿ ಉದ್ಘಾಟಿಸಿದರು.

ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದ ಅಡಿಯಲ್ಲಿ 2016ರಲ್ಲಿ ಪ್ರಾರಂಭವಾಗಿ ಕರ್ನಾಟಕದಲ್ಲಿ 850 ಕೆರೆ ಕಾಮಗಾರಿ ಮಾಡಲಾಗಿದ್ದು, ಶಿಕಾರಿಪುರ ತಾಲೂಕಿನ ಯೋಜನೆಯಿಂದ 7 ಕೆರೆ ಕಾಮಗಾರಿ ಮಾಡಿ ಎಲ್ಲ ಕೆರೆಯ ನೀರು ತುಂಬಿ ಸಂಪತ್ ಭರಿತವಾಗಿದೆ. ಹುಣಸೆಕಟ್ಟೆ ಕೆರೆ ಕಾಮಗಾರಿಯನ್ನು ಧರ್ಮಸ್ಥಳದಿಂದ ಬರುವ ಅನುದಾನದಿಂದ ಸದುಪಯೋಗ ಪಡೆದುಕೊಂಡು ಕೆರೆ ಪುನಶ್ಚೇತನಗೊಳಿಸೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಒಕ್ಕೂಟ ಅಧ್ಯಕ್ಷರಾದ ಗಂಗಾಧರಪ್ಪ. ದೇವಸ್ಥಾನ ಸಮಿತಿ ಅಧ್ಯಕ್ಷರು. ಗ್ರಾಮ ಪಂಚಾಯಿತಿ ಸದಸ್ಯರು. ಹೊಸೂರು ವಲಯ ಮೇಲ್ವಿಚಾರಕ ಅಶೋಕ. ಗ್ರಾಮದ ರೈತರು. ಉಪಸ್ಥಿತರಿದ್ದರು. ಸೇವಾಪ್ರತಿನಿಧಿ ವಿಜಯ ಕುಮಾರ ಗಣ್ಯರನ್ನು ಸ್ವಾಗತಿಸಿದರು.ಕೃಷಿ ಮೇಲ್ವಿಚಾರಕ ಗೋವಿಂದ ಗೌಡ ಕಾರ್ಯಕ್ರಮ ನಿರೂಪಿಸಿದರು. ವೀರೇಶ ವಂದಿಸಿದರು.

ಅಂಬೇಡ್ಕರ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿ

ಹೊಸನಗರ: ಫೆ. 8 ಮತ್ತು 9 ಕ್ಕೆ ಹೊಸನಗರದ ನೆಹರು ಮೈದಾನದಲ್ಲಿ ಕೊರಗ ಹಾಗೂ ಕೊರರ್ ಸಮಾಜ ಭಾಂದವರಿಗಾಗಿ 90 ಗಜಗಳ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ ಎಂದು ಹೊಸನಗರ ಪಟ್ಟಣ ಪಂಚಾಯತಿ ಪೌರ ನೌಕರ ಹಾಗೂ ಈ ಕ್ರಿಕೆಟ್ ಪಂದ್ಯಾವಳಿಯ ಆಯೋಜಕರ ಅಧ್ಯಕ್ಷ ಚಂದ್ರಪ್ಪ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಫೆ. 8ರ ಬೆಳಗ್ಗೆ 10ಗಂಟೆಗೆ ನೆಹರು ಮೈದಾನದಲ್ಲಿ, ಕ್ರಿಕೆಟ್ ಪಂದ್ಯಾವಳಿಯನ್ನು ತೀರ್ಥಹಳ್ಳಿ- ಹೊಸನಗರ ಕ್ಷೇತ್ರದ ಶಾಸಕ ಆರಗಾ ಜ್ಞಾನೇಂದ್ರರವರು ಉದ್ಘಾಟಿಸಲಿದ್ದು ಪಟ್ಟಣ ಪಂಚಾಯತಿಯ ಎಲ್ಲ ಚುನಾಯಿತ ಅಧ್ಯಕ್ಷ ಸದಸ್ಯರು ಆಗಮಿಸಲಿದ್ದಾರೆ ಇವರ ಜತೆಗೆ ಪಟ್ಟಣ ಪಂಚಾಯತಿಯ ನೌಕರರು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಲಿದ್ದಾರೆ ಎಂದರು. ಫೆ.9ರ ಸಂಜೆ 5ಗಂಟೆಗೆ ಈ ಕ್ರಿಕೆಟ್ ಪಂದ್ಯಾವಳಿಯ ಮುಕ್ತಾಯ ಸಮಾರಂಭ ನಡೆಯಲಿದ್ದು ಹೊಸನಗರ-ಸಾಗರ ಕ್ಷೇತ್ರದ ಶಾಸಕರಾದ ಬೇಳೂರು ಗೋಪಾಲಕೃಷ್ಣರವರು ಗೆದ್ದ ತಂಡಕ್ಕೆ ಪ್ರಶಸ್ತಿ ಪತ್ರ ಹಾಗೂ ಬಹುಮಾನವನ್ನು ವಿತರಿಸಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ ಮಾಜೀ ಸದಸ್ಯ ಉಮೇಶ್, ಅಣ್ಣಪ್ಪ, ಪೃಥ್ವಿ, ಹೊಸನಗರದ ಪೌರ ನೌಕರರಾದ ನಾಗರಾಜ್, ನಾಗಪ್ಪ, ಕಾರ್ತಿಕ, ಕಿರಣ, ಹರೀಶ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ಶ್ರೀರಾಮ ಸೇನೆಯ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆಗ್ರಹ

ವಿಕೃತ ಕಾಮಿ ಅಮ್ಜದ್‌ನನ್ನು ಗಲ್ಲಿಗೆ ಹಾಕಿ

ದಾವಣಗೆರೆ: ನೂರಾರು ಮಹಿಳೆಯರು, ವಿದ್ಯಾರ್ಥಿನಿಯರು ಹಾಗೂ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಚನ್ನಗಿರಿಯ ಅಮರ್ ಮೆಡಿಕಲ್ ಶಾಪ್‌ನ ಅಮ್ಜದ್ ಪ್ರಕರಣವನ್ನು ಸರಕಾರ, ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿ, ಆತನಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಶ್ರೀರಾಮ ಸೇನೆಯ ಸಂಸ್ಥಾಪಕ, ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆಗ್ರಹಿಸಿದರು.

> ಚನ್ನಗಿರಿ ಪ್ರಕರಣ ಖಂಡಿಸಿ ಜ.6ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಅಮ್ಜದ್ ವಿರುದ್ಧ ಶ್ರೀರಾಮ ಸೇನೆ ಸೇರಿದಂತೆ ಎಲ್ಲ ಹಿಂದುಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಗುವುದು.
> -ಪ್ರಮೋದ್‌ಮುತಾಲಿಕ್, ರಾಷ್ಟ್ರೀಯ ಅಧ್ಯಕ್ಷ

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಕ್ಷಸಿಕೃತ್ಯ ಮೆರೆದಿರುವ ಅಮ್ಜದ್ ಪರ ಯಾರೂ ವಕಾಲತ್ತು ವಹಿಸಬಾರದು ಹಾಗೂ ಜಾಮೀನು ನೀಡಬಾರದು. ಒಂದು ವೇಳೆ ಆಮಿಷಕ್ಕೊಳಗಾಗಿ ಆರೋಪಿ ಅಮ್ಜದ್ ರಕ್ಷಣೆ ನಿಂತರೆ, ನಿಂತವರ ಮನೆ ಹೆಣ್ಣುಮಕ್ಕಳ ಮೇಲೂ ಅಮ್ಜದ್ ಕಣ್ಣು ಹಾಕುತ್ತಾನೆ ಎಂಬುದು ನೆನಪಿರಲಿ ಎಂದು ಎಚ್ಚರಿಸಿದರು.

ದಾವಣಗೆರೆಯಲ್ಲಿ ಶ್ರೀರಾಮ ಸೇನೆಯ ಸಂಸ್ಥಾಪಕ, ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಮತ್ತಿತರರು ಆರೋಪಿ ಅಮ್ಜದ್ ಪ್ರತಿಕೃತಿ ದಹಿಸಿದರು.

ಲೈಂಗಿಕ ದೌರ್ಜನ್ಯ ನಡೆಸಿದ 100ಕ್ಕೂ ಅಧಿಕ ವಿಡಿಯೋ ತುಣುಕುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದು, 56 ವರ್ಷದ ಆರೋಪಿ ತನ್ನ ಮೆಡಿಕಲ್ ಶಾಪ್‌ನಲ್ಲಿ ಕೃತ್ಯ ನಡೆಸಿರುವುದರ ಹಿಂದೆ ವ್ಯವಸ್ಥಿತ ಸಂಘಟನೆಗಳು ಇರುವ ಶಂಕೆ ಇದೆ. ಹಾಗಾಗಿ, ಸರಕಾರ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥ ಆರೋಪಿ ಯಾವುದೇ ಕಾರಣಕ್ಕೂ ಪ್ರಕರಣದಿಂದ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ರಾಜ್ಯದಲ್ಲಿ ಒಟ್ಟು 21 ಸಾವಿರ ಯುವತಿಯರು ನಾಪತ್ತೆ

2014ರಿಂದ 2019ರ ವರೆಗೆ ರಾಜ್ಯದಲ್ಲಿ ಒಟ್ಟು 21 ಸಾವಿರ ಯುವತಿಯರು ನಾಪತ್ತೆಯಾಗಿದ್ದಾರೆ ಜತೆಗೆ, 2022, 2023, 2024ರಲ್ಲಿ ಒಟ್ಟು 1366 ಅಪ್ರಾಪ್ತೆಯರು ಗರ್ಭವತಿಯಾಗಿದ್ದಾರೆ. ಹುಬ್ಬಳ್ಳಿಯ ನೇಹಾ ಕೊಲೆ ಪ್ರಕರಣ ನಡೆದು 9 ತಿಂಗಳಾದರೂ ಆರೋಪಿಗೆ ಸಜೆಯಾಗಿಲ್ಲ. ಸಿಎಂ ಸಿದ್ದರಾಮಯ್ಯ ನಾಟಕ ಮಾಡುತ್ತಾ ಕಾಲ ದೂಡುತ್ತಿದ್ದಾರೆ. ರಾಜ್ಯದಲ್ಲಿ ಯಾರಿಗೂ ರಕ್ಷಣೆ ಇಲ್ಲದಂತಾಗಿದ್ದು, ಸರ್ಕಾರ ಇದೆಯೋ? ಇಲ್ಲವೋ? ತಿಳಿಯುತ್ತಿಲ್ಲವೆಂದರು.

ಅಮ್ಜದ್ ಪ್ರಕರಣ ಕುರಿತಾಗಿ ಆತನ ಮೊದಲ ಹೆಂಡತಿ 2 ವರ್ಷದ ಹಿಂದೆಯೇ ಈ ರೀತಿಯ ಅತ್ಯಾಚಾರ ಪ್ರಕರಣಗಳಲ್ಲಿ ತನ್ನ ಪತಿ ಇದ್ದ ಬಗ್ಗೆ ದೂರು ನೀಡಿದ್ದರು. ಆಗ ಈ ವ್ಯಕ್ತಿ ಬಗ್ಗೆ ತನಿಖೆ ನಡೆಸಿದ್ದರೇ ಕಾಮಪುರಾಣ ಬಯಲಾಗುತ್ತಿತ್ತು. ಆದರೆ, ಅಂದು ಪೊಲೀಸರು ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳದೇ ರಾಜಿ ಸಂಧಾನ ಮಾಡಿದ್ದರ ಹಿನ್ನೆಲೆಯಲ್ಲಿ ಇಂದು ಇಷ್ಟೆಲ್ಲಾ ಪ್ರಕರ ಣಗಳಿಗೆ ಕಾರಣ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಗಾಗಿ, ಶ್ರೀರಾಮ ಸೇನೆ ಸರಕಾರಕ್ಕೆ 4 ಬೇಡಿಕೆಗಳನ್ನು ಇಟ್ಟಿದ್ದು, ಅದರಂತೆ ಅಮ್ಜದ್ ಪ್ರಕರಣದ ಸಮಗ್ರ ತನಿಖೆಯಾಗಬೇಕು, ಆರೋಪಿ ಪರಾರಿಯಾಗಲು ಸಹಕರಿಸಿದವರ ಬಂಧಿಸಿ ತನಿಖೆ ನಡೆಸಬೇಕು, ನ್ಯಾಯಾಲಯ ತಕ್ಷಣ ಪ್ರಕರಣ ಪರಿಶೀಲಿಸಿ ಆರೋಪಿಗೆ ಗಲ್ಲು ವಿಧಿಸಬೇಕು ಜತೆಗೆ ಸಂತ್ರಸ್ಥ ಮಹಿಳೆಯರ ರಕ್ಷಣೆಗೆ ಮುಂದಾಗಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಪರಶುರಾಮ ನಡುಮನಿ, ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ಚನ್ನಗಿರಿಯ ವಿನಯ್ ಪವಾರ್, ನಿತೀನ್, ಪಿ. ಸಾಗರ್, ಶ್ರೀಧರ್, ಶಿವಪೂಜಾರ್, ಅಜಯ್, ಪ್ರಭು ಇದ್ದರು.

ಸಮಾಚಾರ ಸಣ್ಣದಲ್ಲ

ಸೇವಾಲಾಲ್ ಜಯಂತಿ ಪೂರ್ವಭಾವಿ ಸಭೆ

ದಾವಣಗೆರೆ: ನ್ಯಾಮತಿ ತಾಲೂಕು, ಭಾಯಗಡ್ ಸೂರಗೊಂಡನಕೊಪ್ಪದಲ್ಲಿ ಫೆ.13ರಿಂದ 15ರ ವರೆಗೆ ನಡೆಯುವ ರಾಜ್ಯಮಟ್ಟದ ಶ್ರೀಸಂತ ಸೇವಾಲಾಲ್ ಮಹಾರಾಜರ 286ನೇ ಜನ್ಮ ದಿನಾಚರಣೆ ಪ್ರಯುಕ್ತ ಜಾತ್ರಾ, ಮಹೋತ್ಸವ ಆಚರಣೆಯ ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ಅವರ ಅಧ್ಯಕ್ಷತೆಯಲ್ಲಿ ಫೆ.4ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ ತಿಳಿಸಿದ್ದಾರೆ.

ಅನಾಮಧೇಯ ಶವದ ವಾರಸುದಾರ ಪತ್ತೆ

ದಾವಣಗೆರೆ: ವಿದ್ಯಾನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ಶಿರಮಗೊಂಡನಹಳ್ಳಿ ರಸ್ತೆಯ ಚಾನೆಲ್ ಡ್ರಾಪ್‌ನಲ್ಲಿ ಸುಮಾರು 35-40 ವರ್ಷದ ವ್ಯಕ್ತಿಯ ಮೃತದೇಹ ಕಂಡು ಬಂದಿದೆ.

ವ್ಯಕ್ತಿಯ ಚಹರೆ: 168 ಅಡಿ ಎತ್ತರ, ಕಂದು ಮೈಬಣ್ಣ, ತೆಳ್ಳನೆಯ ಮೈಕಟ್ಟು ಹೊಂದಿರುವ ಅನಾಮಧೇಯ ಶವದ ವಾರಸುದಾರ ಇದ್ದಲ್ಲಿ ವಿದ್ಯಾನಗರ ಪೊಲೀಸ್ ಠಾಣೆಯ 08192-262688 ನಂಬರ್‌ಗೆ ತಿಳಿಸಲು ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತುಂಗಭದ್ರಾ ನದಿಗೆ ನೀರು ಬಿಡುಗಡೆ

ದಾವಣಗೆರೆ: ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲೂಕು, ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರ್ತಿಕೋತ್ಸವ ಫೆ.14ರಂದು ನಡೆಯಲಿದ್ದು, ಜಾತ್ರೆಯಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸುತ್ತಿದ್ದು, ಜನರಿಗೆ ಅನುಕೂಲ ಕಲ್ಪಿಸಲು ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಫೆ. 5ರಿಂದ 11ರ ವರೆಗೆ ಒಟ್ಟು 5800 ಕ್ಯೂಸೆಕ್ಸ್ ನೀರು ಹರಿಸಲಾಗುವುದು. ಈ ಅವಧಿಯಲ್ಲಿ ನದಿಯಲ್ಲಿ ಸಾರ್ವಜನಿಕರು ಮತ್ತು ರೈತರು ತಿರುಗಾಡುವುದು, ದನಕರು ಮೇಯಿಸುವುದು ಮತ್ತು ತೋಟಗಾರಿಕೆ ಸಂಬಂಧಿಸಿದ ಕೆಲಸ ಮಾಡುವುದು ಹಾಗೂ ನದಿ ದಂಡೆಯಲ್ಲಿ ಪಂಪ್‌ಸೆಟ್ ಅಳವಡಿಸುವುದು ಮತ್ತು ಅನಧಿಕೃತವಾಗಿ ನೀರೆತ್ತುವುದನ್ನು ನಿಷೇಧಿಸಲಾಗಿದೆ ಎಂದು ಕ.ನೀ.ನಿ.ನಿ., ಭದ್ರಾ ಯೋಜನಾ ವೃತ್ತ ಅಧೀಕ್ಷಕ ಅಭಿಯಂತರರು ಹಾಗೂ ಭದ್ರಾ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಆರ್. ರವಿಚಂದ್ರ ತಿಳಿಸಿದ್ದಾರೆ.

ಮಡಿವಾಳರನ್ನು ಎಸ್ಸಿಗೆ ಸೇರಿಸುವಂತೆ ಒತ್ತಾಯ

ಹೊಸದುರ್ಗ: ಮಡಿವಾಳರನ್ನು ಪರಿಶಿಷ್ಟ ಜಾತಿಗೆ ಸೇರಿಸಲು ರಾಜ್ಯ ಸರಕಾರ ಕೂಡಲೇ ನಮ್ಮ ಕುಲಶಾಸ್ತ್ರೀಯ ವರದಿಯನ್ನು ಕೇಂದ್ರ ಸರಕಾರಕ್ಕೆ ವರದಿ ಕಳುಹಿಸಿ ಮಡಿವಾಳರಿಗೆ ಸಮಾಜಕ್ಕೆ ನ್ಯಾಯ ನೀಡಬೇಕು ಎಂದು ಶ್ರೀವೀರ ಮಡಿವಾಳ ಮಾಚಿದೇವ ಯುವಸೇನ ರಾಜ್ಯ ಕಾರ್ಯಾಧ್ಯಕ್ಷ ನಾಗತಿಹಳ್ಳಿ ಮಂಜುನಾಥ್ ಒತ್ತಾಯಿಸಿದರು. ಪಟ್ಟಣದ ಶ್ರೀವೀರ ಮಡಿವಾಳ ಮಾಚಿದೇವ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಡಿವಾಳ ಮಾಚಿದೇವ ಸಂಘದ ತಾಲೂಕು ಅಧ್ಯಕ್ಷ ಬಿ.ಆರ್.ರಾಮಕೃಷ್ಣ ಮಾತನಾಡಿ, ನಮ್ಮ ಮಡಿವಾಳ ಸಮಾಜ ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿದಿದೆ. ಅಭಿವೃದ್ಧಿಗೆ ನಮ್ಮ ಮಕ್ಕಳನ್ನ ವಿದ್ಯಾವಂತರನ್ನಾಗಿ ಮಾಡುವುದು ನಮ್ಮೆಲ್ಲರ ಕರ್ತವ್ಯ. ಯಾರು ಸಹ ಶಿಕ್ಷಣದಿಂದ ವಂಚಿತರಾಗಬಾರದು. ಸಮಾಜ ಸಂಘಟನೆ ಮಾಡಿ ಸಮಾಜ ಮುನ್ನಡೆಸುವ ಕೆಲಸವಾಗಬೇಕು ಎಂದರು. ನಿವೃತ್ತ ಶಿರಸ್ತೇದಾರ್ ಆರ್.ಜಯಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೆಲ್ಲೋಡು ಮಾಜಿ ಗ್ರಾ.ಪಂ ಸದಸ್ಯ ಎನ್.ಮಂಜಪ್ಪ, ಸಮಾಜದ ಮುಖಂಡರಾದ ಮಾಡದಕೆರೆ ರೇವಣ್ಣ, ಸ್ಟುಡಿಯೋ ಬಸವರಾಜ್, ನೇರಲಕೆರೆ ರಾಮಣ್ಣ, ಬಾಗೂರು ಮಲ್ಲೇಶಪ್ಪ, ನೇರಲಕೆರೆ ರಂಗನಾಥ್ ಸೇರಿ ಸಮಾಜದ ಮುಖಂಡರು ಹಾಜರಿದ್ದರು.

ವಿರಾಮ
ಪ್ರತಿ ಭಾನುವಾರ

ಮಡಿವಾಳ ಮಾಚಿದೇವ ಜಯಂತಿಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ

ವಚನ ಸಾಹಿತ್ಯ ಸಂರಕ್ಷಕ ಮಡಿವಾಳ ಮಾಚಿದೇವ

ಚಿತ್ರದುರ್ಗ: ವಚನ ಸಾಹಿತ್ಯದ ಸಂರಕ್ಷಕ ಮಡಿವಾಳ ಮಾಚಿದೇವ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಮಡಿವಾಳ ಮಾಚಿದೇವ ಜಯಂತಿ' ಆಚರಣೆ ಸಮಾರಂಭದಲ್ಲಿ ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

12ನೇ ಶತಮಾನದ ಬಸವಾದಿ ಶರಣರ ವಚನಗಳನ್ನು ಮಡಿವಾಳ ಮಾಚಿದೇವರು ಸಂರಕ್ಷಣೆ ಮಾಡಿದರ ಫಲವಾಗಿ ನಾವುಗಳು ಶಿವಶರಣರ ವಚನಗಳನ್ನು ಓದಲಿಕ್ಕೆ ಸಾಧ್ಯವಾಗಿದೆ. ಇದರ ಜತೆಗೆ ಮಡಿವಾಳ ಮಾಚಿದೇವರು ಸಹ ವಚನಗಳನ್ನು ರಚನೆ ಮಾಡುವ ಮೂಲಕ ಸಮಾಜದಲ್ಲಿನ ಅಂಕುಡೊಂಕು, ಮೌಢ್ಯ, ಕಂದಾಚಾರಗಳನ್ನು ತಿದ್ದಿ, ನೇರ-ನಿಷ್ಠುರವಾಗಿ ಹೇಳಿ ಸಮಾಜಕ್ಕೆ ಅಮೂಲ್ಯವಾದ ಸಂದೇಶ ನೀಡಿದ್ದಾರೆ. ಹಾಗಾಗಿ ಮಡಿವಾಳ ಮಾಚಿದೇವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಅವರ ದಾರಿಯಲ್ಲಿ ಸಾಗೋಣ ಎಂದು ಹೇಳಿದರು.

ಇತಿಹಾಸ ಸಂಶೋಧಕ ಹಾಗೂ ಪ್ರಾಧ್ಯಾಪಕ ಡಾ. ಎನ್.ಎಸ್.ಮಹಂತೇಶ್ ಉಪನ್ಯಾಸ ನೀಡಿ, ವಚನ ಸಾಹಿತ್ಯದಲ್ಲಿ ನೆಲಮೂಲ ಮಣ್ಣಿನ ಸಂಸ್ಕೃತಿ, ಸೊಗಡು, ಚರಿತ್ರೆ ಹಾಗೂ ಸಮಾಜದ ಬದುಕು ಸೇರಿಕೊಂಡಿರುವುದರಿಂದ ವಚನ ಸಾಹಿತ್ಯ ಪ್ರಸ್ತುತ ಹಾಗೂ ನಾಡಿನಲ್ಲಿ ಪ್ರಭಾವ ಬೀರಿದೆ. ವಚನ ಸಾಹಿತ್ಯದ ಆದ್ಯ ವಚನಕಾರ ಜೇಡರ ದಾಸಿಮಯ್ಯ, ವಚನ ಸಾಹಿತ್ಯ ಸಮೃದ್ಧಿ ಮಾಡಿದ ಬಸವಣ್ಣ ಹಾಗೂ ವಚನ ಸಾಹಿತ್ಯದ ಸಂರಕ್ಷಕ ಮಡಿವಾಳ ಮಾಚಿದೇವ ಅವರು ಬಹಳ ಮುಖ್ಯರಾಗುತ್ತಾರೆ ಎಂದು ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಮಾತನಾಡಿದರು.

ಚಿತ್ರದುರ್ಗ ತಾಲೂಕು ಪಂಡರಹಳ್ಳಿಯ ಗಂಜಿಗಟ್ಟೆ ಆರ್.ಕೃಷ್ಣಮೂರ್ತಿ ಮತ್ತು ತಂಡದವರು ಗೀತಗಾಯನ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ. ಗುರುನಾಥ, ನಗರಸಭೆ ಪೌರಾಯುಕ್ತೆ ಎಂ. ರೇಣುಕಾ, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ಬಿ.ರಾಮಪ್ಪ, ಕಾರ್ಯದರ್ಶಿ ಕೆ.ಆರ್. ಮಂಜುನಾಥ್, ನಿರ್ದೇಶಕರಾದ ಲಕ್ಷ್ಮಣ್, ರಂಗಸ್ವಾಮಿ, ಮಡಿವಾಳ ಮಾಚಿದೇವರ ದೇವಸ್ಥಾನ ಅಭಿವೃದ್ಧಿ ಸಮಿತಿ ಗೌರವ ಅಧ್ಯಕ್ಷ ಶಿವಲಿಂಗಪ್ಪ, ಅಧ್ಯಕ್ಷ ಟಿ.ರುದ್ರೇಶ್, ಮುಖಂಡರಾದ ರಂಗಸ್ವಾಮಿ, ಪರಶುರಾಮ್, ಪ್ರಕಾಶ್ ಸೇರಿದಂತೆ ಮಡಿವಾಳ ಸಮಾಜದ ಮುಖಂಡರು ಇದ್ದರು.

ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಸತ್ಯಾಗ್ರಹ

ಜಿಲ್ಲಾ ಸಮಿತಿಯಿಂದ ಒನಕೆ ಓಬವ್ವ ವೃತ್ತದ ಸಮೀಪ ನಡೆಸುತ್ತಿರುವ ಸತ್ಯಾಗ್ರಹ.

ಚಿತ್ರದುರ್ಗ: ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಶೋಷಿತರ ಜಿಲ್ಲಾ ಸಮಿತಿಯಿಂದ ಒನಕೆ ಓಬವ್ವ ವೃತ್ತದ ಸಮೀಪ ನಡೆಸುತ್ತಿರುವ ಸತ್ಯಾಗ್ರಹ ಮೂರನೆ ದಿನಕ್ಕೆ ಕಾಲಿಟ್ಟಿದೆ.

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಹಾಗೂ ಕಾಂತರಾಜ್ ವರದಿ ಜಾರಿಗೊಳಿಸಬೇಕು. ಚಿತ್ರದುರ್ಗ ನಗರದಲ್ಲಿನ ಮುಖ್ಯ ರಸ್ತೆಗಳ ಅಗಲೀಕರಣ, ವಸತಿ ರಹಿತರಿಗೆ ನಿವೇಶನ ಹಾಗೂ ಮನೆಗಳನ್ನು ಒದಗಿಸುವುದು. ಅರಣ್ಯ ಮತ್ತು ಕಂದಾಯ ಇಲಾಖೆಗೆ ಸೇರಿದ ಜಮೀನಗಳನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮಗೊಳಿಸಿ ಸಾಗುವಳಿ ಚೀಟಿ ನೀಡುವತನಕ ಸತ್ಯಾಗ್ರಹವನ್ನು ಹಿಂದಕ್ಕೆ ಪಡೆಯುವುದಿಲ್ಲವೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಸಿ.ಹೆಚ್.ಮಂಜುನಾಥ್ ಆಗ್ರಹಿಸಿದರು.

ಮಹಲಿಂಗಪ್ಪ, ಲಂಕೇಶ್, ದಾದಾಪೀರ್, ಶೋಭ, ಸಲ್ಮಾ, ನೇತ್ರಾವತಿ, ರೂಪ, ರೇಣುಕಮ್ಮ, ಜಯಮ್ಮ, ಮಮತ, ಸರೋಜಮ್ಮ, ಜಯಲಕ್ಷ್ಮಿ, ನೇತ್ರಾವತಿ, ಗೀತ, ಯಶೋಧ, ದೇವಮ್ಮ, ಪಾರ್ವತಮ್ಮ, ಅನ್ನಪೂರ್ಣ, ರಂಗಮ್ಮ, ಪ್ರಸನ್ನ, ರಂಜಿತ್ ಇನ್ನು ಅನೇಕರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಜಾಗೃತಿಗಾಗಿ ಹೋರಾಡಿದ ಧೀಮಂತ ಮಾಚಿದೇವ

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರಾಜೇಶ್ ಕುಮಾರ್ ಮಾತನಾಡಿದರು.

ಹಿರಿಯೂರು: ಸಮಾಜದಲ್ಲಿ ಜಾಗೃತಿಗಾಗಿ ಹೋರಾಡಿದ ಧೀಮಂತ ನಾಯಕ ಮಡಿವಾಳ ಮಾಚಿದೇವರ ಎಂದು ತಹಸೀಲ್ದಾರ್ ರಾಜೇಶ್ ಕುಮಾರ್ ಹೇಳಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಬಸವಣ್ಣನವರ ಮಾರ್ಗದಲ್ಲಿ ಸಾಗುವ ಮೂಲಕ ಹುಟ್ಟಿನಿಂದ ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಂದು ನಂಬಿದ್ದ ಮಡಿವಾಳ ಮಾಚಿದೇವರು ಸೋಮಾರಿಗಳು, ಬಡವರನ್ನು ಶೋಷಿಸುವವರು, ದುರ್ಗುಣ ಉಳ್ಳವರ ಬಟ್ಟೆಗಳನ್ನು ತಾನು ತೊಳೆಯುವುದಿಲ್ಲ ಎಂದು ಪಣತೊಟ್ಟು, ಅಂದಿನ ಸಮಾಜವನ್ನು ತಿದ್ದುವಂತಹ ಕೆಲಸ ಮಾಡಿದ ಮಹಾನ್ ಚೇತನ ಎಂಬುದಾಗಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಅಕ್ಷರದಾಸೋಹ ಸಹಾಯಕ ನಿರ್ದೇಶಕ ಮಹೇಶ್ವರರೆಡ್ಡಿ, ದೈಹಿಕ ಸಹಾಯಕ ನಿರ್ದೇಶಕ ರವೀಂದ್ರನಾಯ್ಕ್, ತಾಲ್ಲೂಕು ಮಡಿವಾಳ ಸಮಾಜದ ಅಧ್ಯಕ್ಷರಾದ ಪಿ.ಸಿದ್ದೇಶ್ವರ್, ಕಾರ್ಯದರ್ಶಿ ತಿಪ್ಪೇಸ್ವಾಮಿ, ಸಹಕಾರ್ಯದರ್ಶಿ ಡಿ.ತಿಪ್ಪೇಸ್ವಾಮಿ, ನಿವೃತ್ತ ಕೃಷಿ ಅಧಿಕಾರಿಗಳು ಟಿ.ನಿಂಗಪ್ಪ, ಮಾಜಿ ಅಧ್ಯಕ್ಷರಾದ ಎಸ್.ವಿ.ಸಿದ್ದಪ್ಪ, ವಿ.ಕೆ.ಗುಡ್ಡ ಮುಖಂಡರಾದ ಕೆ. ಲೋಕೇಶ್, ಮುಖಂಡರಾದ ಲಕ್ಕವ್ವನಹಳ್ಳಿ ತಿಪ್ಪೇಸ್ವಾಮಿ ಸದಾಶಿವ ಶಿಡ್ಲಯ್ಯನಕೋಟೆ, ಕೆಂಚಪ್ಪ, ಲಕ್ಷ್ಮೀಕಾಂತ್ ಪಿಡಿಕೋಟೆ, ನಾಗರಾಜ್, ಉಪನ್ಯಾಸಕರಾದ ಎನ್. ಬಸವರಾಜ್, ಶಿಕ್ಷಕ ಟಿ.ಎಸ್.ಶಶಿಧರ್, ಭಾರತ್ ಸೇವಾದಳ ಶ್ರೀನಿವಾಸ್ ರೆಡ್ಡಿ, ಸೇರಿದಂತೆ ಇತರರಿದ್ದರು.

ಕ್ಷಯಮುಕ್ತ ಭಾರತ ನಮ್ಮೆಲ್ಲರ ಗುರಿಯಾಗಲಿ

ಚಿತ್ರದುರ್ಗ ತಾಲೂಕಿನ ಪಂಡರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿ ಕ್ಷಯಮುಕ್ತ ನೂರು ದಿನಗಳ ಅಭಿಯಾನ ತೀವ್ರ ಪ್ರಚಾರ ಆಂದೋಲನ ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್ ಮಾತನಾಡಿದರು.

ಚಿತ್ರದುರ್ಗ: ಸಾರ್ವಜನಿಕ ಸ್ಥಳಗಳಲ್ಲಿ ಕೆಮ್ಮುವಾಗ ಸೀನುವಾಗ ಶಿಸ್ತು ಅನುಸರಿಸಿ ರೋಗ ಹರಡದಂತೆ ನೋಡಿಕೊಳ್ಳಿ. ಕ್ಷಯ ಮುಕ್ತ ಭಾರತ ನಮ್ಮೆಲ್ಲರ ಗುರಿಯಾಗಲಿ ಎಂದು ಚಿತ್ರದುರ್ಗ ತಾಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್ ಹೇಳಿದರು.

ಚಿತ್ರದುರ್ಗ ತಾಲೂಕಿನ ಪಂಡರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿ ಕ್ಷಯಮುಕ್ತ ನೂರು ದಿನಗಳ ಅಭಿಯಾನ ತೀವ್ರ ಪ್ರಚಾರ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕ್ಷಯ ರೋಗವು ಮೈಕೋ ಬ್ಯಾಕ್ಟೀರಿಯಾ ಟ್ಯೂಬರ್ ಕೀಲೋಸಿಸ್ ಎಂಬ ಸೂಕ್ಷ್ಮ ರೋಗಾಣುವಿನಿಂದ ಬರುತ್ತದೆ. ಕ್ಷಯ ರೋಗಿಗಳು ಕೆಮ್ಮಿದಾಗ ಅಥವಾ ಸೀನಿದಾಗ ಹೊರಬರುವ ತುಂತುರು ಹನಿಗಳ ಮೂಲಕ ರೋಗಾಣುಗಳು ವಾತಾವರಣದಲ್ಲಿ ಸೇರಿ ಗಾಳಿಯ ಮೂಲಕ ಆರೋಗ್ಯವಂತ ವ್ಯಕ್ತಿಯ ಶ್ವಾಸಕೋಶ ಸೇರಿ ಸೋಂಕು ಉಂಟುಮಾಡುತ್ತದೆ. ಕ್ಷಯರೋಗವನ್ನು ಬೇಗ ಪತ್ತೆ ಹಚ್ಚಿ ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ಪಡೆಯಿರಿ ಎಂದು ಹೇಳಿದರು.

ಕ್ಷಯರೋಗದ ಲಕ್ಷಣ:

14 ದಿನಗಳವರೆಗೂ ಇರುವ ಕೆಮ್ಮು, ಕೆಮ್ಮಿದಾಗ ಕಫದ ಜೊತೆ ರಕ್ತ ಬೀಳುವುದು, ತೂಕ ಕಡಿಮೆಯಾಗುವುದು, ಹಸಿವು ಆಗದಿರುವುದು ರಾತ್ರಿಯಲ್ಲೇ ಬೆವರುವುದು, ಈ ತರಹದ ಲಕ್ಷಣಗಳು ಕಂಡುಬಂದಲ್ಲಿ ಸಾರ್ವಜನಿಕರು ಹಿಂಜರಿಕೆ, ಸಂಕೋಚವನ್ನು ಬಿಟ್ಟು ತಿಳಿಸಬೇಕು. ಅಗತ್ಯ ವ್ಯಾಯಾಮ, ಪೌಷ್ಟಿಕ ಆಹಾರದ ಸೇವನೆ, ಕ್ಷಯರೋಗದ ವಿರುದ್ಧ ಹೋರಾಡಲು ಪ್ರಬಲ ಅಸ್ತ್ರವಾಗಿದೆ. ರೋಗಲಕ್ಷಣಗಳು ಕಂಡು ಬಂದಲ್ಲಿ ಪರೀಕ್ಷೆಗೆ ಒಳಪಡಿರಿ ಎಂದು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್. ಮಂಜುನಾಥ್ ಹೇಳಿದರು.

ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್.ಮಂಜುನಾಥ್ ಮಾತನಾಡಿ, ಕ್ಷಯ ಮುಕ್ತ ನೂರು ದಿನಗಳ ಅಭಿಯಾನ 2024ರ ಡಿ.07 ರಿಂದ ಪ್ರಾರಂಭವಾಗಿ 2025ರ ಮಾರ್ಚ್ 24 ರವರೆಗೆ ಜರುಗಲಿದೆ. ಈ ಸಮಯದಲ್ಲಿ ಎಲ್ಲಾ ಗ್ರಾಮಗಳಲ್ಲಿಯೂ ಆಶಾ ಕಾರ್ಯಕರ್ತೆಯರು ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳ, ಮನೆ ಮನೆ ಭೇಟಿ ನಡೆಸಿ ಕ್ಷಯರೋಗದ ಬಗ್ಗೆ ಮಾಹಿತಿ ಶಿಕ್ಷಣ ಸಂವಹನ ಜತೆಗೆ ಕರಪತ್ರ ನೀಡುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕ್ಷಯ ರೋಗ ವಿಭಾಗದ ಮೇಲ್ವಿಚಾರಣ ಅಧಿಕಾರಿ ಮಹೇಂದ್ರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಪಂಡರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಅಕ್ಷತಾ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಕೃಷ್ಣಪ್ಪ, ಸಿದ್ದೇಶ್, ಪ್ರವೀಣ್, ಹಿರಿಯ ಆರೋಗ್ಯ ಸುರಕ್ಷತಾ ಅಧಿಕಾರಿ ಜೆ.ಮಮತಾ, ಸಾರ್ವಜನಿಕರು ಇದ್ದರು.

ಚಿಗಟೇರಿ ಆಸ್ಪತ್ರೆಯಲ್ಲಿ ಸ್ವಚ್ಛತಾ ಅಭಿಯಾನ

ದಾವಣಗೆರೆ: ನಮ್ಮ ಆರೋಗ್ಯ, ನಮ್ಮ ಕೈಯಲ್ಲಿ ಪರಿಸರ ಸ್ವಚ್ಛವಾಗಿದ್ದರೆ, ಹರಡುವ ರೋಗ ತಡೆಗಟ್ಟಲು ಸಾಧ್ಯವಾಗಲಿದೆ ಎಂದು ಚಿಗಟೇರಿ ಜಿಲ್ಲಾ ಆಸ್ಪತ್ರೆ ಸರ್ಜನ್ ಡಾ. ಎಂ.ಬಿ.ನಾಗೇಂದ್ರಪ್ಪ ತಿಳಿಸಿದರು.

ಪಾಲಿಕೆ ಮತ್ತು ಚಿಗಟೇರಿ ಜಿಲ್ಲಾ ಆಸ್ಪತ್ರೆ ವತಿಯಿಂದ ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಆಂದೋಲನ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಸಾರ್ವಜನಿಕ ಆಸ್ತಿಗಳು, ರಸ್ತೆಗಳು ಮತ್ತು ಸಮಾಜವನ್ನು ಸ್ವಚ್ಛವಾಗಿಡುವುದು ಮತ್ತು ಇದರ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಆಂದೋಲನ ಅಭಿಯಾನ ಆಯೋಜಿಸಲಾಗಿದೆ. ಸ್ವಚ್ಛತೆಯಿಂದ ಸುತ್ತಮುತ್ತಲಿನ ಪರಿಸರದ ನೈರ್ಮಲ್ಯತೆ ಕಾಪಾಡಿಕೊಳ್ಳಬಹುದು. ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೇ ಸಂಗ್ರಹಣಾ ಸ್ಥಳಗಳಲ್ಲಿ ಹಾಕಬೇಕು. ಆಸ್ಪತ್ರೆ ಆವರಣದಲ್ಲಿ ಆಹಾರದ ತಿನಿಸು ಹಾಕಿ ಇನ್ನೊಬ್ಬರಿಗೆ ತೊಂದರೆಯಾಗುವ ರೀತಿ ಮಾಡುತ್ತಾರೆ. ಇದರಿಂದ ಹಲವಾರು ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತದೆ, ಆಸ್ಪತ್ರೆಗೆ ಬರುವ ಸಾರ್ವಜನಿಕರು ಜಾಗೃತರಾಗಬೇಕೆಂದರು. ಪಾಲಿಕೆಯ ಸದಸ್ಯ ಗಡಿಗುಡಾಳು ಮಂಜುನಾಥ, ಪಾಲಿಕೆಯ ಪೌರಕಾರ್ಮಿಕರು, ಆರೋಗ್ಯ ರಕ್ಷಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹರಿಹರ.
ಸಿ.ಆರ್.ಮಿಸ್. ನಂ: 598/2024
ಅರ್ಜಿದಾರರು : ಸತೀಶ್ ಕೆ.ವಿ. ತಂದೆ ಲೇಟ್ ವೀರಾಚಾರಿ, ವಯಸ್ಸು ಸುಮಾರು 31 ವರ್ಷ, ಕೂಲಿ ಕೆಲಸ ವಾಸ : ಭಾನುವಳ್ಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
-:ವಿರುದ್ಧ:-
ಎದುರುದಾರರು : ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಮಾನ್ಯ ತಹಶೀಲ್ದಾರ್ ರವರ ಕಛೇರಿ ಹರಿಹರ ತಾಲ್ಲೂಕು.
ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ತಂದೆಯಾದ ವೀರಾಚಾರಿ ತಂದೆ ಲೇಟ್ ನಂದ್ಯಪ್ಪಚಾರಿ ಇವರು ದಿನಾಂಕ: 08-10-2017 ರಂದು ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದ ಅವರ ಮನೆಯಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ ದಿನಾಂಕ: 07-03-2025 ರಂದು ಬೆಳಗ್ಗೆ 11-00 ಗಂಟೆಗೆ ತಾವಾಗಲಿ, ವಕೀಲರ ಮೂಲಕವಾಗಲಿ ಹಾಜರಿದ್ದು, ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು.
ನ್ಯಾಯಾಲಯದ ಅಪ್ಪಣೆ ಮೇರೆಗೆ ದಿ: 29-01-2025 ರಂದು ನೀಡಲಾಗಿದೆ.
ನ್ಯಾಯಾಲಯಾದ ಆದೇಶದ ಮೇರೆಗೆ
ಶಿರಸ್ತೇದಾರರು
ಸಿವಿಲ್ & ಪ್ರ.ದ.ನ್ಯಾ.ದಂ. ನ್ಯಾಯಾಲಯ, ಹರಿಹರ.
ಅರ್ಜಿದಾರರ ಪರ ವಕೀಲರು
ಪ್ರಭುಸ್ವಾಮಿ. ಬಿ.ಎಂ
ಸ್ಥಳ: ಹರಿಹರ
ದಿನಾಂಕ: 29-01-2025

ಕ್ಯಾನ್ಸರ್ ಜಾಗೃತಿ ಜಾಥಾ, ಕಿರುನಾಟಕ ಪ್ರದರ್ಶನ ನಾಳೆ

ದಾವಣಗೆರೆ: ಜಿ.ಎಂ. ವಿಶ್ವವಿದ್ಯಾಲಯ ಮತ್ತು ವಿಶ್ವರಾಧ್ಯ ಕ್ಯಾನ್ಸರ್ ಆಸ್ಪತ್ರೆ ಸಹಯೋಗದಲ್ಲಿ ಫೆ.4ರಂದು ಕ್ಯಾನ್ಸರ್ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಎಂ. ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ. ಗಿರೀಶ್ ಬೋಳಕಟ್ಟೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ಮೋತಿವೀರಪ್ಪ ಕಾಲೇಜು ಆವರಣದಿಂದ ಬೆಳಗ್ಗೆ 8:30ಕ್ಕೆ ಪ್ರಾರಂಭವಾಗುವ ಜಾಥಾಕ್ಕೆ ಜಿಎಂವಿ ಕುಲಪತಿ ಜಿ.ಎಂ. ಲಿಂಗರಾಜು ಚಾಲನೆ ನೀಡಲಿದ್ದು, ಜಾಥಾವು ವಿದ್ಯಾರ್ಥಿ ಭವನ, ಕೆಇಬಿ ವೃತ್ತ, ಜಯದೇವ ವೃತ್ತ ಮತ್ತು ಗಾಂಧಿ ವೃತ್ತದ ಮುಖಾಂತರ ಹೈಸ್ಕೂಲ್ ಮೈದಾನದಲ್ಲಿ ಅಂತ್ಯಗೊಳ್ಳಲಿದೆ. ಬೆಳಗ್ಗೆ 10:30ಕ್ಕೆ ಜಿಎಂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ಕ್ಯಾನ್ಸರ್ ಕುರಿತು ಜಾಗೃತಿ ಕಿರು ನಾಟಕ ಪ್ರದರ್ಶನ ನಡೆಯಲಿದೆ ಎಂದರು.

ಜಾಥಾದಲ್ಲಿ ಉಪ ಕುಲಪತಿ ಡಾ. ಎಸ್.ಆರ್. ಶಂಕಪಾಲ, ಸಹ ಉಪಕುಲಪತಿ ಡಾ. ಎಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಸುನೀಲ್ ಕುಮಾರ್ ಹಾಗೂ ವಿಶ್ವರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ನಿರ್ದೇಶಕ ಡಾ. ಜಗದೀಶ್ ತುಬಚಿ ಹಾಗೂ ಡಾ. ಎಂ.ಡಿ. ಅಜಯ್, ಜಿಲ್ಲಾ ಔಷಧ ನಿಯಂತ್ರಣ ಇಲಾಖೆಯ ಸಹಾಯಕ ಔಷಧಿ ನಿಯಂತ್ರಕ ಅಧಿಕಾರಿ ಎಂ.ಎಸ್. ಗೀತಾ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಹಪ್ರಾಧ್ಯಾಪಕರಾದ ಡಾ. ಮಹಮದ್ ಯೂಸೂಫ್, ಡಾ. ಮಹಮದ್ ಆಸೀಫ್, ಪ್ರತೀಕ್ಷಾ ಮತ್ತಿತರರಿದ್ದರು.

ಕ್ಯಾನ್ಸರ್ ಕುರಿತು ಜಾಗೃತಿ ನಡಿಗೆ

ದಾವಣಗೆರೆ: ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಕ್ಯಾನ್ಸರ್ ಕಾಯಿಲೆ ಕುರಿತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವಾರಾಧ್ಯ ಕ್ಯಾನ್ಸರ್, ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಎಸ್.ಎಸ್.ಕೇರ್ ಟ್ರಸ್ಟ್, ಬಾಪೂಜಿ ಎಜ್ಯುಕೇಷನಲ್ ಅಸೋಸಿಯೇಷನ್ ಸಹಯೋಗದೊಂದಿಗೆ ಭಾನುವಾರ ಇಲ್ಲಿನ ಗುಂಡಿ ವೃತ್ತದಿಂದ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಡಾ.ಅಮಿತ್ ಮಾತನಾಡಿ, ಫೆ. 4ರ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಇಂದು ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡುವ ಕುರಿತು ಸಾರ್ವಜನಿಕರು ಬಂದು ಪರೀಕ್ಷೆ ಮಾಡಿಸಿ ಕೊಳ್ಳಲಿ ಎಂಬ ಉದ್ದೇಶದಿಂದ ಈ ಕಾಲ್ನಡಿಗೆ ಜಾಥಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂಬ ಗಾದೆ ಮಾತಿನಂತೆ ಕ್ಯಾನ್ಸರ್ ಲಕ್ಷಣಗಳ ಬಗ್ಗೆ ಆರಂಭದ ಹಂತದಲ್ಲಿಯೇ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಮುಂದಾಗುವ ಅನಾಹುತ ತಡೆಯಲು ಸಾಧ್ಯ. ಕ್ಯಾನ್ಸರ್ ಮರವಾಗಿ ಬೆಳೆದಾಗ ಬಂದು ಪರೀಕ್ಷೆ ಮಾಡಿಸಿಕೊಂಡರೆ ಅದರ ಉಪಯೋಗ ಇರುವುದಿಲ್ಲ. ಎಲ್ಲರೂ ಮುಂದಿನ ದಿನಗಳಲ್ಲಿ ತಂಬಾಕು, ಗುಟ್ಕಾ, ಸೇವಿಸುವಂತಹವರಿಗೆ ತಾವುಗಳು ಮಾರ್ಗದರ್ಶನ ಮಾಡಿ ಹತ್ತಿರ ಇರುವ ಆಸ್ಪತ್ರೆಗಳಿಗೆ ತೆರಳಿ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿರಿ ಎಂದು ಹೇಳಿದರು.

ದಾವಣಗೆರೆಯಲ್ಲಿ ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಕ್ಯಾನ್ಸರ್ ಕಾಯಿಲೆ ಕುರಿತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತು.

> ನಾನು ಕ್ಯಾನ್ಸರ್ ಗೆದ್ದು 15 ವರ್ಷಗಳಾಗಿದೆ. ಇದಕ್ಕೆಲ್ಲಾ ವೈದ್ಯರೇ ಕಾರಣ. ಈ ಬಾರಿಯ ಥೀಮ್ ಕೂಡಾ ಅನನ್ಯತೆಯಿಂದ ಒಂದುಗೂಡಿಕೆ. ನಾವು ನಿಮ್ಮೊಂದಿಗೆ ಇದ್ದೇವೆ. ಕ್ಯಾನ್ಸರ್ ಭಯ ಬೇಡ ಎಂಬ ವೈದ್ಯರ ಸಲಹೆಯಂತೆ ಇಂತಹ ಒಂದು ಅಧ್ಯಾಯವನ್ನು ದಾಟಿಕೊಂಡು ನಾನು ಬಂದಿದ್ದೇನೆ. ನಮ್ಮ ಗುರಿ ಕ್ಯಾನ್ಸರ್ ಮುಕ್ತ ಭಾರತವಾಗಬೇಕು.
> -ಆರ್.ಟಿ. ಅರುಣಕುಮಾರ

ಈ ಜಾಥಾದಲ್ಲಿ ಡಿಎಚ್‌ಒ ಡಾ.ಷಣ್ಮುಖಪ್ಪ, ಎಸ್ ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಪ್ರಸಾದ್, ಎಸ್.ಎಸ್.ಕೇರ್ ಟ್ರಸ್ಟನ ಡಾ.ಲತಾ, ಡಾ.ನಾಗಪ್ರಕಾಶ್, ದಾವಣಗೆರೆ ಕ್ಯಾನ್ಸರ್ ಫೌಂಡೇಷನ್‌ನ ಡಾ. ಸುನಿಲ್ ಬ್ಯಾಡಗಿ, ಡಾ.ಮೂಗನಗೌಡ, ಡಾ. ಜಗದೀಶ, ಪ್ರಾಚಾರ್ಯರು, ಬೋಧಕರು, ವೈದ್ಯರು, ಸಿಬ್ಬಂದಿ ಇತರರು ಇದ್ದರು. ಜಯದೇವ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಲಾಯಿತು.

ಧರ್ಮಸ್ಥಳ ಸಂಘದ ಸದಸ್ಯೆಗೆ 2 ಲಕ್ಷ ಸಹಾಯ

ಹೊಸದುರ್ಗ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಹೊಸದುರ್ಗ ತಾಲೂಕು ಹಾಲುರಾಮೇಶ್ವರ ಯೋಜನಾ ಕಚೇರಿ ಜಾನಕಲ್ ವಲಯದ ಗೂಳಿಹಟ್ಟಿ ಗ್ರಾಮದಲ್ಲಿ ಧರ್ಮಸ್ಥಳ ಸಂಘದ ಸದಸ್ಯೆ ರತ್ನಮ್ಮ ಅವರ ಮನೆಯು ಮಳೆಯಿಂದಾಗಿ ಹಾನಿಯಾಗಿತ್ತು ಇದನ್ನು ಪರಿಶೀಲಿಸಿದ ಯೋಜನಾಧಿಕಾರಿ ಚಂದ್ರಶೇಖರ್ ಅವರು ಹಾನಿಗೊಳಗಾಗಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 10,000 ಸಹಾಯಧನ ನೀಡುವ ಜತೆಗೆ ಮನೆರಿಪೇರಿ ಮಾಡಿಕೊಳ್ಳಲು 2 ಲಕ್ಷ ಪ್ರಗತಿನಿಧಿ ನೀಡುವುದಾಗಿ ತಿಳಿಸಿದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಬಡವಿದ್ಯಾರ್ಥಿಗಳಿಗೆ ಸುಜ್ಞಾನನಿಧಿ ಶಿಷ್ಯವೇತನ, ಹಳ್ಳಿಗಳ ನೀರಿನ ಮೂಲಗಳಾದ ಕೆರೆ ಅಭಿವೃದ್ಧಿ ಕಾಮಗಾರಿ, ಶುದ್ಧಕುಡಿಯುವ ನೀರಿನ ಘಟಕ ಸ್ಥಾಪನೆ, ನಿರ್ಗತಿಕರಿಗೆ ಮಾಸಾಶನ ವಿತರಣೆ, ಶಾಲೆಕಾಲೇಜುಗಳ ದುರಸ್ತಿಗೆ ಸಹಾಯಧನ, ಗ್ರಾಮಗಳ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸಹಾಯಧನ, ಹಿಂದೂರುದ್ರಭೂಮಿಗಳ ಅಭಿವೃದ್ಧಿ, ಹಾಲಿನ ಸೊಸೈಟಿ ಅಭಿವೃದ್ಧಿ ಹೀಗೆ ಹಲವು ಕಾರ್ಯಕ್ರಮಗಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನೆರವು ನೀಡಲಾಗುತ್ತಿದೆ ಎಂದು ಯೋಜನಾಧಿಕಾರಿ ಚಂದ್ರಶೇಖರ್ ತಿಳಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಗೂಳಿಹಟ್ಟಿ ಕೃಷ್ಣಮೂರ್ತಿ, ಹಾಲಸಿದ್ದಪ್ಪ, ವಲಯ ಮೇಲ್ವಿಚಾರಕ ಲೋಕೇಶ್, ಸೇವಾ ಪ್ರತಿನಿಧಿ ಲಕ್ಷ್ಮಿ, ನೇತ್ರ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಘದ ಸದಸ್ಯರು, ಹಾಜರಿದ್ದರು.

ಸಂಘಟನೆ
ಸಂಸ್ಕಾರ
ಶಿಕ್ಷಣ
ಕ್ರಾಂತಿವೀರ ಬ್ರಿಗೇಡ್
ಕರ್ನಾಟಕ
ಶ್ರೀ ಸೋಮೇಶ್ವರಸ್ವಾಮೀಜಿ
ಮಕನಾಪುರ ಗುರುಪೀಠ
ಶ್ರೀ ಹುಲಜಂತಿ ಮಾಳಿಂಗರಾಯರು
ಶಾಖಾ ಮಹಲ್ ವಿಜಯಪುರ
ಶ್ರೀ ಮಾಧುಲಿಂಗ ಮಹಾರಾಜರು
ಸಿದ್ದಗೊಂಡ ಆಶ್ರಮ, ಜಕನೂರು
ಶ್ರೀ ಅಮರೇಶ್ವರ ಸ್ವಾಮೀಜಿ
ಸಿದ್ಧಶ್ರೀ ಆಶ್ರಮ, ಕವಲಗುಡ್ಡ
ಶ್ರೀ ಕೆಂಚರಾಯ ಪೂಜಾರಿಗಳು
ಸುರಪುರ
ಶ್ರೀ ಮಹಾವೀರ ಪ್ರಭು ಸ್ವಾಮೀಜಿ
ಶ್ರೀ ಅಲಮಪ್ರಭು ಮಠ
ಲಕ್ಷ್ಮಣ್ ಮುತ್ಯ
ಜಮಖಂಡಿ ಧರಿದೇವರ ಮಠ, ಆಲ್ಗೂರ್
ಪೂಜ್ಯ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ
ಸಿದ್ದಗಿರಿ ಮಠ ಕನೇರಿ, ಕೋಲ್ಲಾಪುರ
ಪೂಜ್ಯ ಶ್ರೀ ಸಿದ್ಧರಾಮಾನಂದಪೂರಿ ಸ್ವಾಮೀಜಿ
ಕಾಗಿನೆಲೆ ಮಹಾಸಂಸ್ಥಾನ, ಕನಕಗುರು ಪೀಠ,
ತಿಂಥಣಿ ಶಾಖಾ ಮಠ
ಕ್ರಾಂತಿವೀರ ಬ್ರಿಗೇಡ್
ಕರ್ನಾಟಕ
ಕೇಂದ್ರ ಕಾರ್ಯಾಲಯ, ಬೆಂಗಳೂರು
ವಿಭಾಗೀಯ ಕಾರ್ಯಾಲಯ, ವಿಜಯಪುರ
ಉದ್ಘಾಟನಾ ಸಮಾರಂಭ
ಶ್ರೀ ಜಗದೀಶ್ ಆನಂದ್ ಸ್ವಾಮೀಜಿ
ವರ್ಚಗಲ್ ಮಠ, ಲೋಕಾಪುರ
ದಿನಾಂಕ: 04-02-2025ರ ಮಂಗಳವಾರ ಬೆಳಗ್ಗೆ 11.00ಕ್ಕೆ
ಸ್ಥಳ: ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ
ಕ್ರಾಂತಿವೀರ ಬ್ರಿಗೇಡಿನ ರಾಜ್ಯ ಮುಖಂಡರುಗಳು :
ನಮ್ಮಕ್ರಾಂತಿ ವೀರ ಬ್ರಿಗೇಡಿನ ಪ್ರಮುಖ ಉದ್ದೇಶಗಳು
ನಮ್ಮ ನಾಡಿನ ಶ್ರದ್ಧಾ ಕೇಂದ್ರಗಳಾದ ಮಠ-ಮಂದಿರಗಳ ರಕ್ಷಣೆ ಹಾಗೂ ಅಭಿವೃದ್ಧಿಗೊಳಿಸುವುದು
ನಮ್ಮ ಹಿಂದೂಧರ್ಮದ ಸರ್ವಸಮಾಜದ ಪೂಜ್ಯಸ್ವಾಮೀಜಿಗಳನ್ನು ಗೌರವಿಸುವುದು.
ಹಿಂದುಳಿದ ಮತ್ತು ಶೋಷಿತ ಸಮಾಜದ ಸಮಾಜಿಕ ಸಮಾನತೆಗೆ ಶ್ರಮಿಸುವುದು
ಈ ಸಮುದಾಯಗಳ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಗೆ ಸಹಾಯ-ಸಹಕಾರ ನೀಡುವುದು
ಈ ಸಮುದಾಯಗಳ ಸಂಘಟನೆ ಹಾಗೂ ಸಂಸ್ಕಾರ ನೀಡಲು ಪ್ರ.ಶಿಕ್ಷಣ ಶಿಬಿರಗಳನ್ನು ಆಯೋಜಿಸುವುದು
ಸರ್ವರಿಗೂ ಆದರದ ಸ್ವಾಗತ
ಬನ್ನಿ.. ಭಾಗವಹಿಸಿ...
ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ...
ಶ್ರೀ ಕೆ. ಈ. ಕಾಂತೇಶ್
ಕಾರ್ಯಾಧ್ಯಕ್ಷರು
ಶ್ರೀ ಕೆ.ಎಸ್. ಈಶ್ವರಪ್ಪರವರು
ಮಾಜಿ. ಉಪ ಮುಖ್ಯಮಂತ್ರಿಗಳು
ರಾಜ್ಯ ಸಂಚಾಲಕರು
ಶ್ರೀ ಕೆ. ಮುಕುಡಪ್ಪ
ರಾಜ್ಯ ಸಂಚಾಲಕರು
ಶ್ರೀ ಗೂಳಿಹಟ್ಟಿ ಶೇಖರ್
ಮಾಜಿ.ಸಚಿವರು
ರಾಜ್ಯ ಸಂಚಾಲಕರು
ಶ್ರೀಮತಿ ಶಿಲ್ಪ ಕುದರಗೊಂಡ
ರಾಜ್ಯಾಧ್ಯಕ್ಷರು, ಮಹಿಳಾ ಘಟಕ
ಶ್ರೀ ಎಂಜೀರಪ್ಪ
ರಾಜ್ಯ ಸಂಚಾಲಕರು
ಶ್ರೀ ಬಸವರಾಜ ಬಾಳಿಕಾಯಿ
ರಾಜ್ಯಾಧ್ಯಕ್ಷರು